ಮಾನವಿಕ ಕರ್ಣಾಟಕ

ಸಂಪುಟ ೧೮ ; ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೮ ; ಸಂಚಿಕೆ ೧

೬೯

೧೯೮೮ ಜನವರಿ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೮

MANAVIKA KARNATAKA, Kannada Quarterly of the *University of Mysore*, Volume 18, Number 1, January 1988, Edited by Dr. M. V. Srinivas and M. N. Nanjundaraje Urs.

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ರೂ. ೧.೯೦

ಸಂಪಾದಕರು

ಡಾ॥ ಎಂ. ವಿ. ಶ್ರೀನಿವಾಸ್

ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮುದ್ರಕರು

ಎನ್. ಹನುಮಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ

ಮೈಸೂರು–೫೭೦ ೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಡಾ|| ಎಂ.ವಿ. ಶ್ರೀನಿವಾಸ್	ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು
೨.	ಡಾ|| ಕೃ ಪೊದುವಾಳ್	ಪ್ರವಾಚಕರು, ವಾಣಿಜ್ಯ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
೩.	ಡಾ|| ಕೆ. ಯಶೋಧರ	ಶಿಕ್ಷಣ ವಿಭಾಗ, ಮಾನಸಗಂಗೋತ್ರಿ, ಮೈಸೂರು
೪.	ಯಮುನಾಬಾಯಿ ಆರ್. ರಾವ್	'ಶ್ರೀ', ೪೦೯, ೧೨ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–೬
೫.	ಬಿ. ಜಿ. ಕನಕೇಶಮೂರ್ತಿ	ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೬.	ಎಚ್. ಪಿ. ದೇವಕಿ	ಅಧ್ಯಾಪಕರು, ಸಂಸ್ಕೃತ ವಿಭಾಗ, ಮಾನಸ ಗಂಗೋತ್ರಿ, ಮೈಸೂರು
೭.	ಪ್ರಭು ಖಾನಾಪುರೆ	ಕನ್ನಡ ಅಧ್ಯಾಪಕ, ಪದವಿ ಮಹಾ ವಿದ್ಯಾಲಯ, ಆಳಂದ, ಕಲಬುರ್ಗಿ–೫೮೫ ೩೦೨
೮.	ಡಾ|| ಹೆಚ್. ವಿ. ಶ್ರೀನಿವಾಸಮೂರ್ತಿ	ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು
೯.	ಸೀತಾರಾಮ ಜಾಗೀರ್‌ದಾರ್	ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೧೦.	ಡಾ|| ಆರ್. ಇಂದಿರಾ	ಪ್ರವಾಚಕರು ಮತ್ತು ಮುಖ್ಯಸ್ಥೆ, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೧೧.	ಎಂ. ಬಿ. ಸೋಮಣ್ಣ	ಸಂಶೋಧಕರು, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೧೨.	ಟಿ. ವಿ. ವೆಂಕಟಾಚಲ ಶಾಸ್ತ್ರೀ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೧೩.	ಯು ಎಸ್. ರಾಮಣ್ಣ	ಕ್ಯುರೇಟರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೧೪	ವೈ. ಸಿ. ಭಾನುಮತಿ	ಸಂಶೋಧನಾ ಸಹಾಯಕಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೧೫.	ಎನ್. ಉಷಾರಾಣಿ	ಮುಖ್ಯಸ್ಥರು, ಪತ್ರಿಕೋದ್ಯಮ ವಿಭಾಗ, ಮಾನಸಗಂಗೋತ್ರಿ, ಮೈಸೂರು
೧೬.	ಸಿ. ಎಸ್. ಶಾಮಲಾಂಬಿಕ	ಪ್ರವಾಚಕರು, ಇತಿಹಾಸ ವಿಭಾಗ, ಎ.ವಿ.ಕೆ. ಕಾಲೇಜು, ದಾವಣಗೆರೆ

ಡಾ. ಎಂ. ವಿ. ಶ್ರೀನಿವಾಸ್

ಡಾ. ನಾಗೇಂದ್ರ ಸಿಂಗ್

ಭಾರತಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ತಂದವರಲ್ಲಿ ನ್ಯಾಯ ಶಾಸ್ತ್ರಜ್ಞರಾದ ನಾಗೇಂದ್ರ ಸಿಂಗ್ ಬಹು ಮುಖ್ಯರಾದವರು. ಇವರು ನ್ಯಾಯಾಧೀಶ ರಾಗಿ, ನ್ಯಾಯಶಾಸ್ತ್ರಜ್ಞರಾಗಿ, ಲೇಖಕರಾಗಿ, ಸಂಶೋಧಕರಾಗಿ, ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದಾರೆ. ಅಂತರರಾಷ್ಟ್ರ ನ್ಯಾಯಾಲಯದಲ್ಲಿ (ಹೇಗ್) ನ್ಯಾಯಾಧೀಶರಾಗಿದ್ದು ಅದರ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ನಾಗೇಂದ್ರ ಸಿಂಗ್‌ರವರು ಭಾರತದಲ್ಲಿ ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಅನಂತರ ಜಗತ್ತಿನ ಅತ್ಯುಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಆರಿಸಲ್ಪಟ್ಟು ಅಲ್ಲಿ ತಮ್ಮ ವಿದ್ವತ್ತು ದಕ್ಷತೆಯನ್ನು ಪ್ರದರ್ಶಿಸಿ ಪ್ರಸಿದ್ಧಿಯನ್ನು ಪಡೆದರು 1908ರಲ್ಲಿ ಜನಿಸಿದ ನಾಗೇಂದ್ರ ಸಿಂಗ್‌ರವರು ವಿದ್ಯಾರ್ಥಿ ದೆಸೆಯಲ್ಲಿ ಪ್ರತಿಭಾವಂತರಾಗಿದ್ದು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸ್ಥಾನವನ್ನು ಗಳಿಸುತ್ತಾ ಬಂದರು. ಇವರು ರಾಜ ಮನೆತನಕ್ಕೆ ಸೇರಿದವ ರಾಗಿದ್ದರೂ ವಿದ್ಯಾಭ್ಯಾಸದಲ್ಲಿ ಅಪಾರವಾದ ಆಸಕ್ತಿಯನ್ನು, ಶ್ರದ್ಧೆಯನ್ನು ತೋರಿಸುತ್ತಾ, ಎಲ್ಲ ಪರೀಕ್ಷೆಗಳಲ್ಲಿಯೂ ಉನ್ನತ ಸ್ಥಾನವನ್ನು ಪಡೆಯುತ್ತಾ ಹೋದರು. ಮೆಯೋ ಕಾಲೇಜಿನಲ್ಲಿ 1930ರಲ್ಲಿ ಇವರು ಡಿಪ್ಲೊಮಾ ಪರೀಕ್ಷೆಯಲ್ಲಿ ವೈಸ್‌ರಾಯ್‌ರವರ ಚಿನ್ನದ ಪದಕವನ್ನು ಗಳಿಸಿದರು ಆಗ್ರಾದ ವಿಶ್ವವಿದ್ಯಾನಿಲಯ ದಲ್ಲಿ ಬಿ.ಎ. ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪದಕವನ್ನು ಪಡೆದ ನಂತರ ಕೇಂಬ್ರಿಡ್ಜ್‌ನಲ್ಲಿ ಎಲ್.ಎಲ್.ಬಿ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿದರು. ಅಭ್ಯಾಸದೊಂದಿಗೆ ಇವರು ಸಂಶೋಧನೆ ಹಾಗೂ ಬರವಣಿಗೆಯ ಕಾರ್ಯವನ್ನು ಜೊತೆಜೊತೆಯಾಗಿ ಕೈಗೊಂಡು ತಮ್ಮ ಗ್ರಂಥಗಳಿಗಾಗಿ ಕೇಂಬ್ರಿಡ್ಜ್‌ನ ಎಲ್.ಎಲ್.ಎಮ್. ಮತ್ತು ಎಲ್.ಎಲ್.ಡಿ. ಪದವಿಗಳನ್ನು ಪಡೆದರು. ಅನಂತರ ಡಬ್ಲಿನ್‌ನ ಎಲ್.ಎಲ್.ಡಿ. ಮಾಸ್ಕೋ ವಿಶ್ವವಿದ್ಯಾನಿಲಯದ ಡಿ.ಎಸ್‌ಸಿ. ಹಾಗೂ ದೆಹಲಿ, ಬಿಹಾರ್ ಮತ್ತು ಕಲ್ಕತ್ತಾ ವಿಶ್ವವಿದ್ಯಾನಿಲಯಗಳಿಂದ ಡಿ.ಲಿ.; ಡಿ.ಫಿಲ್ ಮೊದಲಾದ ಪದವಿಗಳನ್ನು ಪಡೆದರು. ಕೇಂಬ್ರಿಡ್ಜ್ ಮತ್ತು ಲಂಡನ್ನಿನ ವಿಶ್ವವಿದ್ಯಾ ನಿಲಯಗಳಿಂದ ಹಲವಾರು ಬಹುಮಾನಗಳನ್ನು ಪಡೆದರು. 1938ರಲ್ಲಿ ಇವರು

ಇಂಡಿಯನ್ ಸಿವಿಲ್ ಸರ್ವೀಸ್ ಆದರಲ್ಲಿ ಆಯ್ಕೆಯಾಗಿ ಸರ್ಕಾರದ ಹಲವಾರು ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಾ ಹೋದರು. ಸರ್ಕಾರಿ ನೌಕರರಾಗಿ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಂತೆಯೇ ಇವರು ಬಿಡುವಿಲ್ಲದಂತೆ ತಮ್ಮ ಸಂಶೋಧನೆ ಹಾಗೂ ಲೇಖನ ಕಾರ್ಯವನ್ನು ಮುಂದುವರೆಸಿದರು. ಅಂತರರಾಷ್ಟ್ರೀಯ ನ್ಯಾಯಶಾಸ್ತ್ರದಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆದಿದ್ದ ಇವರು ಆ ವಿಷಯಕ್ಕೆ ಸಂಬಂಧಿಸಿದಂತೆ ಲೇಖನಗಳನ್ನೂ, ಗ್ರಂಥಗಳನ್ನು ರಚಿಸಿದರು. ಡಾ. ನಾಗೇಂದ್ರಸಿಂಗ್‌ರವರು ರಾಜ್ಯಾಂಗರಚನಾ ಸಭೆಯ ಸದಸ್ಯರಾಗಿದ್ದು ಭಾರತದ ಸಂವಿಧಾನವನ್ನು ರೂಪಿಸಿದ ರೂವಾರಿಗಳಲ್ಲಿ ಒಬ್ಬರಾಗಿದ್ದಾರೆ. ಇವರು ಅನೇಕ ಸಂಶೋಧನ ಲೇಖನಗಳಲ್ಲದೆ 17 ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಬಹು ಮುಖ್ಯವಾದುವು, India and International Law, Termination of Membership of International Organisations; Nuclear weapons and International Law, Defence Mechanism of the Modern State, Maritime Flag and International Law, Commercial Law of India. ನಾಗೇಂದ್ರಸಿಂಗ್ ಅವರ ಪ್ರತಿಭೆಯನ್ನೂ ಪಾಂಡಿತ್ಯವನ್ನೂ ಗುರುತಿಸಿದ ಅನೇಕ ಭಾರತೀಯ ಹಾಗೂ ಅಂತರರಾಷ್ಟ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅಂತರ ರಾಷ್ಟ್ರೀಯ ನ್ಯಾಯಶಾಸ್ತ್ರದಲ್ಲಿ ಪರಿಣಿತರಾಗಿದ್ದ ಇವರನ್ನು ಭಾರತ ಸರ್ಕಾರವು ಹಲವಾರು ಅಂತರರಾಷ್ಟ್ರೀಯ ನ್ಯಾಯ ಸಮ್ಮೇಳನಗಳಿಗೂ ಹಾಗೂ ಸಭೆಗಳಿಗೂ ಪ್ರತಿನಿಧಿಯನ್ನಾಗಿ ಕಳುಹಿಸಿದ್ದಿತು. ಇವರು ವಿಶ್ವಸಂಸ್ಥೆಯ IMCO ಅಸೆಂಬ್ಲಿ ಅಧ್ಯಕ್ಷರಾಗಿಯೂ 55ನೆಯ Maritime Sessionನ್ನಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 1966 ರಿಂದ 72ರವರೆಗೆ ನಾಗೇಂದ್ರಸಿಂಗ್ ಭಾರತದ ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿಗಳಾಗಿದ್ದರು. ಇವರು ಎರಡು ವರ್ಷಗಳ ಕಾಲ ಭೂತಾನ್ ಸರ್ಕಾರಕ್ಕೆ ರಾಜ್ಯಾಂಗ ಸಲಹೆಗಾರರಾಗಿದ್ದರು. 1972ರಲ್ಲಿ ಡಾ. ನಾಗೇಂದ್ರಸಿಂಗ್‌ರವರು ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿ ಆರಿಸಲ್ಪಟ್ಟರು. 1976ರಿಂದ 79ರ ವರೆಗೆ ಈ ನ್ಯಾಯಾಲಯದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಡಾ. ನಾಗೇಂದ್ರಸಿಂಗ್‌ರವರು ಹಲವಾರು ವಿಶ್ವವಿದ್ಯಾನಿಲಯಗಳಿಗೂ ವಿಶ್ವದ ಪ್ರಸಿದ್ಧ ಸಮ್ಮೇಳನಗಳಿಗೂ ಭೇಟಿಕೊಟ್ಟು ಅಲ್ಲಿ ನ್ಯಾಯಶಾಸ್ತ್ರವನ್ನು ಕುರಿತು ವಿದ್ವತ್ಪೂರ್ಣ ವಾದ ಭಾಷಣಗಳನ್ನು ಮಾಡಿದ್ದಾರೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯ, ಮಾಸ್ಕೋ ವಿಶ್ವವಿದ್ಯಾನಿಲಯ ಮೊದಲಾದವು ಅವರಿಗೆ ಗೌರವ ಪದವಿಗಳನ್ನು ನೀಡಿ ಸನ್ಮಾನಿಸಿದೆ.

ನಾಗೇಂದ್ರಸಿಂಗ್ ಅವರ *Juristic concepts of Ancient Indian Polity* ಗ್ರಂಥವು ಅವರ ಆಳವಾದ ವಿದ್ವತ್ತು ಮತ್ತು ಅನುಭವವನ್ನು ಎತ್ತಿ ತೋರಿಸುವ ಕೃತಿಯಾಗಿದೆ. ಈ ಗ್ರಂಥದಲ್ಲಿ ಭಾರತದ ನಾಗರಿಕತೆಯ ನ್ಯಾಯಾಂಗ ತತ್ವಗಳು ಯುಗದಿಂದ ಯುಗಕ್ಕೆ ವಿಕಾಸಗೊಂಡ ಬಗೆಯನ್ನು ವಿವರಿಸಲಾಗಿದೆ. ವೇದಗಳ

ಕಾಲದಿಂದ ಮಗಧ ಸಾಮ್ರಾಜ್ಯದಲ್ಲಿ, ಗುಪ್ತರ ಆಡಳಿತದಲ್ಲಿ ನ್ಯಾಯಾಂಗ ಪದ್ಧತಿ ಬೆಳೆದು ಬಂದುದನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ. ನ್ಯಾಯಶಾಸ್ತ್ರದ ವಿವಿಧ ವಿಭಾಗಗಳನ್ನು ರಾಜ್ಯ ಸಂಸ್ಥೆಯ, ರಾಜಕೀಯ ಚೌಕಟ್ಟಿನಲ್ಲಿ ಅವರು ವಿವರಿಸುತ್ತಾರೆ. ಪ್ರಾಚೀನ ಭಾರತದ ನ್ಯಾಯ ಪದ್ಧತಿಗಳು ವೇದಗಳ ಕಾಲದಿಂದ ಆರಂಭವಾದ ಬಗೆ ಅನಂತರ ಸಾಮ್ರಾಜ್ಯಶಾಹಿ ಕಾಲದಲ್ಲಿ ಉಂಟಾದ ಪರಿವರ್ತನೆ ಮೌರ್ಯ ಯುಗದಲ್ಲಿ ಬೌದ್ಧ ಧರ್ಮದ ಪ್ರಭಾವ ಇವುಗಳನ್ನು ಗ್ರಂಥದಲ್ಲಿ ವಿವರಿಸಲಾಗಿದೆ. ಪ್ರಾಚೀನ ಕಾಲದ ನ್ಯಾಯ, ರಾಜ್ಯಾಂಗ ಹಾಗೂ ಆಡಳಿತ ತತ್ವಗಳನ್ನು ಇಂದಿನ ಕಾಲದಲ್ಲಿ ಅನುಸರಿಸುತ್ತಿದ್ದ ನ್ಯಾಯ ವಿಧಾನಗಳನ್ನು ಈ ಗ್ರಂಥದಲ್ಲಿ ಚರ್ಚಿಸಿದ್ದಾರೆ. ಭಾರತದ ಪ್ರಾಚೀನ ತತ್ವಶಾಸ್ತ್ರ, ನ್ಯಾಯಶಾಸ್ತ್ರ, ಧರ್ಮಶಾಸ್ತ್ರ ಗ್ರಂಥಗಳನ್ನು ಬಹು ಸೂಕ್ಷ್ಮ ವಾಗಿ ಪರಿಶೀಲಿಸುತ್ತಾ ಡಾ. ನಾಗೇಂದ್ರಸಿಂಗ್ ಅವರು ಭಾರತದಲ್ಲಿ ಧರ್ಮಪ್ರಜ್ಞೆಯು ಒಂದು ಜೀವಂತ ಶಕ್ತಿಯಾಗಿದ್ದಿತು ಎಂಬುದನ್ನು ಒತ್ತಿ ಹೇಳುತ್ತಾರೆ. ಹಲವಾರು ಪ್ರಾಚೀನ ಗ್ರಂಥಗಳನ್ನು ವಿಮರ್ಶಿಸಿ ಪ್ರಾಚೀನ ಭಾರತದಲ್ಲಿ ರಾಷ್ಟ್ರೀಯತೆಯು ಇರಲಿಲ್ಲವೆಂಬ ವಾದವನ್ನು ಅಲ್ಲಗಳೆಯುತ್ತಾರೆ. ರಾಜತ್ವದ ಮೂಲವನ್ನು ಚರ್ಚಿಸುತ್ತ ಭಾರತದಲ್ಲೂ ಯುರೋಪಿನಂತೆ ದೈವಶಕ್ತಿ ಸಿದ್ಧಾಂತವು ರಾಜತ್ವದ ಲಕ್ಷಣವಾಗಿದ್ದಿ ತೆಂದು ವಾದಿಸುತ್ತಾರೆ. ಈ ಸಂದರ್ಭದಲ್ಲಿ ಅವರು ಭಾರತ, ಯುರೋಪು ಹಾಗೂ ಇಸ್ಲಾಂ ರಾಜ್ಯಗಳ ತತ್ವಗಳು, ಪದ್ಧತಿಗಳನ್ನು ತುಲನಾತ್ಮಕವಾಗಿ ಚರ್ಚಿಸುತ್ತಾರೆ.

ಪುರಾತನ ಯುಗದ ತತ್ವಗಳನ್ನೂ, ಸಂಸ್ಥೆಗಳನ್ನೂ, ವಿವರಿಸುವುದಾದರೂ ಇವರ ಈ ಗ್ರಂಥವು ಭಾರತದಲ್ಲಿ ಗಣರಾಜ್ಯದ ತತ್ವಗಳನ್ನು ರಾಜಪ್ರಭುತ್ವದ ಮೇಲಿದ್ದ ನಿರ್ಬಂಧಗಳನ್ನು ವಿವರಿಸುವುದರಿಂದ ಇಂದಿನ ಕಾಲಕ್ಕೂ ಬಹು ಸಮಂಜಸ ವಾದ ಕೃತಿ ಎನಿಸಿಕೊಳ್ಳುತ್ತದೆ. ಪ್ರಾಚೀನ ಭಾರತದಲ್ಲಿ ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿದಂತೆ ಮಾನವೀಯತೆಯ ನಿಯಮಗಳನ್ನು ಚರ್ಚಿಸಿರುವುದು ಈ ಗ್ರಂಥದ ಮಹತ್ವಕ್ಕೆ ಮತ್ತೊಂದು ಮುಖ್ಯ ಕಾರಣವಾಗಿದೆ. ಇತ್ತೀಚಿನ ನ್ಯಾಯಶಾಸ್ತ್ರ ವಿಷಯಗಳ ಮೇಲಿನ ಚರ್ಚೆಗೆ ನಾಗೇಂದ್ರಸಿಂಗ್ ಅವರ ಬರವಣಿಗೆ ಮಾರ್ಗದರ್ಶಕ ವಾಗಿರುತ್ತದೆ.

ಸಕಲರ ಟೀಕೆಗಳನ್ನು ಸ್ವಾಗತಿಸು, ನಿನ್ನ ನಿರ್ಣಯವನ್ನು ಕಾಯ್ದಿರಿಸು.

—ಶೇಕ್ಸ್‌ಪಿಯರ್

ಪ್ರಪಂಚದ ನಿರ್ಣಯಗಳೇ ಪ್ರಪಂಚದ ಇತಿಹಾಸ.

—ಶಿಲ್ಲರ್

ಮುಗಿಲು ಹರಿದು ಬಿದ್ದರೂ ನ್ಯಾಯದಾನ ದೊರೆಯಬೇಕು.

—ವಿಲಿಯಂ ವಾಟ್ಸನ್

ನ್ಯಾಯ ದೊರತರಷ್ಟೇ ಸಾಲದು, ಅದು ದೊರೆತುದೆಂದು
ನಿಃಸಂಶಯವಾಗಿ ಮತ್ತು ಪ್ರಕಟವಾಗಿ ಕಂಡು ಬರಬೇಕು.

—ಗಾರ್ಡನ್ ಹೇವರ್ಟ್

ಡಾ. ಕೃ ಪೊದುವಾಳ್

ದಕ್ಷಿಣ ಕನ್ನಡ ಜಿಲ್ಲೆಯ ವಸ್ತುಗಳು ಹಾಗೂ ವಿದೇಶಿ ಮಾರುಕಟ್ಟೆಗಳು

ದಕ್ಷಿಣ ಕನ್ನಡ ಜಿಲ್ಲೆಯು ಗೃಹ ಕೈಗಾರಿಕೆಗಳ ತವರೂರು. ರಫ್ತು ವ್ಯವಹಾರ ಜಿಲ್ಲೆಯ ಆರ್ಥಿಕ ಉಸಿರಾಗಿ ವಿಶೇಷ ಅಧ್ಯಯನಕ್ಕೆ ಒತ್ತಾಸೆ ನೀಡಿದೆ. ಕರ್ನಾಟಕದ ಏಕೈಕ ಬೃಹತ್ ಹಾಗೂ ದೇಶದ ಒಂಬತ್ತನೆ ಪ್ರಮುಖ ಬಂದರನ್ನು ಹೊಂದಿರುವ ಜಿಲ್ಲೆಗೆ ರಾಜ್ಯದ ಆರ್ಥಿಕ ನಕ್ಷೆಯಲ್ಲಿ ಮಹತ್ತರ ಸ್ಥಾನ. ರಫ್ತು ಉದ್ದಿಮೆಗೆ ಜೀವ ನಾಡಿ ಜಿಲ್ಲೆಯನ್ನೆ ತವರಾಗುಳ್ಳ ಬ್ಯಾಂಕ್ ಉದ್ಯಮ.

ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಜಿಲ್ಲೆಯಿಂದ ರಫ್ತಾಗುವ ಇತರ ಜಿಲ್ಲೆಗಳ ವಸ್ತುಗಳು ಪ್ರಚಲಿತ ವಿದೇಶಿ ಮಾರುಕಟ್ಟೆಗಳಲ್ಲಿ ಯಾವ ಸ್ಥಾನಗಳಿಸಿವೆ? ಅವುಗಳ ರಫ್ತುವ್ಯಾಪಾರ ನಿರ್ವಹಣೆಯಲ್ಲಿ ಖಾಸಗಿ ಮತ್ತು ಸರ್ಕಾರಿ ವಲಯಗಳಲ್ಲಿ ಕಂಡು ಬರುವ ವ್ಯವಸ್ಥಾಪನ ಗುಣಗಳೇನು? ಜಿಲ್ಲೆಯ ಸ್ಥಿತಿಗತಿಗಳು ಯಾವ ರೀತಿಗಳಲ್ಲಿ ವಿದೇಶ ವಿನಿಮಯ ಗಳಿಕೆಗೆ ಒತ್ತಾಸೆ ನೀಡುತ್ತಲಿವೆ ಎಂಬ ಅಂಶಗಳ ಪಕ್ಷಿನೋಟ ಮತ್ತು ಸುಧಾರಣೆ ಹಾಗೂ ಪ್ರಗತಿಗಾಗಿ ಕೆಲವು ಅಭಿಪ್ರಾಯಗಳನ್ನು ಮಂಡಿಸುವುದು ಪ್ರಸ್ತುತ ಸಂಕ್ಷಿಪ್ತ ಲೇಖನದ ಉದ್ದೇಶ.

ಜಿಲ್ಲೆಯಿಂದ ನಿರ್ಯಾತವಾಗುವ ಮುಖ್ಯ ವಸ್ತುಗಳು, ಕಾಫಿ, ಸಂಸ್ಕರಿಸಿದ ಸಾಗರೋತ್ಪನ್ನ, ಹೆಂಚು, ಬೀಡಿ, ಗೇರುಬೀಜ ಹಾಗೂ ಗ್ರಾನೈಟ್ ಕಲ್ಲು, ಅಡಿಕೆ, ತೆಂಗಿನನಾರು ಮತ್ತು ನಾರಿನ ವಸ್ತುಗಳು, ತಂಬಾಕು, ಕಬ್ಬಿಣದ ಅದಿರು ಮತ್ತು ರಾಸಾಯನಿಕ ವಸ್ತುಗಳನ್ನು ಈ ಪಟ್ಟಿಗೆ ಸೇರಿಸಬಹುದು. ಜಿಲ್ಲೆಯಲ್ಲಿ ಉತ್ಪಾದಿಸಲ್ಪಡುವ ಅಥವಾ ತಯಾರಿಸಲ್ಪಡುವ ವಸ್ತುಗಳೊಂದಿಗೆ ಜಿಲ್ಲೆಯ ಮುಖಾಂತರ ರಫ್ತಾಗುವ ಜಿಲ್ಲೆಯ ಆರ್ಥಿಕತೆಯ ಮೇಲೆ ಪ್ರಭಾವ ಬೀರುವ ಇತರ ಜಿಲ್ಲೆಗಳ ವಸ್ತುಗಳನ್ನೂ ಪರಿಗಣಿಸಬಹುದು.

1979ರಲ್ಲಿ ನವಮಂಗಳೂರು ಬಂದರಿನಿಂದ ರಫ್ತಾದ ಮುಖ್ಯಪದಾರ್ಥಗಳ ಒಟ್ಟು ಮೌಲ್ಯ ಸುಮಾರು 150 ಕೋಟಿ ರೂ. ಗಳಿದ್ದು 1981 ಮಾರ್ಚಿಗೆ ಅದು

197 ಕೋಟಿಗೇರಿದೆ. ಪ್ರಸಕ್ತ ಬಂದರಿನ ಅಸೌಕರ್ಯಗಳಿಂದಾಗಿ ಕೊಚ್ಚಿನ್–ಮುಂಬಯಿ ಬಂದರುಗಳಿಂದ ರಫ್ತಾಗುವ ಜಿಲ್ಲೆಯ ಮತ್ತು ಜಿಲ್ಲೆಯ ಹಿನ್ನಾಡಿನ ಉತ್ಪನ್ನಗಳನ್ನು ಗಣನೆಗೆ ತೆಗೆದುಕೊಂಡಾಗ ಈ ಮೌಲ್ಯ ಇನ್ನೂ ಹೆಚ್ಚು.

ಸಾಗರೋತ್ಪನ್ನಗಳು :

ವಾರ್ಷಿಕ 12 ಕೋಟಿಯಿಂದ 20 ಕೋಟಿ ರೂ. ಮೌಲ್ಯದ ಶೀತಲ ಶ್ರಿಂಪ್ಸ್ ನವಮಂಗಳೂರು ಬಂದರಿನಿಂದ ನಿರ್ಯಾತಗೊಳ್ಳುತ್ತದೆ. ಇದು ದೇಶದ ಒಟ್ಟು ರಫ್ತು ಮೌಲ್ಯದ ಶೇ. 10ರಷ್ಟು.

ಮತ್ಸ್ಯಾಹಾರಿ ವಿದೇಶಿಗಳಿಗೆ ರಫ್ತಾಗುವ ಸಾಗರೋತ್ಪನ್ನ ಬರುವ ವರ್ಷಗಳಲ್ಲಿ ಗಣನೀಯ ಹೆಚ್ಚಳ ಹೊಂದಲಿದೆ ಎಂದು ಎಫ್. ಎ. ಓ. ಅಂದಾಜು. ಇದು ವಿಶ್ವ ಆಹಾರ ಸಮಸ್ಯೆಗೊಂದು ವರ. ಅಲ್ಲದೆ, ವಿದೇಶಗಳಲ್ಲಿ ಸಾಗರೋತ್ಪನ್ನ ಉತ್ಪಾದನೆ ಬಹು ವೆಚ್ಚದ್ದು. ಈ ಎರಡು ಅಂಶಗಳು ವಿದೇಶಿ ಬೇಡಿಕೆಯ ಹೆಚ್ಚಳಕ್ಕೆ ಪುಷ್ಟಿಯೀಯುತ್ತವೆ.

ನಮ್ಮ ಪ್ರಮುಖ ಮಾರುಕಟ್ಟೆಗಳು :

ಯು ಎಸ್. ಎ. ಹಾಗೂ ಜಪಾನು ; ಉಳಿದವು ಐರೋಪ್ಯ ದೇಶಗಳು. ಈಗೀಗ ಗಲ್ಫ್ ದೇಶಗಳು ಹಿಂದೆ ಒಣಗಿಸಿದ ಮತ್ಸ್ಯ ಪದಾರ್ಥ ರಫ್ತಾಗುತ್ತಿದ್ದರೆ ಈಗ ಅದರ ಸ್ಥಾನವನ್ನು ಶೈತ್ಯೀಕರಿಸಿದ ಮತ್ತು ಡಬ್ಬಗಳಲ್ಲಿ ತುಂಬಲ್ಪಟ್ಟ ಮತ್ಸ್ಯ ಪದಾರ್ಥ ಆಕ್ರಮಿಸಿದೆ.

ಉತ್ಪಾದನೆ, ಶೇಖರಣೆ ಹಾಗೂ ಇನ್ನಿತರ ವಿಷಯಗಳಲ್ಲಿ ಸಂಶೋಧನೆ ನಡೆಸುವ ಎಂಪಿಇಡಿಎ ಮಂಗಳೂರಲ್ಲಿ ಇತ್ತೀಚೆಗೆ ತನ್ನ ಶಾಖೆ ತೊಡಗಿದ್ದು ರಫ್ತುರಂಗದಲ್ಲಿ ಸ್ತುತ್ಯಕಾರ್ಯ. ಬಹು ಉತ್ಪಾದನೆಗೆ ದಾರಿ ಮಾಡುವ ಯಂತ್ರೋಪಕರಣ ಹಾಗೂ ಯಂತ್ರಚಾಲಿತ ಬೋಟುಗಳು ಬಂಡವಾಳ ಸಾಂದ್ರತೆಯುಳ್ಳವು, ಇದು ಸಾಧ್ಯವಾಗಬೇಕು. ಈ ದಿಶೆಯಲ್ಲಿ ಜಿಲ್ಲೆಯ ಮೀನುಗಾರಿಕೆ ಕಾಲೇಜು, ಕೆಎಫ್‌ಡಿಸಿ ಮೀನುಗಾರಿಕೆ ಇಲಾಖೆ ಮತ್ತು ಮೀನುಗಾರಿಕೆ ಬಂದರುಗಳ ಪಾತ್ರ ಗಣನೀಯ. ವಿದೇಶೀ ಬೇಡಿಕೆಯ ಮಟ್ಟಕ್ಕೆ ಸರಿಸಮನಾಗಿ, ಕೇರಳದ ಜಿಲ್ಲೆಗಳಂತೆ ಕರ್ನಾಟಕದ ದಕ್ಷಿಣ ಕನ್ನಡವು ತನ್ನ ಪಾಲನ್ನು ಇನ್ನೂ ಹೆಚ್ಚಾಗಿ ಸಲ್ಲಿಸಲು ಒಂದು ಸಮಗ್ರ ಯೋಜನೆಯು ಆವಶ್ಯಕತೆಯಿದೆ.

ಕಾಫಿ :

ಜಿಲ್ಲೆಯ ರಫ್ತಿನಲ್ಲಿ ಪ್ರಥಮ ಸ್ಥಾನ ಪಡೆದ ಕಾಫಿಯ ರಫ್ತು ಮೌಲ್ಯ ಸುಮಾರು 150 ಕೋ. ರೂ. ಐರೋಪ್ಯ ದೇಶಗಳು, ರಷ್ಯಾ, ಅಮೇರಿಕಾಗಳು ಮಾರುಕಟ್ಟೆಗಳು.

ಜಿಲ್ಲೆಯು ಕಾಫಿಯ ರಫ್ತಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕಾಫಿ ಮಂಡಲ, ಜಿಲ್ಲೆಯಲ್ಲಿ ಶಾಖೆಯನ್ನು ತೆರೆದು ವ್ಯವಸ್ಥಿತ ರಫ್ತುಜಾಲಕ್ಕೆ ಅನುವು ಮಾಡಿಕೊಟ್ಟಿದೆ

ಭಾರತದ ಕಾಫಿಗೆ ಐರೋಪ್ಯ ಆರ್ಥಿಕ ಸಮುದಾಯದಲ್ಲಿ ಮುಕ್ತ ತೆರಿಗೆ ಸೌಲಭ್ಯ ಪಡೆದ ಆಫ್ರಿಕಾ ಕಾಫಿಯೂ, ಅಮೇರಿಕಾದಲ್ಲಿ ಬ್ರೆಜಿಲ್‌ಕಾಫಿಯೂ ಪ್ರತಿ ಸ್ಪರ್ಧಿಗಳಾಗಿವೆ. ಉತ್ತಮ ಗುಣಮಟ್ಟ, ಬೆಲೆನಿಯಂತ್ರಣ ಹಾಗೂ ಕ್ಲುಪ್ತ ಸರಬರಾಜು ವ್ಯವಸ್ಥೆ ಪೈಪೋಟಿಗೆ ಸವಾಲಾಗಬೇಕು. ಜಪಾನಿನಲ್ಲಿ ಉತ್ತಮ ಬೇಡಿಕೆಯ ಸಾಧ್ಯತೆ ಇದೆಯೆಂಬುದು ಇತ್ತೀಚೆಗೆ ಅಲ್ಲಿಗೆ ಭೇಟಿಯಿತ್ತ ಪ್ರತಿನಿಧಿ ಸಮೂಹದ ಅಭಿಪ್ರಾಯ. ಜಪಾನಿನಂಥ ಹೊಸ ಮಾರುಕಟ್ಟೆಗಳ ಅನ್ವೇಷಣೆಗೆ ನಿರಂತರ ಕುಸಿಯುದ ರಫ್ತುಗಳಿಕೆಗೆ ಅವಕಾಶ ಕಲ್ಪಿಸುತ್ತದೆ.

ಗೇರು ಪದಾರ್ಥಗಳು :

ದೇಶದ ಪ್ರಮುಖ ವಾಣಿಜ್ಯ ಬೆಳೆಗಳಲ್ಲೊಂದಾದ ಗೇರುಬೀಜದ ಉತ್ಪಾದನೆ ಜಿಲ್ಲೆಯಲ್ಲಿ ವಿಪುಲ. ದಕ್ಷಿಣ ಕನ್ನಡ ಮತ್ತು ಕೇರಳದ ಕಣ್ಣಾನೂರು ಜಿಲ್ಲೆಗಳಲ್ಲಿ ಬೆಳೆದ ಗೇರು ಬೀಜವು ಜಗತ್ತಿನಲ್ಲಿಯೆ ಶ್ರೇಷ್ಠ. ರಾಷ್ಟ್ರದ ಗೇರು ಉತ್ಪಾದನೆಯಲ್ಲಿ ದ್ವಿತೀಯ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ದಕ್ಷಿಣ ಕನ್ನಡದ್ದೇ ಸಿಂಹಪಾಲು. ವಿಶ್ವ ಬ್ಯಾಂಕಿನ ನೆರವಿನಿಂದ ಕರ್ನಾಟಕದಲ್ಲಿ ಕೈಗೊಂಡಿರುವ ಪಂಚವಾರ್ಷಿಕ ಗೇರು ಬೆಳೆ ಅಭಿವೃದ್ಧಿ ಯೋಜನೆಯಲ್ಲಿ ಜಿಲ್ಲೆಯ ಐದು ಲಕ್ಷ ಹೆಕ್ಟೇರು ಭೂಮಿ ಸೇರಿದೆ.

ಕಾರ್ಖಾನೆಗಳು ಅನುಭವಿಸುತ್ತಲಿರುವ ಗೇರುಬೀಜ ಅಭಾವ ಸಮಸ್ಯೆ ಪರಿಹಾರಕ್ಕೆ ಮತ್ತು ವಸ್ತುವಿನ ವಿವಿಧ ಉಪಯೋಗಗಳನ್ನು ಕಂಡು ಹಿಡಿಯಲು ಕೆಎಫ್‌ಡಿಸಿ ಮತ್ತು ಕಾಫಿ ಮಂಡಲಗಳಂತೆ ಕರ್ನಾಟಕ ಗೇರುಅಭಿವೃದ್ಧಿ ಮಂಡಲದ ಸ್ಥಾಪನೆ ಯಾಗಬೇಕು ; ಗೇರು ರಫ್ತು ಅಭಿವೃದ್ಧಿ ಕೇಂದ್ರದ ಶಾಖೆಯೂ ಜಿಲ್ಲೆಗೆ ಅಗತ್ಯ

ಅಮೇರಿಕಾ, ಜಪಾನ್, ಇಂಗ್ಲೆಂಡ್, ರಷ್ಯಾ ಮತ್ತು ಐರೋಪ್ಯ ದೇಶಗಳಿಗೆ ರಫ್ತಾಗುವ ಗೇರು ಪದಾರ್ಥದ ವಾರ್ಷಿಕ ಮೌಲ್ಯ ಸುಮಾರು 6 ಕೋಟಿ ರೂ. ಆದರೆ, ಅದು ಇತ್ತೀಚಿನ ಅಧಿಕ ವಿದೇಶಿ ವಿನಿಮಯ ಗಳಿಕೆ ಬೆಲೆಯ ಹೆಚ್ಚಳದಿಂದ ಆದುದು, ಉತ್ಪಾದನಾ ಹೆಚ್ಚಳದಿಂದಲ್ಲ. 1975–76ರಿಂದ ರಷ್ಯಾ ಮತ್ತು ಅಮೆರಿಕಾಗಳಲ್ಲಿ ಬೇಡಿಕಾಮಟ್ಟ ಕುಸಿದ ಹಿನ್ನೆಲೆಯಲ್ಲಿ ಹೊಸ ಮಾರುಕಟ್ಟೆಗಳ ಅನ್ವೇಷಣೆಗೆ ತೊಡಗ ಬೇಕಾಗಿದೆ.

ತಂಬಾಕು ಮತ್ತು ಬೀಡಿ :

ಜಿಲ್ಲೆಯ ತಂಬಾಕು ರಫ್ತಿನ ವಾರ್ಷಿಕ ಮೌಲ್ಯ ಸುಮಾರು 6 ಕೋಟಿ ರೂ. ಜಪಾನು, ಜರ್ಮನಿ, ಇಂಗ್ಲೆಂಡ್, ಬೆಲ್ಜಿಯಂ ಪ್ರಮುಖ ಮಾರುಕಟ್ಟೆಗಳು. ತಂಬಾಕನ್ನು ಜಿಲ್ಲೆಯಲ್ಲಿ ಬೆಳೆಯಬಹುದೇ ಎಂಬುದರ ತಜ್ಞ ಪರೀಕ್ಷೆ, ಪರಿಶೀಲನೆ ನಡೆಯಬೇಕು

ತಂಬಾಕು ಮತ್ತು ಬೀಡಿ:

ಜಿಲ್ಲೆಯ ತಂಬಾಕು ರಫ್ತಿನ ವಾರ್ಷಿಕ ಮೌಲ್ಯ ಸುಮಾರು 6 ಕೋಟಿ ರೂ. ಜಪಾನು, ಜರ್ಮನಿ, ಯು. ಕೆ. ಬೆಲ್ಜಿಯಂ ಪ್ರಮುಖ ಮಾರುಕಟ್ಟೆಗಳು. ತಂಬಾಕನ್ನು ಜಿಲ್ಲೆಯಲ್ಲಿ ಬೆಳೆಯುವುದು ಸಾಧ್ಯವೆಂದಾದಲ್ಲಿ, ಉತ್ತಮ ವಾಣಿಜ್ಯ ರಫ್ತುವಸ್ತು ಇದಾಗುತ್ತದೆ.

ಜಿಲ್ಲೆಯಲ್ಲಿ ಬೀಡಿ ಉದ್ಯಮ ದ್ವಿತೀಯ ಸ್ಥಾನ ಪಡೆದಿದೆ. ದೇಶದ ವಾರ್ಷಿಕ ಉತ್ಪಾದನೆಯಾದ 20 ಲಕ್ಷ ರೂ. ಮೌಲ್ಯದ ಬೀಡಿಯಲ್ಲಿ ಸಿಂಹಪಾಲು ಜಿಲ್ಲೆಯದು. ದುಬಾಯಿ ಇನ್ನಿತರ ಮಧ್ಯಪೂರ್ವ ದೇಶಗಳು ಪ್ರಮುಖ ಮಾರುಕಟ್ಟೆಗಳು. ರಫ್ತು ಇತ್ತೀಚಿನ ವರುಷಗಳಲ್ಲಿ ಕುಸಿಯಲು ಮುಖ್ಯ ಕಾರಣಗಳು:

(1) ದಕ್ಷಿಣ ಪೂರ್ವ ಏಶ್ಯ ಹಾಗೂ ಪಶ್ಚಿಮ ಆಫ್ರಿಕಾಗಳಿಂದ ಭಾರತೀಯರ ಸ್ವದೇಶಾಸುಗಮನ.

(2) ಬೀಡಿಯನ್ನು ಆಮದು ಮಾಡಿಕೊಳ್ಳುವ ಶ್ರೀಲಂಕಾ, ಮಲೇಶಿಯಾಗಳಲ್ಲಿ ಸ್ವಂತ ಉದ್ಯಮವಾಗಿ ಬೀಡಿಯ ಬೆಳವಣಿಗೆ.

ಇದು ನಮ್ಮ ಅಂತಾರಾಷ್ಟ್ರೀಯ ಬೇಡಿಕೆಯನ್ನು ಮೊಟಕುಗೊಳಿಸಲಿದೆ.

ಬೀಡಿಯನ್ನು ಸಿಂಗಪುರ, ಮಲೇಶಿಯಾ ಮತ್ತು ನೇಪಾಳಗಳಲ್ಲಿ ಪ್ರಚುರಪಡಿಸಿ ಮಾರುಕಟ್ಟೆ ಬೆಳೆಸಬಹುದಾಗಿದೆ. ಜಿಲ್ಲೆಯ ಕೇಂದ್ರ ಹಾಗೂ ರೇವುಪಟ್ಟಣ ಮಂಗಳೂರಿನಲ್ಲಿ ಬೀಡಿ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿ, ಅಧ್ಯಯನ ಮಾರಾಟ, ವಾಣಿಜ್ಯ ಸಂದರ್ಶನಗಳಿಂದ ರಫ್ತು ಬೇಡಿಕಾ ಸಾಧ್ಯಾಸಾಧ್ಯತೆಗಳನ್ನು ಮನಗಾಣಬೇಕು.

ಹೆಂಚು:

ಹಳೆಯ ಹಾಗೂ ಹೊಸ ಮಂಗಳೂರು ಬಂದರುಗಳಿಂದ ರಫ್ತಾಗುವ ಹೆಂಚುಗಳ ವಾರ್ಷಿಕ ಮೌಲ್ಯ ಸುಮಾರು 2 ಕೋಟಿ ರೂ. ಕೊಲಂಬೊ, ದುಬಾಯಿ, ಕುವೈತ್ ಮತ್ತು ಆಫ್ರಿಕಾ ದೇಶಗಳು ವಿದೇಶಿ ಮಾರುಕಟ್ಟೆಗಳು.

ಜಿಲ್ಲೆಯಲ್ಲಿ ಪ್ರಥಮ ಸ್ಥಾನಗಳಿಸಿದ ಹೆಂಚಿನ ಉದ್ಯಮ ಅನೇಕ ಸಮಸ್ಯೆಗಳಿಂದ ಜರ್ಜರಿತ. ಜೇಡಿಮಣ್ಣಿನ ಅಭಾವ ಕಾರ್ಮಿಕ ವೆಚ್ಚ ಹೆಚ್ಚಳ ಮತ್ತು ಸೌದೆಯ ಕೊರತೆ; ತಯಾರಿಕೆಯಲ್ಲಿ ಆಧುನಿಕ ವಿಧಾನವನ್ನನುಸರಿಸಲು ಬಂಡವಾಳ ಕ್ಷಾಮಗಳೇ ಆ ಸಮಸ್ಯೆಗಳು.

ಗ್ರಾಹಕರ ಅಭಿರುಚಿಗೆ ಮತ್ತು ನೈಸರ್ಗಿಕ ಪರಿಸರಕ್ಕೆ ಹೊಂದಿಕೊಂಡರೆ ಅಭಿವೃದ್ಧಿಪರ ವಿದೇಶಗಳಲ್ಲಿ ಉತ್ತಮ ಬೇಡಿಕೆ ದೊರಕುವುದರಲ್ಲಿ ಸಂಶಯವಿಲ್ಲ.

ಅದಿರುಗಳು ಮತ್ತಿತರ ವಸ್ತುಗಳು :

ನವಬಂದರಿನಲ್ಲಿ ವಾರ್ಷಿಕ 7 ರಿಂದ 8 ದಶಲಕ್ಷ ಟನ್ನು ಕುದುರೆಮುಖದ ಅದಿರನ್ನು ಸಾಗಿಸಲು ಪ್ರತ್ಯೇಕ ದಕ್ಕೆಯ ನಿರ್ಮಾಣವಾಗಿದೆ. ಪ್ರಪ್ರಥಮ ರಫ್ತು ರುಮೇನಿಯಾಕ್ಕೆ ಸಾಗಿದೆ. ಬಂದರಿನ ಒಳನಾಡು 3,300 ದಶಲಕ್ಷ ಟನ್ನುಗಳಷ್ಟು ಕಬ್ಬಿಣ ಅದಿರು ನಿಕ್ಷೇಪ ಹೊಂದಿದ್ದರೂ 1976 ರಿಂದ ಈಚೆಗೆ ಅದಿರಿನ ಎತ್ತುವಿಕೆ ಎಂಎಂಟಿಸಿಯ ನಿರ್ಗಮನದಿಂದಾಗಿ ಬಹಳ ದುಃವಸ್ಥೆಗೂಳಗಾಗಿದೆ. ಎಂಎಂಟಿಸಿ ಉತ್ಸಾಹ ತಳೆದು ಬೃಹತ್ ನಿಕ್ಷೇಪ ಬಳಸಲು ಘಟಕವೊಂದನ್ನು ಬಂದರಿನಲ್ಲಿ ಸ್ಥಾಪಿಸಲೇ ಬೇಕಾಗಿದೆ.

ವಾರ್ಷಿಕ ಸುಮಾರು ಒಂದುವರೆಕೋಟಿ ರೂ. ಮೌಲ್ಯಕ್ಕೂ ಮಿಕ್ಕಿದ ಕ್ರೋಮೈಟ್ ಅದಿರು, 40 ಲಕ್ಷರೂ. ಮೌಲ್ಯದ ಮ್ಯಾಂಗನೀಸ್ ಅದಿರು ಜಪಾನಿಗೆ ರಫ್ತಾಗುತ್ತಿವೆ. 'ವಿದೇಶಿ ಆಕರ್ಷಣೆ' ಗ್ರಾನೈಟ್ ಕಲ್ಲು, ಜಪಾನ್, ಅಮೇರಿಕಾ, ಐರೋಪ್ಯ ದೇಶಗಳಿಗೆ ವರ್ಷಂಪ್ರತಿ ಸುಮಾರು 12 ಕೋಟಿ ರೂ. ಮೌಲ್ಯದ್ದು ರಫ್ತಾಗುತ್ತಿದೆ.

ಸುಮಾರು 30 ರಿಂದ 98 ಲಕ್ಷ ರೂ. ವಾರ್ಷಿಕ ಮೌಲ್ಯದ ಕಾಳು ಮೆಣಸು; ಗಲ್ಫ್ ದೇಶಗಳಿಗೆ, ಬೆತ್ತದ ಪೀಠೋಪಕರಣಗಳು; ವಾರ್ಷಿಕ 1 ಕೋಟಿ ರೂ. ಮೌಲ್ಯದ ಒಗೆಯುವ ತೊಳೆಯುವ ಪುಡಿ; ವಾರ್ಷಿಕ 1 ಲಕ್ಷ ರೂ. ಮೌಲ್ಯದ ಮೊಟ್ಟೆ, 15 ಲಕ್ಷ ರೂ. ಮೌಲ್ಯದ ಮೀನೆಣ್ಣೆ ಹಾಗೂ ಮೀನಾಹಾರ; ದುಬಾಯಿಗೆ ವಾರ್ಷಿಕ 1 ಕೋಟಿ ರೂ. ಮೌಲ್ಯದ ಶೀತಲ ಎಮ್ಮೆಮಾಂಸ ; ಐರೋಪ್ಯ ದೇಶಗಳಿಗೆ ವಾರ್ಷಿಕ 5 ಲಕ್ಷ ರೂ. ಮೌಲ್ಯಕ್ಕೂ ಮಿಕ್ಕಿದ ಹ್ಯಾಂಡ್‌ಲೂಂ, ಹತ್ತಿಬಟ್ಟೆ ಹಾಗೂ ಚೀಲಗಳು; ವಾರ್ಷಿಕ 4 ಕೋಟಿ ರೂ. ಮೌಲ್ಯದ ಲೆಡ್ ಆ್ಯಸಿಡ್ ಬ್ಯಾಟರಿ–ಇವು ರಫ್ತುಗಳು.

ಇವುಗಳಲ್ಲದೆ, ರಷ್ಯ ಗಲ್ಫ್‌ಗಳಿಗೆ ವಾರ್ಷಿಕ 50 ಲಕ್ಷ ರೂ. ಮೌಲ್ಯದ ಮೆಣಸು ಪದಾರ್ಥ ; ರಷ್ಯಕ್ಕೆ ವಾರ್ಷಿಕ 3 ಕೋಟಿ ಮೌಲ್ಯದ ಟೀ ರಫ್ತಾಗುತ್ತದೆ. ಜತೆಗೆ ರೋಸ್‌ವುಡ್, ಬೀಡುಗಬ್ಬಿಣ, ಗೋಡೆ ಗಡಿಯಾರ, ಹಣ್ಣು ಮತ್ತು ಬೋಟ್ ತಯಾರಿಕಾ ವಸ್ತುಗಳೂ ರಫ್ತಾಗುತ್ತಿವೆ. ಸುಮಾರು 60 ಲಕ್ಷ ರೂ. ಮೌಲ್ಯದ ಹಲಸಿನ ಚಿಪ್ಸ್ ವರ್ಷಂಪ್ರತಿ ಸಾಗಿ ಹೋಗುತ್ತಿದೆ.

ವಾರ್ಷಿಕ 250 ಟನ್ನು ಅಡಿಕೆ ನೇಪಾಳ ಮತ್ತಿತರ ದೇಶಗಳಿಗೆ ಸಾಗುತ್ತಿದೆ. ಅಡಿಕೆಯ ಬಹುಮುಖ ಉಪಯೋಗಗಳನ್ನು ಸಂಶೋಧಿಸಿದಲ್ಲಿ ಉತ್ತಮ ವಿದೇಶಿ ಬೇಡಿಕೆ ಸುಲಭಸಾಧ್ಯ. ಈ ದಿಕ್ಕಿನಲ್ಲಿ, ಕುಸಿದ ಬೆಲೆಗೆ ಪುರೋಗಾಮಿ ಸ್ಥಿರತೆಯತ್ತ ಕ್ಯಾಂಪ್ಕೋನ ಪಾತ್ರ ಉಲ್ಲೇಖನೀಯ.

ಬೆಂಗಳೂರಿನಲ್ಲಿರುವ ಕೇಂದ್ರೀಯ ತೆಂಗಿನ ನಾರು ಸಹಕಾರಿ ಮಾರುಕಟ್ಟೆ ಸಂಸ್ಥಾ ಶಾಖೆಯನ್ನು ಬೃಹತ್ ತೆಂಗು ಉತ್ಪಾದನೆಯ ದಕ್ಷಿಣ ಕನ್ನಡದಲ್ಲಿ ಒದಗಿಸಬೇಕು.

ರಫ್ತಿಗೆ ಇದು ಸಹಕಾರಿ. ತೆರಿಗೆಯುಕ್ತ ಐರೋಪ್ಯ ಆರ್ಥಿಕ ಸಮುದಾಯದಲ್ಲಿ ತೆಂಗು ನಾರಿನ ಉತ್ಪನ್ನಗಳಿಗೆ ಉತ್ತಮ ಬೇಡಿಕೆ.

ಜಿಲ್ಲೆಯಲ್ಲಿ ಕೋಕೋ ಬೆಳೆಯಲು ಸಾಧ್ಯವೇ ಎಂಬುದರ ತಜ್ಞ ಪರೀಕ್ಷೆ ಪರಿಶೀಲನೆ ನಡೆಯಬೇಕು. ಕೋಕೋಗೆ ಉತ್ತಮ ವಿದೇಶೀ ಮಾರುಕಟ್ಟೆ ಇದೆ. ಕೋಕೋಗೆ ಕ್ಯಾಂಪ್ಕೋ ತಳಹದಿಯಲ್ಲಿ ಒಂದು ಸಂಸ್ಥೆ ಅಗತ್ಯವಾಗಿ ಬೇಕು.

ಇನ್ನು ರಫ್ತಿನ ಅವಿಭಾಜ್ಯ ಅಂಗ, ನವಮಂಗಳೂರು ಬಂದರಿನ ಒಂದು ಕಿರುನೋಟ;

ಭವ್ಯ ಭವಿಷ್ಯ ಹೊಂದಿರುವ ಮಂಗಳೂರು ಪೋರ್ಟ್ ಟ್ರಸ್ಟ್‌ನ ಪ್ರಸಕ್ತ ಸಮಸ್ಯೆಗಳು:

ಆಗಾಗ್ಗೆ ಸಂಭವಿಸುವ ಕೂಲಿಗಾರರ ಸಂಪುಗಳು; ಅತೀ ಒತ್ತಡ; ದಕ್ಕೆಗಳ ಕೊರತೆ; ಹಡಗು ತಂಗಲು ತಕ್ಕ ಆಳವಿಲ್ಲದಿರುವಿಕೆ ಮತ್ತು ಇನ್ನಿತರ ಅಸೌಕರ್ಯಗಳು. ಮುಖ್ಯ ಬಂದರಾಗಲು 40,000 ದಿಂದ 60,000 ಡಿ.ಡಬ್ಲ್ಯು.ಟಿ. ಬೃಹತ್ ಸರಕು ಹಡಗುಗಳಿಗೆ ಅವಕಾಶವಾಗಬೇಕು ಇನ್ನು 3 ದಕ್ಕೆಗಳನ್ನಾದರೂ ನಿರ್ಮಿಸಿದರೆ ಸರಕು ಒತ್ತಡ ಪರಿಹಾರವಾದೀತು. ಅಭಿವೃದ್ಧಿಯೋಜನೆಯ ಕ್ಷಿಪ್ರ-ಕ್ರಿಯಾತ್ಮಕ ಅನುಷ್ಠಾನ ಜಿಲ್ಲೆಯ ರಫ್ತಿಗೆ ಚೇತೋಹಾರಿಯಾಗಬಲ್ಲುದು. ಮಲ್ಪೆ, ಕಾರವಾರ, ಭಟ್ಕಳ ಇತ್ಯಾದಿ ಬಂದರುಗಳು ಅಭಿವೃದ್ಧಿಗೊಂಡಾಗ, ಕೊಂಕಣ ರೈಲು ಮಾರ್ಗ ಸಿದ್ಧವಾದಾಗ ಮತ್ತು ಹಾಸನ-ಮಂಗಳೂರು ರೈಲು ಮಾರ್ಗ ಸರ್ವಋತು ಸಂಚಾರ ಸಾಗಾಟ ಯೋಗ್ಯವಾದಾಗ ಪ್ರಗತಿಗೆ ಗರಿ ಮೂಡುತ್ತದೆ.

ಕನಿಷ್ಟ ಬಂಡವಾಳ ಸಾಂದ್ರ ಅತ್ಯಧಿಕ ಲಾಭತ್ವದ ಗಲ್ಫ್ ದೇಶಗಳಲ್ಲಿ ಬೇಡಿಕೆ ಯಿರುವ ಶೇ. 100 ರಫ್ತಾಧರಿತ ಡಿಸ್ಟಿಲ್ಡ್ ವಾಟರ್ ಘಟಕವನ್ನು ಸ್ಥಾಪಿಸಲು ಬಂದರು ಟ್ರಸ್ಟ್ ಯೋಚಿಸಬಹುದಾಗಿದೆ. ಬಂದರು ಡ್ಯೂಟಿ ರಹಿತವೆಂದು ಘೋಷಿಸಲ್ಪಟ್ಟರೆ ಜಿಲ್ಲೆಯ ಚಿಕ್ಕಘಟಕಗಳಿಗೆ ಅಮಿತ ಪ್ರೋತ್ಸಾಹ ಸಿಗುವುದು.

ವಿದೇಶಿ ಮಾರುಕಟ್ಟೆ ಬೇಡಿಕೆಯ ಸಾಮರ್ಥ್ಯ ಹಾಗೂ ಅಪೇಕ್ಷಿತ ಗುಣಮಟ್ಟ, ಅಂತಾರಾಷ್ಟ್ರೀಯ ಸ್ಪೈರ್ಧೆ ಮಟ್ಟ, ಮಾರುವ ವಿಧಾನಗಳು, ಬೆಲೆ ನಿರ್ಣಯ ಹಾಗೂ ಅಭಿವೃದ್ಧಿ ದ್ಯೋತಕ ನೀತಿ ಸಂಹಿತೆ ರೂಪಿಸುವುದು, ಇವುಗಳನ್ನು ವಿವೇಚಿಸಿ ಮಾರುಕಟ್ಟೆಯ ದಕ್ಷ ಆಡಳಿತ ಕೈಗೊಳ್ಳುವುದು ರಫ್ತು ವ್ಯಾಪಾರದಲ್ಲಿ ಬಹುಮುಖ್ಯ. ಇದ್ದ ಬೇಡಿಕೆಗೆ ತಕ್ಕ ಸೀಡಿಕೆಯನ್ನು ವ್ಯವಸ್ಥಿಸಿ, ಪುಸ್ತಕ ಬೇಡಿಕಾ ಮಟ್ಟ ಹೆಚ್ಚಾಗಲು ಕೈಗೊಳ್ಳುವ ಪ್ರಾತ್ಯಕ್ಷಿಕ ಸಂಶೋಧನಾ ಪ್ರಯತ್ನಗಳು ಅವಶ್ಯಕ. ನಿಗಮ ಮಟ್ಟದಲ್ಲಿ ಇದು ಸಾಧ್ಯ, ಸಾಮಾಜಿಕ, ಆರ್ಥಿಕ ಮತ್ತು ಮಾನಸಿಕ ಸ್ತರಗಳ ಹಿನ್ನೆಲೆ ಯಲ್ಲಿ ಗ್ರಾಹಕ ಸ್ಪಂದನವನ್ನೆಳೆದಾಗ, ಉತ್ಪಾದಕರಿಗೆ ಮತ್ತು ರಫ್ತುದಾರರಿಗೆ ತಾವೆತ್ತ ಸಾಗಿದ್ದೇವೆ, ಎತ್ತ ಸಾಗಬೇಕೆಂಬುದು ನಿಚ್ಚಳ.

ಪ್ರತಿಯೊಂದು ಉದ್ದಿಮೆಗೂ ರಫ್ತು ಅಭಿವೃದ್ಧಿ ಘಟಕ ಒದಗಿದಾಗ ವಿವಿಧ ವಿದೇಶೀ ಮಾರುಕಟ್ಟೆಗಳನ್ನು ಪ್ರವೇಶಿಸುವುದು ಸಾಧ್ಯ. ಅದು ಶ್ಲಾಘ್ಯವೂ ಸಹ. ಏಕೆಂದರೆ, ಮಾರುಕಟ್ಟೆಯೊಂದರಲ್ಲಿ ಹಿಂಜರಿತ ತಲೆದೋರಲು ಬೇರೆ ಮಾರುಕಟ್ಟೆಗಳನ್ನು ಅವಲಂಬಿಸುವುದು ಸುಲಭಸಾಧ್ಯ. ಜಪಾನು ಯು.ಕೆ., ಯು ಎಸ್.ಎ., ಕೆನಡಾ ದೇಶಗಳು ಆಮದು ವಿಷಯದಲ್ಲಿ ಧಾರಾಳ ನೀತಿ ಹೊಂದಿರುವುದು ಇದಕ್ಕೆ ಇಂಬು ಗೊಡುತ್ತದೆ.

ಶೇಕಡಾ 20 ಕ್ಕೆ ಮೀರದ ದಾಸ್ತಾನು ವೆಚ್ಚ ರಫ್ತು ಘಟಕ ಹೊಂದಿರಬೇಕು. ಅಂತಾರಾಷ್ಟ್ರೀಯ ಕ್ರಯ ನಿರ್ಣಯದ ಪ್ರಕಾರ, ಉತ್ತಮ ಪ್ಯಾಕಿಂಗ್ ಇಲ್ಲದೆ ಶೇ. 10 ರಷ್ಟು ರಫ್ತು ನಿರುಪಯೋಗಿಯಾಗುತ್ತಿದೆ, ಹಡಗು ಸ್ಥಳಾಭಾವದಿಂದ ಶೇ. 15 ರಷ್ಟು ರಫ್ತು ವ್ಯಾಪಾರ ಸ್ಥಗಿತ ಗೊಳ್ಳುತ್ತಿದೆ ಎಂಬ ಅಂದಾಜುಗಳಿವೆ.

ಜಿಲ್ಲೆಯ ಬಹುತೇಕ ಎಲ್ಲ ವಿದೇಶೀ ಮಾರುಕಟ್ಟೆಗಳಲ್ಲೂ ಉತ್ತಮ ಬೆಳವಣಿಗೆ ಸೂಚಿಸುವ ಉನ್ನತ ಜೀವನಮಟ್ಟ, ಉನ್ನತ ನಿವ್ವಳ ಆದಾಯ, ಹಾಗೂ ಗರಿಷ್ಠ ಮಟ್ಟದ ವೈಯಕ್ತಿಕ ವೆಚ್ಚ ಪ್ರಮಾಣ ಕಂಡುಬರುತ್ತವೆ. ಇವುಗಳಿಗಾಗಿ ಜಿಲ್ಲಾ ರಫ್ತು ಘಟಕಗಳು ದೀರ್ಘ ಬೃಹತ್ ಕೂಡು ಬಂಡವಾಳ ಹೂಡುವುದು ಅನಿವಾರ್ಯ ಆವಶ್ಯಕತೆ. ಈ ದಿಶೆಯಲ್ಲಿ ಸಹಕಾರಿ ಮನೋಭೂಮಿಕೆ ಉತ್ತಮ.

ಉಪಸಂಹಾರ :

ಈ ಚಿಕ್ಕ ಆದರೆ ಚೊಕ್ಕ ಜಿಲ್ಲೆಯಲ್ಲಿ ಅಲ್ಲಲ್ಲಿ ಹರಡಿರುವ ಸಣ್ಣ ಆದರೆ ಸಮರ್ಥ ಘಟಕಗಳು ಈ ಮಹತ್ತರ ಆಶಯಗಳನ್ನು ಸಾಧಿಸಬಲ್ಲುವೆ ಎಂಬುದೊಂದು ಯಕ್ಷ ಪ್ರಶ್ನೆ. ಜಿಲ್ಲೆಯ ರಫ್ತುವ್ಯಾಪಾರ ಕೆಲವೇ ಕೆಲವು ಘಟಕಗಳ ಕೈಯಲ್ಲಿರುವುದೇ ಯಕ್ಷಪ್ರಶ್ನೆ! ಇದಕ್ಕೆ ಗುಣತ್ಯಾಜ್ಯವಾಗದೆ ಸಂಖ್ಯೆ ಅಧಿಕವಾಗಬೇಕು ; ಅನೇಕ ಘಟಕಗಳ ಆರೋಗ್ಯಕಾರಿ ಪೈಪೋಟಿಯತ್ತ ಸಹಭಾಗಿತ್ವದಿಂದ ಮತ್ತು ಸಹಕಾರ ದಿಂದ ಇದು ಸಾಧಿತವಾಗಬೇಕು. ಇಲ್ಲಿ ತಕ್ಕ ಮೂಲಭೂತ ರಚನಾ ಹಂದರ ಹಬ್ಬಿಸಲು ಘನ ಸರ್ಕಾರದ ವಿಪುಲ ಸಹಾಯ ಅತ್ಯಗತ್ಯ ಅಂದರೆ ಕೆಎಸ್‌ಟಿಡಿಸಿ, ಎಸ್‌ಟಿಎಸ್‌ಟಿ, ಕೆಎಸ್‌ಎಫ್‌ಸಿ, ಡಿಟಿಸಿ ಮುಂತಾದ ಸಂಸ್ಥೆಗಳ ವಿಚಕ್ಷಿತ ಪಾತ್ರ ಗಣನೀಯವಾಗುತ್ತದೆ. ಇದನ್ನೊಳಗೊಂಡ ಆಡಳಿತ ವ್ಯವಸ್ಥೆ ವಸ್ತುವಿಗೆ ತಕ್ಕ ವಿದೇಶೀ ಮಾರುಕಟ್ಟೆ ಆಯ್ಕೆಗೆ, ಯೋಗ್ಯ ಮಾರುಕಟ್ಟೆ ವಿಧಾನಗಳ ಆಯ್ಕೆಗೆ ಪರಿಸರ ಕಲ್ಪಿಸುತ್ತದೆ. ವಿದೇಶಿ ಗ್ರಾಹಕತ್ವದಲ್ಲಿ ಅಡಕವಾಗಿರುವ ಸಾಮಾಜಿಕ, ಮಾನಸಿಕ ಮತ್ತು ಆರ್ಥಿಕ ಅಂಶಗಳನ್ನೆಳೆಯುವ, ತಿಳಿಯುವ, ಅರಿಯುವ ಸಾಧ್ಯತೆ ಹೆಚ್ಚಿ ನಮ್ಮ ರಫ್ತು ವ್ಯವಹಾರ ಜಾಲ ವಾಸ್ತವಿಕ ಸ್ತರಗಳಲ್ಲಿ ಅರ್ಥವತ್ತಾಗುತ್ತದೆ. ಜಿಲ್ಲೆಯ ವಸ್ತುಗಳ ರಫ್ತು ಸಾಮರ್ಥ್ಯ ಅಧಿಕಗೊಳ್ಳುತ್ತದೆ ಮಾತ್ರವಲ್ಲ ಅದರ ಆರ್ಥಿಕ ಪ್ರಯೋಜನ ಸಾಮಾಜಿಕ ನ್ಯಾಯವನ್ನು ಪಡೆದು ಜಿಲ್ಲೆಯ ಪ್ರಗತಿಗೆ ಕಾರಣ ವಾಗುತ್ತದೆ.

ನನ್ನ ಅಭಿಪ್ರಾಯದಲ್ಲಿ 'ಶಿಕ್ಷಣ'ವೆಂದರೆ ನಿಜವಾದ ಅರ್ಥದಲ್ಲಿ 'ಶಿಕ್ಷಣ'ವೆಂಬುದಾಗಿದೆ. ಕೇವಲ ಹೆಣ್ಣುಗುಳಿತನವನ್ನು ಕಲಿಯುವುದಲ್ಲ. ಹೀಗೆ ಹೆಣ್ಣುಗುಳಿಯಾಗುವುದನ್ನು ಕಲಿಯುವುದು ತನ್ನ ಮಟ್ಟಿಗೆ ಒಳ್ಳೆಯದಾಗಿರಬಹುದು; ಆದರೆ ಅದು ನೈಜ ಅರ್ಥದಲ್ಲಿ ಶಿಕ್ಷಣವಲ್ಲ. ಶಿಕ್ಷಣಕ್ಕೆ ಪ್ರಧಾನವಾಗಿ ಎರಡು ಮುಖಗಳುಂಟು; ಒಂದು ಸಾಂಸ್ಕೃತಿಕ—ವ್ಯಕ್ತಿಯ ಬೆಳವಣಿಗೆಯನ್ನುಂಟುಮಾಡುವಂತಹುದು, ಇನ್ನೊಂದು ಉತ್ಪಾದಕ ವ್ಯಕ್ತಿಯನ್ನು ಕಾರ್ಯ ಮಾಡಲು ಹಚ್ಚುವಂತಹುದು. ಇವೆರಡೂ ಅತ್ಯವಶ್ಯಕ. ಪ್ರತಿಯೊಬ್ಬ ಉತ್ಪಾದಕನೂ ಉತ್ತಮ ನಾಗರಿಕನೂ ಆಗಿರಬೇಕಾಗುತ್ತದೆ ಎರಡನೆಯವರನ್ನು—ತನ್ನ ಗಂಡನನ್ನೇ ಆಗಲಿ—ಹೆಂಡತಿಯನ್ನೇ ಆಗಲಿ ಅವಲಂಬಿಸುವಂತಹ ಪರೋಪಜೀವಿ ಆಗಿರಬಾರದು.

—ನೆಹರೂ

ಭದ್ರವಾಗಿ ಸತ್ಯಪೂರ್ವಕ ಯೌವನದಲ್ಲಿ
ನೊಗ ಹೊರುವುದನ್ನು ನಮಗೆ ಕಲಿಸು.

—ರುಡ್‌ಯಾರ್ಡ್ ಕಿಪ್ಲಿಂಗ್

ಡಾ. ಕೆ. ಯಶೋಧರ

ಶಿಕ್ಷಣ ಇಲಾಖೆಯಲ್ಲಿ ಪಾರಿಭಾಷಿಕಗಳು

'ಆಡಳಿತ' ಕ್ಷೇತ್ರದ ವ್ಯಾಪ್ತಿಗೆ ಒಳಗೊಳ್ಳುವ ವಿವಿಧ ಇಲಾಖೆಗಳಂತೆ ಕಾರ್ಯ ಸ್ವರೂಪ, ವ್ಯಾಪ್ತಿ ಇತ್ಯಾದಿಗಳಲ್ಲಿ ಬಹಳಷ್ಟು ಮಟ್ಟಿಗೆ ವಿಭಿನ್ನವಾಗಿರುವ ಶಿಕ್ಷಣ ಇಲಾಖೆಯಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸುವಾಗ ಪರಿಗಣಿಸಬೇಕಾದ ಪಾರಿಭಾಷಿಕಗಳ ಬಗೆಗೆ ಚರ್ಚಿಸುವುದೇ ಈ ಲೇಖನದ ಉದ್ದೇಶ. ಮೊದಲಿಗೆ ಪಾರಿಭಾಷಿಕ ಎಂದರೇನು ? ಅವುಗಳ ಲಕ್ಷಣಗಳೇನು ? ಎಂಬುದರ ಬಗೆಗೆ ಸ್ಪಷ್ಟ ಪಡಿಸುವುದು ಉಚಿತ. ಚೇಂಬರ್ಸ್ ಪಾರಿಭಾಷಿಕ ಪದ ನಿಘಂಟಿನಲ್ಲಿ 'ಪಾರಿಭಾಷಿಕ' ಎಂಬುದನ್ನು ಈ ರೀತಿ ವ್ಯಾಖ್ಯಾನಿಸಲಾಗಿದೆ—"ಯಾವುದೇ ಮಾನವ ಚಟುವಟಿಕೆ ಅಥವಾ ನಿಸರ್ಗದ ಯಾವುದೇ ಮುಖಕ್ಕೆ ಸಂಬಂಧಿಸಿದ ಜ್ಞಾನಶಾಖೆಯೊಂದರಲ್ಲಿ ವಿದ್ವಾಂಸನಾಗಿರುವ ಅಥವಾ ಪರಿಣತನಾಗಿರುವ ವ್ಯಕ್ತಿಯೊಬ್ಬನ ದೃಷ್ಟಿಯಿಂದ ವಿಶೇಷ ಪ್ರಾಮುಖ್ಯ ಹಾಗೂ ಮೌಲ್ಯವುಳ್ಳ ಪದ ಅಥವಾ ವಾಕ್ಸರಣಿಯೆ ಪಾರಿಭಾಷಿಕ" ಇದಕ್ಕೆ ಇಂಗ್ಲೀಷಿನಲ್ಲಿ 'Technical term' (ಗ್ರೀಕ್ ಭಾಷೆಯ Technicos ಅಂದರೆ ಕಲೆಯ (of art) ಎಂಬರ್ಥ ಬರುವ ಪದದಿಂದ ಬಂದದ್ದು) ಎನ್ನುತ್ತಾರೆ. ಸರಳವಾಗಿ ಹೇಳುವುದಾದರೆ ಯಾವುದಾದರೊಂದು ಜ್ಞಾನಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾಗಿ ಬಳಕೆಯಾಗುವ ಭಾಷೆಯನ್ನು 'ಪರಿಭಾಷೆ' ಎಂದೂ ಪದಗಳನ್ನು 'ಪಾರಿಭಾಷಿಕ'ಗಳೆಂದೂ ಕರೆಯಲಾಗುತ್ತದೆ. ಯಾವುದೇ ಜ್ಞಾನ ಶಾಖೆಯಲ್ಲಾಗಲೀ ಅಮೂರ್ತ ಭಾವನೆಗಳು, ಸಂಕೀರ್ಣ ಪರಿಕಲ್ಪನೆಗಳು, ಜಟಿಲ ವ್ಯಾಖ್ಯಾನಗಳು, ವ್ಯಾಪಕ ವಿವರಣೆಗಳು, ಪದನಾಮ ಸೂಚಿಗಳು, ಸಿದ್ಧಾಂತಗಳು, ನಿಹಿತಾರ್ಥಗಳು ಇತ್ಯಾದಿ—ಇವುಗಳನ್ನು ನಿಖರವಾಗಿ, ನಿಷ್ಕೃಷ್ಟವಾಗಿ ಸಂಗ್ರಹವಾಗಿ ಅಭಿವ್ಯಕ್ತಿಗೊಳಿಸಲು ನೆರವಾಗುವ ಪದಗಳು ಅಥವಾ ಪದಗುಚ್ಛಗಳು ಅಂದರೆ ಸಂಕೀರ್ಣ ಭಾವನೆಗಳ ಸಂಕ್ಷಿಪ್ತವೂ ಅಭಿವ್ಯಂಜಕವೂ ಆದ ವಾಚಕ ಪ್ರತೀಕಗಳು ಎನ್ನಬಹುದು.

ಪಾರಿಭಾಷಿಕಗಳು ವಿಶಿಷ್ಟಾರ್ಥಗರ್ಭಿತವಾಗಿದ್ದು ನಿಖರತೆ, ಪಾರದರ್ಶಕತೆ, ಉತ್ಪಾದಕತೆ ಲಕ್ಷಣಗಳನ್ನು ಪಡೆದಿರುತ್ತವೆ. ನಿಶ್ಚಿತ ಸಂದರ್ಭಗಳಲ್ಲಿ ಅವುಗಳ

ಬದಲು ಪರ್ಯಾಯ ಪದಗಳನ್ನು ಬಳಸಲು ಅವಕಾಶವೇ ಇಲ್ಲವಾಗಿರುತ್ತದೆ. ಒಂದು ಭಾಷೆಯಲ್ಲಿ ಪಾರಿಭಾಷಿಕಗಳು ಸಹಜವಾಗಿ ದೊರೆಯದಿದ್ದಾಗ ಅವುಗಳನ್ನು ಕೃತಕವಾಗಿ ರಚಿಸಲಾಗುತ್ತದೆ, ಟಂಕಿಸಲಾಗುತ್ತದೆ ಹೀಗೆ ಮಾಡುವಾಗ ಸಾಮಾನ್ಯವಾಗಿ ಬಳಕೆಯಲ್ಲಿರುವ ಪದಗಳ ಅರ್ಥವನ್ನೇ ವಿಸ್ತರಿಸಬಹುದು, ಅನ್ಯಭಾಷೆಯಿಂದ ನೇರ ಪದಾನುವಾದ ಮಾಡಬಹುದು ಇಲ್ಲವೇ ಎರವಲು ಪಡೆಯಬಹುದು. ಜ್ಞಾನಸ್ಫೋಟದಿಂದಾಗಿ ಇಂದಿನ ಗಣಕಯಂತ್ರ ಹಾಗೂ ಸೆಟಲೈಟ್ ಯುಗದಲ್ಲಿ ಪ್ರತಿಯೊಂದು ಜ್ಞಾನಶಾಖೆಯಲ್ಲಿಯೂ ಪಾರಿಭಾಷಿಕಗಳು ನಾಗಾಲೋಟದಿಂದ ಆವಿಷ್ಕಾರಗೊಳ್ಳುತ್ತಿವೆ; ಹಲವಾರು ಭಾಷೆಗಳಲ್ಲಿಯೂ ರೂಪುಗೊಳ್ಳುತ್ತಿವೆ. ಹೀಗಿರುವಾಗ ನಮ್ಮ ಕರ್ನಾಟಕದಲ್ಲಿ ಈಗಾಗಲೇ ಶ್ರೀಮಂತವೆನಿಸಿರುವ ಇನ್ನಷ್ಟು ಶ್ರೀಮಂತಿಕೆಯನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕನ್ನಡವನ್ನು ರಾಜ್ಯದಾದ್ಯಂತ ಆಡಳಿತ ಭಾಷೆಯನ್ನಾಗಿಸಲು ಶ್ರಮಿಸುತ್ತಿರುವ ಹಾದಿಯಲ್ಲಿ ಪಾರಿಭಾಷಿಕಗಳ ರಚನೆ, ಅಂಗೀಕಾರ ಹಾಗೂ ಬಳಕೆಗೆ ಸಂಬಂಧಿಸಿದಂತೆ ಬಹಳಷ್ಟು ಕೃಷಿ ನಡೆಸುತ್ತಿರುವುದು ಸ್ತುತ್ಯಾರ್ಹವೇ. ಕಛೇರಿ (ಆಡಳಿತ) ವ್ಯವಹಾರಕ್ರಮ ಎಲ್ಲಾ ಇಲಾಖೆಗಳಲ್ಲಿಯೂ ಬಹುತೇಕವಾಗಿ ಒಂದೇ ಆಗಿದ್ದರೂ ವ್ಯವಹಾರ ವಿಷಯ ವಸ್ತು ಬೇರೆ ಬೇರೆಯಾಗಿರುವುದರಿಂದ ಒಂದೊಂದು ಇಲಾಖೆಯ ಪಾರಿಭಾಷಿಕಗಳು ಬೇರೆ ಬೇರೆಯಾಗುವ ಸಂಭವವುಂಟು ಅಂತೆಯೇ ಶಿಕ್ಷಣ ಇಲಾಖೆಯ ಪಾರಿಭಾಷಿಕಗಳೂ ವಿಶಿಷ್ಟವಾಗಿದ್ದು ಅವುಗಳ ವಿಚಾರಮಾಡುವುದು ಅಗತ್ಯವಾಗಿದೆ.

ಈ ಸಂದರ್ಭದಲ್ಲಿ 'ಶೈಕ್ಷಣಿಕ ಆಡಳಿತ' ಸಾರ್ವಜನಿಕ ಆಡಳಿತದಿಂದ ಭಿನ್ನವಾಗಿದೆ ಎಂಬುದನ್ನು ಮನದಟ್ಟುಮಾಡಿಕೊಳ್ಳುವುದು ಆವಶ್ಯಕ. ಶೈಕ್ಷಣಿಕ ಆಡಳಿತದ ಕೇಂದ್ರಬಿಂದು ಮಗು; ಗುರಿ ವ್ಯಕ್ತಿವಿಕಸನದಿಂದ ರಾಷ್ಟ್ರಾಭಿವೃದ್ಧಿ ಹಾಗೂ ಭಾವೈಕ್ಯತೆಯುಂಟುಮಾಡುವುದು ಅಂತೆಯೇ ಇದನ್ನು ಸಂಚಲನಾತ್ಮಕ ಚೇತನಪೂರ್ಣ ಸೇವಾಪ್ರಕ್ರಿಯೆ ಎಂದು ಪರಿಗಣಿಸಬಹುದಾಗಿದೆ. ಶೈಕ್ಷಣಿಕ ಗೊತ್ತುಗುರಿಗಳನ್ನು ಈಡೇರಿಸುವ ಉದ್ದೇಶ ಹೊಂದಿರುವ ಶೈಕ್ಷಣಿಕ ಆಡಳಿತದ ವ್ಯಾಪ್ತಿಯಲ್ಲಿ ಬೋಧನಾ–ಕಲಿಕೆ ಪ್ರಕ್ರಿಯೆಗಳಿಗೆ ಸೌಲಭ್ಯ ಒದಗಿಸುವುದು, ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿರುವ ಸಿಬ್ಬಂದಿವರ್ಗದವರ ಕಾರ್ಯ ವಿಚಕ್ಷಣತೆಯ ಮೇಲ್ವಿಚಾರಣೆ ನಡೆಸುವುದು, ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸೂಕ್ತ ಮಾರ್ಗದರ್ಶನ ನೀಡುವುದು, ಅಲ್ಲಿನ ಕಾರ್ಯಚಟುವಟಿಕೆಗಳನ್ನು ನಿರ್ಧರಿಸಿ ಅವುಗಳಿಗೆ ಸೌಲಭ್ಯ ಒದಗಿಸಿ ಅಲ್ಲಿನ ಕಾರ್ಯಕರ್ತರಲ್ಲಿ ಸೌಹಾರ್ದವೇರ್ಪಡಿಸುವುದು, ಪ್ರಗತಿಗೆ ಸಹಾಯಕವಾಗುವ ಯೋಜನೆಯನ್ನು ಸಿದ್ಧಗೊಳಿಸುವುದು, ಸಮರ್ಥ ನಿರ್ದೇಶನ ನೀಡುವುದು, ಯೋಗ್ಯ ಸಿಬ್ಬಂದಿವರ್ಗ ನೇಮಿಸುವುದು ಹಾಗೂ ತರಬೇತಿ ನೀಡುವುದು, ಶೈಕ್ಷಣಿಕ ವಿಷಯಗಳಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಂತೆ ಮಾಡುವುದು, ಸಾಧನೆಯನ್ನು ಮೌಲ್ಯಮಾಪನ ಮಾಡುವುದು ಇತ್ಯಾದಿ ಸೇರುತ್ತವೆ. ಒಟ್ಟಿನಲ್ಲಿ ಉದ್ದಿಷ್ಟ ಶೈಕ್ಷಣಿಕ

ಗುರಿ ತಲುಪಲು ಅತ್ಯಾವಶ್ಯಕವಾದ ಶೈಕ್ಷಣಿಕ ಮುಖಂಡತ್ವವೇ ಶೈಕ್ಷಣಿಕ ಆಡಳಿತ ಎನ್ನಬಹುದು.

ಶೈಕ್ಷಣಿಕ ಆಡಳಿತಕ್ರಮಗಳನ್ನು ಪ್ರಮುಖವಾಗಿ ಎರಡು ವರ್ಗಗಳಲ್ಲಿ ವಿಂಗಡಿಸಬಹುದು.

1. ಕಾರ್ಯ ನಿರ್ವಹಣಾ ಕಾರ್ಯಗಳು
2. ಬೋಧನಾ-ಕಲಿಕೆ ಕಾರ್ಯಗಳು

ಮೊದಲನೆಯದು ಶೈಕ್ಷಣಿಕ ವಿಧಿಗಳ ರಚನೆ, ಯೋಜನೆ, ಹಣ ಒದಗಿಸುವಿಕೆ, ಮೇಲ್ವಿಚಾರಣೆ, ಸಿಬ್ಬಂದಿವರ್ಗ ನೇಮಕಾತಿ, ನಿಯಂತ್ರಣ ಹಾಗೂ ನಿರ್ದೇಶನ, ಇತರೆ ಸಹಾಯ ವ್ಯವಸ್ಥೆಗೆ ಸಂಬಂಧಿಸಿದ್ದರೆ ಎರಡನೆಯದು ಪಠ್ಯರಚನೆ, ತರಬೇತಿ ವ್ಯವಸ್ಥೆ, ಶಿಕ್ಷಕ-ವಿದ್ಯಾರ್ಥಿಗಳ ಕಲ್ಯಾಣಾಭಿವೃದ್ಧಿ, ದೃಕ್‌ಶ್ರವಣೋಪಕರಣಗಳು ಹಾಗೂ ಇತರೆ ಕಲಿಕಾಸಾಮಗ್ರಿಗಳ ತಯಾರಿಕೆ, ಸಮೂಹ ಮಾಧ್ಯಮಗಳ ಉಪಯೋಗ, ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಯೋಜನೆಗಳು, ಮೌಲ್ಯಮಾಪನ ವ್ಯವಸ್ಥೆ ಇತ್ಯಾದಿ ಒಳಗೊಂಡಿರುತ್ತದೆ. ಆಡಳಿತದಲ್ಲಿ ಭಾಗಿಯಾಗುವವರು ಈ ಎರಡೂ ವರ್ಗಗಳಲ್ಲಿಯೂ ಕೆಲಸ ನಿರ್ವಹಿಸಬೇಕಾಗಬಹುದು. ಆದುದರಿಂದ ಇವರಿಗೆ ಇತರೆ ಇಲಾಖೆಗಳಲ್ಲಿರುವವರಂತೆ ಕೇವಲ ಪತ್ರವ್ಯವಹಾರಕ್ಕೆ ಸೀಮಿತವಾದ ಭಾಷೆಯಷ್ಟೇ ತಿಳಿದಿದ್ದರೆ ಸಾಲದು. ಆಧುನಿಕ ಶಿಕ್ಷಣಕ್ರಮಗಳಲ್ಲಿ ಉಂಟಾಗುತ್ತಿರುವ ಬದಲಾವಣೆ, ಧ್ಯೇಯಧೋರಣೆಗಳು, ವೈಜ್ಞಾನಿಕ ಹಾಗೂ ತಾಂತ್ರಿಕಜ್ಞಾನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಪರಿಭಾಷೆ ಅರಿವು ಇರಬೇಕು; ಹೊಸ ಹೊಸದಾಗಿ ಆವಿಷ್ಕಾರಗೊಳ್ಳುವ ಪಾರಿಭಾಷಿಕಗಳ ತಿಳುವಳಿಕೆ ಸ್ಪಷ್ಟವಾಗಿರಬೇಕು.

ಜನಸಾಮಾನ್ಯರಲ್ಲಿ 'ವಿದ್ಯೆ' ಎಂದಷ್ಟೇ ಅರ್ಥಪಡೆದಿರುವ 'ಶಿಕ್ಷಣ' ಎಂಬ ಪದ ಶಿಕ್ಷಣತಜ್ಞರಿಗೆ ಪಾರಿಭಾಷಿಕ ಶಬ್ದವಾಗಿದ್ದು ಒಂದು ಪ್ರಾಯೋಗಿಕ ಚಟುವಟಿಕೆ, ಪ್ರಕ್ರಿಯೆಗಳ ಸಮೂಹ, ಅಧ್ಯಯನಕ್ಷೇತ್ರ/ಶಾಸ್ತ್ರ ಎಂದೆಲ್ಲಾ ಅರ್ಥಪಡೆದು ನಿರ್ದಿಷ್ಟವಾಗಿ ಇಂತಿದೇ ಶಿಕ್ಷಣ ಎಂದು ಹೇಳಲಾಗದಷ್ಟರಮಟ್ಟಿಗೆ ವ್ಯಾಪಕವಾಗಿದೆ. 'ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ' ಎನ್ನುವಷ್ಟರಮಟ್ಟಿಗೆ ಸರ್ವವ್ಯಾಪಕವಾಗಿರುವ ಈ ಕ್ಷೇತ್ರದಲ್ಲಿ ಪಾರಿಭಾಷಿಕಗಳ ಬಗೆಗಿನ ಚರ್ಚೆಗೆ ಕೊನೆಯೇ ಇಲ್ಲದಂತಾಗಬಹುದು. ಈ ಕಾರ್ಯಾಗಾರದಲ್ಲಿ ಬೇರೆ ಬೇರೆ ಎಂದು ಗುರುತಿಸಿರುವ ಎಲ್ಲಾ ಕ್ಷೇತ್ರಗಳೂ ಈ ಶೀರ್ಷಿಕೆ ಅಡಿಯಲ್ಲಿಯೇ ಬರಬಹುದಾಗಿದೆ—ಕಾನೂನು ಶಿಕ್ಷಣ, ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಿಜ್ಞಾನ ಶಿಕ್ಷಣ, ವಾಣಿಜ್ಯ ಶಿಕ್ಷಣ ಇತ್ಯಾದಿ ಇತ್ಯಾದಿ. ಆದರೆ ಈ ಲೇಖನದಲ್ಲಿ ಶಾಲಾಕಾಲೇಜು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾತ್ರ ಕೆಲವು ಪಾರಿಭಾಷಿಕ ಶಬ್ದಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಪಾರಿಭಾಷಿಕ ಪದಗಳು ನಿರ್ವಿವಾದವಾಗಿ ಸ್ವೀಕೃತಗೊಂಡು ಬಳಕೆಯಲ್ಲಿದ್ದರೆ ಹಲವಾರು ಪದಗಳು ವಾದವಿವಾದಕ್ಕೆಡೆಮಾಡಿ ಕೊಟ್ಟಿವೆ, ಗೊಂದಲಮಯವಾಗಿದೆ. ಈ ಬಗ್ಗೆ ಚಿಂತನೆ ಮಾಡಬೇಕಾಗಿದೆ.

ನಿರ್ವಿವಾದವಾಗಿ ಸ್ವೀಕೃತಗೊಂಡಿರುವ ಕೆಲವು ಪಾರಿಭಾಷಿಕಗಳು

1. Abandonment of Teacher's contract
   ಅಧ್ಯಾಪಕರ ಕರಾರಿನ ಪರಿತ್ಯಾಗ
2. Wastage and Stagnation ಅಪವ್ಯಯ ಮತ್ತು ಸ್ಥಗಿತತೆ
3. Consolidated marks list ಸಂಚಿತ ಅಂಕಪಟ್ಟಿ
4. Relapsing to illiteracy ನಿರಕ್ಷರತೆಗಿಳಿಯುವಿಕೆ
5. Composite college ಸಮ್ಮಿಶ್ರ/ಸಂಯುಕ್ತ ಕಾಲೇಜು
6. School plant ಶಾಲಾ ಆವರಣ
7. Provisional Certificate ಹಂಗಾಮಿ ಪ್ರಮಾಣಪತ್ರ
8. Pedagogue ಬೋಧಕ
   Pedagogy ಬೋಧನಕ್ರಮ/ಶಿಕ್ಷಣಶಾಸ್ತ್ರ
   Therapeutic Pedagogy ಚಿಕಿತ್ಸಾತ್ಮಕ ಬೋಧನಕ್ರಮ
9. Enrichment Programme ಸಂವರ್ಧನ ಕಾರ್ಯಕ್ರಮ
   Contact Programme ಸಂಪರ್ಕ ಕಾರ್ಯಕ್ರಮ
   Integrated Programme ಸಂಯೋಜಿತ ಕಾರ್ಯಕ್ರಮ
   Orientation Programme ತಿಳುವಳಿಕಾ ಕಾರ್ಯಕ್ರಮ
10. Abstract (a) ಅಮೂರ್ತ/ಭಾವರೂಪ
    (b) ಸಾರ ಸಂಗ್ರಹ—ಒಂದು ಲೇಖನ, ಗ್ರಂಥ, ವರದಿ ಇತ್ಯಾದಿಗಳ ಮುಖ್ಯಾಂಶಗಳನ್ನು ಒಳಗೊಂಡದ್ದು
11. Scholarship (a) ವಿದ್ಯಾರ್ಥಿ ವೇತನ
    (b) ಪಾಂಡಿತ್ಯ/ವಿದ್ವತ್ತು
12. Complex ಸಂಕೀರ್ಣತೆ ಮನೋಗ್ರಂಥಿ (ಒಂದು ರೀತಿಯ ಮನಃಪೀಡನೆ)

ಗೊಂದಲಮಯ ಪಾರಿಭಾಷಿಕಗಳು

1. Non-formal Education ಔಪಚಾರಿಕವಲ್ಲದ ಶಿಕ್ಷಣ ಈ ಪದಕ್ಕೆ ಅನೌಪಚಾರಿಕ ಶಿಕ್ಷಣ (Informl education ಎಂಬಂತೆ) ಮುಕ್ತಶಿಕ್ಷಣ (Open education ಎಂಬಂತ) ಎಂದೂ ಇದು ಔಪಚಾರಿಕ ಹಾಗೂ ಅನೌಪಚಾರಿಕ

ಲಕ್ಷಣಗಳೆರಡನ್ನೂ ಹೊಂದಿರುವುದರಿಂದ 'ಔಪಚಾರಿಕೋ ಅನೌಪಚಾರಿಕ ಶಿಕ್ಷಣ', 'ಸಂಪ್ರದಾಯೋ ಅಸಂಪ್ರದಾಯ ಶಿಕ್ಷಣ' ಎಂದೂ ಬಳಸಲಾಗುತ್ತಿತ್ತು. ಇತ್ತೀಚೆಗೆ ಕರ್ನಾಟಕ ರಾಜ್ಯ ಪ್ರಶಿಕ್ಷಕರ ಸಂಘದ 17ನೆಯ ಸಮ್ಮೇಳನದಲ್ಲಿ ಈ ವಿಷಯದ ಬಗ್ಗೆ ಚರ್ಚೆ ನಡೆಸಿ 'ಔಪಚಾರಿಕವಲ್ಲದ ಶಿಕ್ಷಣ' ಎಂಬ ಪದಬಳಕೆಯನ್ನು ಅಂಗೀಕರಿಸಲಾಯಿತು. ಆದರೂ ಈ ಪದದ ಬಳಕೆ ಇನ್ನೂ ಗೊಂದಲಮಯವಾಗಿಯೇ ಉಳಿದಿದೆ.

2. Micro–Teaching ಆಂಶಿಕ ಬೋಧನೆ Micro ಎಂಬ ಪದಕ್ಕೆ ಸಂವಾದಿಯಾಗಿರುವ ನಿಘಂಟಿನ ಅರ್ಥ 'ಸೂಕ್ಷ್ಮ' ಎಂಬುದನ್ನು ಪರಿಗಣಿಸಿ 'ಸೂಕ್ಷ್ಮತಾ ಬೋಧನೆ' ಎಂದು ಬಳಕೆಗೆ ತರಲಾಗಿದೆ. ಆ ಶೀರ್ಷಿಕೆಯಡಿಯಲ್ಲಿ ನಡೆಯುವ ಕಾರ್ಯರೀತಿ, ಉದ್ದೇಶಗಳನ್ನು ಗಮನಿಸಿದಾಗ ಸಮಗ್ರವಾದ ಬೋಧನಾಕ್ರಿಯೆಯ ಒಂದು ಅಂಶ ಎಂಬುದು ಸ್ಪಷ್ಟವಾಗುವುದರಿಂದ 'ಆಂಶಿಕ ಬೋಧನೆ' ಎಂಬುದೇ ಸೂಕ್ತವೆನಿಸುತ್ತದೆ.

3. Teaching ಎಂಬುದು ವ್ಯಾಪಕ ಅರ್ಥದಲ್ಲಿಯೂ Instruction ಎಂಬುದು ನಿರ್ದಿಷ್ಟ ಅರ್ಥದಲ್ಲಿಯೂ ಬಳಕೆಯಲ್ಲಿದ್ದರೆ ಕನ್ನಡದಲ್ಲಿ ಈ ಎರಡು ಪದಗಳಿಗೂ 'ಬೋಧನೆ' ಎಂದೇ ಹೇಳಲಾಗುತ್ತದೆ. ಉದಾ : Science Teaching ವಿಜ್ಞಾನ ಬೋಧನೆ.

Programmed Instruction ಸಂಯೋಜಿತ ಬೋಧನೆ Instructions to Students ವಿದ್ಯಾರ್ಥಿಗಳಿಗೆ ಸೂಚನೆಗಳು ಎಂಬಲ್ಲಿ 'Instruction' ಎಂಬುದಕ್ಕೆ ಸಂವಾದಿಯಾಗಿರುವ 'ಸೂಚನೆ' ಎಂಬ ಪದವನ್ನು Programmed Instruction ಎನ್ನುವಾಗ ಬಳಸಲು ಉಪಯುಕ್ತವೆನಿಸುವುದಿಲ್ಲ.

4. Curriculum, Syllabus ಪದಗಳಿಗೆ ಕ್ರಮವಾಗಿ ಪಠ್ಯಕ್ರಮ ಹಾಗೂ ಪಠ್ಯಸೂಚಿ ಎಂಬುದು ಸೂಕ್ತವಾದ ಬಳಕೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಈ ಎರಡು ಪದಗಳನ್ನು ಪರ್ಯಾಯ ಪದಗಳನ್ನಾಗಿ ಪರಿಗಣಿಸಿ ಅದಲುಬದಲು ಮಾಡಿ ಉಪಯೋಗಿಸುವ ಸಂಭವವೇ ಹೆಚ್ಚಾಗಿ ಕಂಡುಬರುತ್ತದೆ.

5. Course ಇಂಗ್ಲಿಷ್-ಕನ್ನಡ ನಿಘಂಟಿನಲ್ಲಿ ಕಂಡುಬರುವಂತೆ Change one's course (ಗತಿ/ಮಾರ್ಗ ಬದಲಾಯಿಸು), course of events (ಘಟನಾವಳಿಯ ಗತಿ) ಎಂಬಲ್ಲಿ ಗತಿ/ಮಾರ್ಗ, Race Course ಎಂಬಲ್ಲಿ ಪಂದ್ಯ ನಡೆಯುವ ಪ್ರದೇಶ; Course of lectures/medicine ಎಂಬಲ್ಲಿ ಮಾಲೆ ಅಥವಾ ಸರಣಿ ; In the course of teaching ಎಂಬಲ್ಲಿ ನಡುವೆ/ಮಧ್ಯೆ ; of course ಎಂಬಲ್ಲಿ ಸಹಜವಾಗಿ, ನಿಸ್ಸಂದೇಹವಾಗಿ ಎಂದೆಲ್ಲಾ ಅರ್ಥಕೊಡುವ ಈ ಪದ Refresher course, Evening course, Correspondence course ಎಂಬಲ್ಲಿ ಬೇರೆ ಅರ್ಥವನ್ನೇ ಸ್ಫುರಿಸುತ್ತದೆ. ಈ ಅರ್ಥ ನಿಘಂಟಿನಲ್ಲಿ ದೊರೆಯದಿದ್ದ

ಕಾರಣ ಪದಬಳಕೆ ಸಂದರ್ಭ ಪರಿಗಣಿಸಿ 'ವ್ಯಾಸಂಗಕ್ರಮ/ವ್ಯವಸ್ಥೆ', 'ಪಠ್ಯವ್ಯವಸ್ಥೆ' 'ಶಿಕ್ಷಣ' ಎಂದು ರೂಪಿಸಿಕೊಳ್ಳಲಾಗಿದೆ. ಆದರೂ ಈ ಪದ ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ರೀತಿಯಲ್ಲಿ ಬಳಕೆಗೆ ಬಂದಿದೆ.

ಉದಾ : Refresher course ಪುನಶ್ಚೇತನ ವ್ಯಾಸಂಗಕ್ರಮ/ಶಿಕ್ಷಣ
Evening course ಸಂಜೆ ವ್ಯಾಸಂಗ ವ್ಯವಸ್ಥೆ
Correspondence course ಅಂಚೆ ಶಿಕ್ಷಣ

Course Nos in M.Ed. Course ಎಂಬಲ್ಲಿ ಎಂ.ಎಡ್. ಶಿಕ್ಷಣದಲ್ಲಿ ನಿರ್ದಿಷ್ಟ 'ಪಠ್ಯವಿಷಯ' ಎಂಬುದನ್ನು ಸೂಚಿಸುತ್ತದೆ.

6. Part time lecturers/teachers/students ಎಂಬಲ್ಲಿ ಪ್ರಸ್ತುತ ಬಳಕೆಯಲ್ಲಿರುವ 'ಒಪ್ಪೊತ್ತಿನ' ಎಂಬುದಕ್ಕಿಂತ 'ಅರೆಕಾಲಿಕ' ಅಧ್ಯಾಪಕರು/ವಿದ್ಯಾರ್ಥಿಗಳು ಎಂಬುದು ಹೆಚ್ಚು ಸೂಕ್ತವೆನಿಸುತ್ತದೆ. (Full time ಪೂರ್ಣಕಾಲಿಕ).

7. Vocational Guidance 'ಔದ್ಯೋಗಿಕ ಮಾರ್ಗದರ್ಶನ' ಎಂಬುದು ಸೂಕ್ತವಾಗಿದ್ದರೂ 'ವೃತ್ತಿಪರ ಮಾರ್ಗದರ್ಶನ' ಎಂದು ಬಳಕೆಗೆ ಬಂದಿದೆ Vocation (ಉದ್ಯೋಗ) ಮತ್ತು Profession (ವೃತ್ತಿ)ಗಳಿಗೆ ವ್ಯತ್ಯಾಸ ಗುರುತಿಸುವುದರಿಂದ 'ವೃತ್ತಿಪರ ಮಾರ್ಗದರ್ಶನ' ಎಂದು ಬಳಸಿದಾಗ ಸೀಮಿತ ಅರ್ಥ ಪಡೆಯುತ್ತದೆ.

Vocational course ಔದ್ಯೋಗಿಕ ಶಿಕ್ಷಣ
Professional course ವೃತ್ತಿಪರ ಶಿಕ್ಷಣ

8. Hard ware and Soft ware ಎಂದರೆ "ಸಾಧನೋಪಕರಣಗಳು ಮತ್ತು 'ಬೋಧನಾ ಕಲಿಕಾ ವಸ್ತು' ಎಂದು ಹೇಳಬಹುದಾಗಿದೆ. ಸಾಮಾನ್ಯ ನಿಘಂಟಿನಲ್ಲಿ Hardware ಎನ್ನುವುದಕ್ಕೆ 'ಕಟ್ಟಿದ ಸಲಕರಣೆಗಳು' ಎಂಬ ಅರ್ಥ ಸಿಕ್ಕಿದರೂ Software ಎಂಬ ಪದ ಬಳಕೆ ಕಂಡುಬಂದಿಲ್ಲ. ಶೈಕ್ಷಣಿಕ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಬಳಕೆಗೆ ಬಂದಿರುವ ಇತ್ತೀಚಿನ ಪದಗಳಿಗೆ ಕನ್ನಡ ಪದಗಳನ್ನು ರಚಿಸುವ ಕಾರ್ಯ ಮುಂದುವರಿಯಬೇಕಾಗಿದೆ. ಅಂತೆಯೇ ಮೇಲಿನ ಎರಡು ಪದಗಳನ್ನು ಬಳಸುವ ಸಂದರ್ಭವನ್ನಾಧರಿಸಿ ಕನ್ನಡ ಪದಗಳನ್ನು ಗುರುತಿಸಲಾಗಿದೆ.

ಒಟ್ಟಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಪರಿಕಲ್ಪನೆಗಳೇ ಗೊಂದಲಮಯವಾಗಿರುವಾಗ ಅವುಗಳನ್ನು ಪ್ರತಿನಿಧಿಸುವ ಪಾರಿಭಾಷಿಕಗಳು ಇನ್ನು ಸಿಕ್ಕುಸಿಕ್ಕಾಗಿರಬಹುದು. ಶಾಲಾಮಟ್ಟದಲ್ಲಿ ಹಾಗೂ ವಯಸ್ಕರ ಶಿಕ್ಷಣ ಮಟ್ಟದಲ್ಲಿ ಕನ್ನಡ ಬಳಕೆ ಹೇರಳವಾಗಿದ್ದರೆ ಕಾಲೇಜು/ಉನ್ನತ ಶಿಕ್ಷಣ ಮಟ್ಟದಲ್ಲಿ ಸ್ವಲ್ಪ ಕಷ್ಟವೆನಿಸಬಹುದು. ಆದರೂ ಶ್ರದ್ಧಾಪೂರ್ವಕ ಪ್ರಯತ್ನವಿದ್ದಲ್ಲಿ ಇಲ್ಲಿಯೂ ಕನ್ನಡ ಬಳಕೆ ಸುಗಮವಾಗುವುದರಲ್ಲಿ ಸಂಶಯವಿಲ್ಲ ಎನ್ನಬಹುದು.

---

* ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಂಡ್ಯ 31–8–88ರಂದು ಏರ್ಪಡಿಸಿದ್ದ "ಆಡಳಿತದಲ್ಲಿ ಕನ್ನಡ" ಜಿಲ್ಲಾ ಮಟ್ಟದ ಕಾರ್ಯಕಮ್ಮಟದಲ್ಲಿ ಮಂಡಿಸಿದ ಲೇಖನ.

ಮೂಲ : ಎಚ್. ಜಿ. ವೇಲ್ಸ್
ಅನು : ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರಿದುದು)

57. ವಸ್ತುಜ್ಞಾನದ ಬೆಳವಣಿಗೆ

ಹದಿನೇಳು ಮತ್ತು ಹದಿನೆಂಟನೆ ಶತಮಾನಗಳಾದ್ಯಂತವೂ ಮತ್ತು ಹತ್ತೊಂಬತ್ತನೆ ಶತಮಾನದ ಮೊದಲ ವರ್ಷಗಳಲ್ಲೂ ಸಹ ಈ ರೀತಿ ಯೂರೋಪಿನ ರಾಜರು ಮತ್ತು ರಾಜಕೀಯ ಶಕ್ತಿಗಳ ಘರ್ಷಣೆ ನಡೆಯುತ್ತಲೇ ಇದ್ದಿತು. 1648ನೆ ವರ್ಷದ ವೆಸ್ಟ್‌ಫೇಲಿಯ ಕೌಲಿನ ತೇಪೆ ಕೆಲಸದ ಯೂರೋಪು ಕೆಲೈಡೋಸ್ಕೋಪಿನ ಚಿತ್ರದಂತೆ 1815ರ ವಿಯೆನ್ನಾ ಕರಾರಿನ ತೇಪೆ ಕೆಲಸದ ಯೂರೋಪಾಗಿ ಬವಲಾಯಿಸುತ್ತಿತ್ತು ಮತ್ತು ದೊಡ್ಡ ದೊಡ್ಡ ಹಾಯಿ ಹಡಗುಗಳು ಪ್ರಪಂಚದ ಎಲ್ಲ ಕಡೆಗಳಲ್ಲೂ ಯೂರೋಪಿಯನ್ನರ ಪ್ರಭಾವವನ್ನು ಹರಡುತ್ತಿದ್ದುವು. ಅದೇ ಸಮಯದಲ್ಲಿ ಯೂರೋಪಿನಲ್ಲಿ ಮತ್ತು ಯೂರೋಪಿಯನ್ ಪ್ರಭಾವವಿದ್ದ ಪ್ರಪಂಚದ ಭಾಗಗಳಲ್ಲಿ ಜ್ಞಾನ ಒಂದೇ ಸಮನಾಗಿ ಅಭಿವೃದ್ಧಿ ಹೊಂದುತ್ತಿತ್ತು ಮತ್ತು ತಾವು ಜೀವಿಸಿರುವ ಪ್ರಪಂಚವನ್ನು ಕುರಿತು ಮನುಷ್ಯರ ಅಭಿಪ್ರಾಯಗಳು ಬಹುಮಟ್ಟಿಗೆ ಸ್ಫುಟಗೊಳ್ಳುತ್ತಿದ್ದುವು.

ರಾಜಕೀಯ ಜೀವನಕ್ಕೂ ಈ ಕ್ರಿಯೆಗೂ ಸಂಬಂಧವಿರಲಿಲ್ಲ. ಹದಿನೇಳನೆ ಮತ್ತು ಹದಿನೆಂಟನೆ ಶತಮಾನಗಳಷ್ಟು ಕಾಲವೂ ಇದರಿಂದ ಅಂತಹ ಎತ್ತಿಕಾಣುವ ಪರಿಣಾಮಗಳಾವುವೂ ತಕ್ಷಣ ರಾಜಕೀಯ ಜೀವನದಲ್ಲಿ ಆಗಲಿಲ್ಲ. ಅಂದಿನ ಜನತೆಯ ಚಿಂತನೆಯ ಮೇಲೂ ಇದರಿಂದ ಅಂತಹ ಆಳವಾದ ಪ್ರಭಾವ ಬೀಳಲಿಲ್ಲ. ಈ ಪ್ರತಿಕ್ರಿಯೆಗಳು ಕಾಣಿಸಿಕೊಂಡಿದ್ದು ಇನ್ನೂ ಸ್ವಲ್ಪ ಕಾಲ ಕಳೆದ ಮೇಲೆ. ಇವುಗಳ ಸಂಪೂರ್ಣ ಒತ್ತಡ ಕಂಡುಬಂದಿದ್ದು 19ನೆ ಶತಮಾನದ ಉತ್ತರಾರ್ಧದಲ್ಲಿ. ಮೊದಲು ಈ ಪ್ರಕ್ರಿಯೆ ಮುಖ್ಯವಾಗಿ ಸ್ವತಂತ್ರ ಮನೋವೃತ್ತಿಯುಳ್ಳ ಅನುಕೂಲಸ್ಥರ ಒಂದು ಸಣ್ಣ ಪ್ರಪಂಚದಲ್ಲಿ ನಡೆಯುತ್ತಾ ಬಂದಿತು. ಇಂಗ್ಲಿಷ್

ಭಾಷೆಯಲ್ಲಿ "ಪ್ರೈವೇಟ್ ಜಂಟಲ್ ಮನ್" ಎಂದು ಕರೆಯುವ ಸಭ್ಯಮನುಷ್ಯರು ಇಲ್ಲದಿರುತ್ತಿದ್ದರೆ ಗ್ರೀಸ್ ದೇಶದಲ್ಲಿ ವೈಜ್ಞಾನಿಕ ಪ್ರವೃತ್ತಿ ಹುಟ್ಟುತ್ತಿರಲಿಲ್ಲ ಹಾಗೂ ಯೂರೋಪಿನಲ್ಲಿ ಪುನಶ್ಚೈತನ್ಯ ಪಡೆಯುತ್ತಿರಲಿಲ್ಲ. ಈ ಕಾಲದ ತಾತ್ತ್ವಿಕ ಮತ್ತು ವೈಜ್ಞಾನಿಕ ಚಿಂತನೆಯಲ್ಲಿ ವಿಶ್ವವಿದ್ಯಾನಿಲಯಗಳು ಪಾತ್ರವಹಿಸಿದರೂ ಅವುಗಳ ಕೊಡುಗೆ ಅಂಥದ್ದೇನೂ ಮುಖ್ಯವಾದುದಾಗಿರಲಿಲ್ಲ. ಮಹಿಷ್ಠೊಬ್ಬರ ದಾನವನ್ನು ಅವಲಂಬಿಸಿರುವ ವಿದ್ಯೆ ಸಾಮಾನ್ಯವಾಗಿ ಸಂಪ್ರದಾಯಬದ್ಧವಾಗಿದ್ದು ಮುನ್ನಡೆ ಯಿಡಲು ಹಿಂದೇಟು ಹೊಡೆಯುತ್ತದೆ. ಆದರಲ್ಲಿ ಹೊಸದೇನನ್ನೂ ಪ್ರಾರಂಭಿಸುವ ಉತ್ಸಾಹವಿರುವುದಿಲ್ಲ ಮತ್ತು ಹೊಸ ಕಲ್ಪನೆಗಳಿಗೆ ಪ್ರತಿಭಟನೆಯಿರುತ್ತದೆ. ಸ್ವತಂತ್ರ ಪ್ರವೃತ್ತಿಯ ಚೇತನಗಳೊಂದಿಗೆ ಸಂಪರ್ಕ ಮತ್ತು ಅವುಗಳಿಂದ ಪ್ರಚೋದನೆ ಇದ್ದರೆ ಮಾತ್ರ ಹೀಗಾಗುವುದು ತಪ್ಪಬಹುದು.

ಕ್ರಿ.ಶ. 1662ರಲ್ಲಾಗಲೇ ಲಂಡನ್ನಿನ ರಾಯಲ್ ಸೊಸೈಟಿ ಸ್ಥಾಪಿತ ವಾದುದನ್ನೂ ಬೇಕನ್ನನ ಕನಸಾದ ನೂತನ ಅಟ್ಲಾಂಟಿಸನ್ನು ನನಸಾಗಿಸುವುದರಲ್ಲಿ ಅದರ ಕಾರ್ಯವನ್ನೂ ಗಮನಿಸಿದೆವು. 18ನೆ ಶತಮಾನದಾದ್ಯಂತ ವಸ್ತು ಮತ್ತು ಚಲನೆಗಳನ್ನು ಕುರಿತ ವಿಷಯಗಳಲ್ಲಿ ಎಷ್ಟೋ ಭಾವನೆಗಳು ಸ್ಫುಟಗೊಂಡುವು, ಗಣಿತ ತುಂಬಾ ಮುಂದುವರಿಯಿತು. ಸೂಕ್ಷ್ಮದರ್ಶಕ ಮತ್ತು ದೂರದರ್ಶಕಗಳಲ್ಲಿ ಗಾಜಿನ ಉಪಯೋಗ ಸುವ್ಯವಸ್ಥಿತವಾಗಿ ಅಭಿವೃದ್ಧಿಯಾಯಿತು. ಪ್ರಕೃತಿ ವಿಜ್ಞಾನದಲ್ಲಿ ವರ್ಗೀಕರಣ ವಿಭಾಗ ಪುನಶ್ಚೇತನ ಪಡೆಯಿತು. ಶರೀರರಚನಾ ಶಾಸ್ತ್ರವೂ ಪುನರುಜ್ಜೀವಿತವಾಯಿತು. ಭೂಗರ್ಭಶಾಸ್ತ್ರ—ಅರಿಸ್ಟಾಟಲ್ ಈ ಶಾಸ್ತ್ರದ ಇರವನ್ನು ಕಲ್ಪಿಸಿಕೊಂಡಿದ್ದನು, ಲಿಯೊನಾರ್ಡೊಡವಿಂಚಿ (1452-1519) ಇದನ್ನು ಎದುರು ನೋಡುತ್ತಿದ್ದನು—ಬಂಡೆಗಳ ದಾಖಲೆಯನ್ನು ವಿವರಿಸುವ ದೊಡ್ಡ ಕಾರ್ಯದಲ್ಲಿ ತೊಡಗಿತು.

ಭೌತವಿಜ್ಞಾನಗಳ ಈ ಪ್ರಕ್ರಿಯೆಯ ಪ್ರಭಾವ ಲೋಹವಿದ್ಯೆಯ ಮೇಲೆ ಆಯಿತು. ಲೋಹವಿದ್ಯೆ ಉತ್ತಮಗೊಂಡಿದ್ದರಿಂದ ಲೋಹಗಳನ್ನೂ ಮತ್ತಿತರ ಪದಾರ್ಥಗಳನ್ನೂ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಧೈರ್ಯವಾಗಿ ಹೊಸ ರೀತಿಗಳಲ್ಲಿ ಉಪಯೋಗಿಸಲು ಸಾಧ್ಯವಾಯಿತು. ಇದರಿಂದ ಹೊಸ ಹೊಸ ಉಪಜ್ಞೆಗಳು ನಿರ್ಮಾಣವಾದುವು. ಹಿಂದೆಂದೂ ಕಾಣದ ಗಾತ್ರದ ಯಂತ್ರೋಪಕರಣಗಳು ಹಿಂದೆಂದೂ ಇಲ್ಲದಷ್ಟು ಸಂಖ್ಯೆಯಲ್ಲಿ ತಯಾರಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿ ಯನ್ನೇ ಉಂಟುಮಾಡಿದುವು.

1804ರಲ್ಲಿ ಟ್ರೆವಿಥಿಕನು ವಾಟನ ಎಂಜಿನ್ನನ್ನು ಸಾಗಣೆ ಸಾಧನವನ್ನಾಗಿ ಅಳವಡಿಸಿ ಮೊಟ್ಟಮೊದಲ ರೈಲ್ವೆ ಎಂಜಿನ್ನನ್ನು ಸಿದ್ಧಪಡಿಸಿದನು. 1825ರಲ್ಲಿ ಸ್ಟಾಕ್‌ಟನ್ ಮತ್ತು ಡಾರ್ಲಿಂಗ್‌ಟನ್‌ಗಳ ಮಧ್ಯೆ ಮೊಟ್ಟಮೊದಲ ರೈಲ್ವೇ ಮಾರ್ಗದ ಆರಂಭೋತ್ಸವವಾಯಿತು. ಹದಿಮೂರು ಟನ್ನು ತೂಕದ ರೈಲುಗಾಡಿ

ಯನ್ನೆತ್ತಿದುಕೊಂಡು ಸ್ಟೀಫನ್‌ಸನ್ನನ 'ರಾಕೆಟ್' ಎಂಜಿನ್ನು ಘಂಟೆಗೆ 44 ಮೈಲಿ ವೇಗವನ್ನು ಮುಟ್ಟಿತು. 1830 ರಿಂದ ಈಚೆಗೆ ರೈಲ್ವೆಗಳು ಹೆಚ್ಚುತ್ತಾಹೋದುವು. ಶತಮಾನದ ಮಧ್ಯಭಾಗದ ಹೊತ್ತಿಗೆ ಯುರೋಪಿನ ತುಂಬಾ ರೈಲ್ವೆಗಳ ಒಂದು ಜಾಲವೇ ಹರಡಿತು.

ಇದೊಂದು ಅದ್ಭುತ ಕ್ರಾಂತಿ. ಎಷ್ಟೋ ಕಾಲ ಮಾನವ ಜೀವನದಲ್ಲಿ ಬದಲಾವಣೆ ಇಲ್ಲದಿದ್ದ ಒಂದು ಕ್ಷೇತ್ರ—ನೆಲದ ಮೇಲಿನ ಪ್ರಯಾಣದ ಅತ್ಯಧಿಕ ವೇಗದಲ್ಲಿ ಭಾರೀ ಮುನ್ನಡೆಯಾಯಿತು. ರಷ್ಯದಲ್ಲೆದುರಿಸಿದ ಅನಾಹುತದ ನಂತರ ನೆಪೋಲಿಯನು ವಿಲ್ನಾದಿಂದ ಪ್ಯಾರಿಸ್ಸಿಗೆ ಬರಲು 312 ಘಂಟೆ ತೆಗೆದುಕೊಂಡನು. ಇದು ಸಾವಿರದ ನಾಲ್ಕುನೂರು ಮೈಲಿಗಳ ಪ್ರಯಾಣ. ಆಗ ಊಹಿಸಿಕೊಳ್ಳಬಹುದಾಗಿದ್ದ ಎಲ್ಲಾ ಸೌಕರ್ಯಗಳೂ ಅವನಿಗೆ ಇದ್ದುವು. ಅವನ ಪ್ರಯಾಣದ ಸರಾಸರಿ ವೇಗ ಘಂಟೆಗೆ ಐದು ಮೈಲಿಗಳಿಗಿಂತ ಸ್ವಲ್ಪ ಕಡಿಮೆಯೇ ಆಗಿತ್ತು. ಸಾಮಾನ್ಯ ಪ್ರಯಾಣಿಕರಿಗೆ ಇಷ್ಟೇ ಪ್ರಯಾಣಮಾಡಲು ಇದರ ಎರಡರಷ್ಟು ಕಾಲ ತೆಗೆದುಕೊಂಡರೂ ಆಗುತ್ತಿರಲಿಲ್ಲ. ಕ್ರಿ.ಶ. ಮೊದಲನೆ ಶತಮಾನದಲ್ಲಿ ರೋಮ್ ಮತ್ತು ಗಾಲ್‌ಗಳ ನಡುವಿನ ಪ್ರಯಾಣದ ಅತ್ಯಧಿಕ ವೇಗ ಕೂಡ ಸುಮಾರು ಇಷ್ಟೇ ಆಗಿತ್ತು. ಈಗ ಇದ್ದಕ್ಕಿದ್ದಂತೆ ಈ ಭಾರೀ ಬದಲಾವಣೆಯಾಗಿ ಹೋಯಿತು. ಇದೇ ಪ್ರಯಾಣವನ್ನು ನಲವತ್ತೆಂಟು ಘಂಟೆಗಳಿಗಿಂತಲೂ ಕಡಿಮೆ ಹೊತ್ತಿನಲ್ಲಿ ಮುಗಿಸಲು ಎಂತಹ ಸಾಮಾನ್ಯ ಪ್ರಯಾಣಿಕರಿಗೂ ಕೂಡ ರೈಲುಬಂಡಿಗಳಿಂದ ಸಾಧ್ಯವಾಯಿತು. ಅಂದರೆ ಯುರೋಪಿನಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದೂರ ಎನ್ನುವುದು ಮೊದಲಿದ್ದುದರ ಹತ್ತನೆ ಒಂದು ಭಾಗವಾಯಿತು ಎನ್ನಬಹುದು. ಒಂದೇ ಆಡಳಿತ ವ್ಯವಸ್ಥೆಯು ಇದುವರೆಗೂ ಹತೋಟಿಯಲ್ಲಿಟ್ಟುಕೊಂಡಿರಲು ಸಾಧ್ಯವಾಗುತ್ತಿದ್ದ ಪ್ರದೇಶಗಳ ಹತ್ತರಷ್ಟು ವಿಸ್ತೀರ್ಣದ ಪ್ರದೇಶಗಳಲ್ಲಿ ತನ್ನ ಅಧಿಕಾರ ಚಲಾಯಿಸಲು ಇವುಗಳಿಂದ ಸಾಧ್ಯವಾಯಿತು ಈ ಸಾಧ್ಯತೆಯು ಪೂರ್ಣಮಹತ್ವ ಇನ್ನೂ ಸಹ ಯುರೋಪಿನಲ್ಲಿ ವೇದ್ಯವಾಗಿಲ್ಲ. ಈಗಲೂ ಯುರೋಪು ಕುದುರೆಗಾಡಿ ರಸ್ತೆಗಳ ಕಾಲದಲ್ಲಿ ಎಳೆದ ಗಡಿರೇಖೆಗಳಿಂದಲೇ ಬಂಧಿತವಾಗಿದೆ. ಅಮೆರಿಕದಲ್ಲಿ ಮಾತ್ರ ತಕ್ಷಣ ಈ ಕ್ರಾಂತಿ ಫಲಕೊಟ್ಟಿತು. ಪಶ್ಚಿಮ ದಿಕ್ಕಿಗೆ ಹೇಗೆಂದರೆ ಹಾಗೆ ಹರಡುತ್ತಿದ್ದ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಈಗ ಅವುಗಳ ಎಲ್ಲೆ ಆ ಭೂಖಂಡದಲ್ಲಿ ಎಲ್ಲಿಯವರೆಗೇ ಹರಡಲಿ ಆ ಎಲ್ಲೆಗಳಿಂದ ವಾಷಿಂಗ್‌ಟನ್‌ವರೆಗೆ ಯಾವ ತಡೆಯೂ ಇಲ್ಲದ ಸಂಪರ್ಕ ಸಾಧ್ಯವಾಯಿತು. ಈ ಪ್ರಮಾಣದ ಏಕತೆ ರೈಲುಗಳು ಇಲ್ಲದಿದ್ದರೆ ಸಾಧ್ಯವಾಗುತ್ತಲೇ ಇರಲಿಲ್ಲ.

ಹೊಗೆಬಂಡಿಗಿಂತಲೂ ಮೊದಲೇ ಹೊಗೆಜಹಜು ಉಪಯೋಗದಲ್ಲಿತ್ತು. 1802ರಲ್ಲೇ ಕ್ಲೈಡ್‌ನದೀ ಮುಖದ ಕಾಲುವೆಯಲ್ಲಿ ಷಾರ್ಲೊತ್‌ದಂಡಾಸ್ ಎಂಬ ಹೊಗೆ ಜಹಜು ಓಡಾಡುತ್ತಿತು. 1807ರಲ್ಲಿ ನ್ಯೂಯಾರ್ಕಿನ ಮೇಲ್ಭಾಗದ ಹಡ್ಸನ್

ನದಿಯಲ್ಲಿ ಫುಲ್‌ಟನ್ ಎಂಬ ಅಮೆರಿಕನ್ನನು ಬ್ರಿಟಿಷ್ ಎಂಜಿನ್ನುಗಳನ್ನು ಅಳವಡಿಸಿದ್ದ ಕ್ಲೆರ್‌ಮಾಂಟ್ ಎಂಬ ಒಂದು ಸ್ಟೀಮರನ್ನು ಇಟ್ಟುಕೊಂಡಿದ್ದನು. ಸಮುದ್ರಕ್ಕೆ ಹೊರಟ ಮೊದಲ ಹೊಗೆ ಜಹಜೂ ಸಹ ಅಮೇರಿಕದ್ದೇ ; ಫೀನಿಕ್ಸ್ ಎಂಬ ಈ ಹಡಗು ನ್ಯೂಯಾರ್ಕ್ (ಹೊಬೊರೆನ್) ನಿಂದ ಹೊರಟು ಫಿಲಡೆಲ್ಫಿಯ ಸೇರಿತು. ಹಬೆಯ ಶಕ್ತಿಯನ್ನುಪಯೋಗಿಸುತ್ತಿದ್ದು ಅಟ್ಲಾಂಟಿಕ್ ಸಾಗರವನ್ನು ದಾಟಿದ ಮೊದಲ ಜಹಜು ಸವನ್ನಾ ಕೂಡ ಅಮೇರಿಕದ್ದೇ (1819). ಈ ಹಡಗಿಗೆ ಹಾಯಿಪಟಗಳೂ ಇದ್ದುವು. ಈ ಎಲ್ಲ ಹಡಗುಗಳಲ್ಲೂ ಅವುಗಳನ್ನು ಚಲಿಸಲು ಅನೇಕ ಹುಟ್ಟುಗಳನ್ನಳವಡಿಸಿದ ಚಕ್ರವಿರುತ್ತಿತ್ತು. ಇಂತಹ ದೋಣಿಗಳು ಬಿರುಸಾದ ಅಲೆಗಳಿರುವ ಸಮುದ್ರಕ್ಕೆ ತಕ್ಕುವಲ್ಲ. ಅಂತಹ ಸಂದರ್ಭದಲ್ಲಿ ಈ ಹುಟ್ಟುಗಳು ಬಹುಬೇಗ ಚೂರು ಚೂರಾಗಿ ಹೋಗಿ ಹಡಗು ನಿರುಪಯೋಗಿಯಾಗುತ್ತದೆ. ತಿರುಪುಮೊಳೆ ಇರುವ ಹಡಗು ಉಪಯೋಗಕ್ಕೆ ಬರುವುದು ಸ್ವಲ್ಪ ನಿದಾನವೇ ಆಯಿತು. ಈ ತಿರುಪುಮೊಳೆಉಪಯುಕ್ತ ರೂಪಕ್ಕೆ ಬರುವ ಮೊದಲು ಎಷ್ಟೋ ಅಡಚಣೆಗಳನ್ನು ಎದುರಿಸಬೇಕಾಯಿತು. ಹತ್ತೊಂಬತ್ತನೆ ಶತಮಾನದ ಮಧ್ಯಭಾಗದವರೆಗೂ ಸಮುದ್ರದ ಮೇಲಿನ ಸರಕುಸಾಗಣೆಯಲ್ಲಿ ಹಾಯಿಹಡಗುಗಳು ಉಗಿಹಡಗುಗಳಿಗಿಂತ ಮುಂದಿದ್ದುವು. ಆಮೇಲೆ ಸಮುದ್ರಸಾರಿಗೆ ಬಹುಬೇಗ ಅಭಿವೃದ್ಧಿಯಾಯಿತು. ಮೊದಲ ಬಾರಿಗೆ ಜನರು ತಾವು ಸೇರಬೇಕೆಂದಿರುವ ಸ್ಥಳವನ್ನು ಸುಮಾರು ಇಂತಹುದೇ ದಿನ ತಲುಪುತ್ತೇವೆ ಎಂಬ ಭರವಸೆಯಿಟ್ಟುಕೊಂಡು ಸಮುದ್ರಸಾಗರಗಳನ್ನು ದಾಟಿ ಹೊರಡುವುದು ಸಾಧ್ಯವಾಯಿತು. ಅಟ್ಲಾಂಟಿಕ್ ಸಾಗರವನ್ನು ದಾಟುವುದು ಅದುವರೆಗೆ ಕೆಲವು ವಾರಗಳೇ ಹಿಡಿಸುವ—ಏಕೆ ಅದಕ್ಕೆ ಕೆಲವು ವೇಳೆ ತಿಂಗಳುಗಳೂ ಆಗುತ್ತಿತ್ತು—ಹೀಗೇ ಎಂದು ಹೇಳಲಾಗದ ಒಂದು ಸಾಹಸಕಾರ್ಯವಾಗಿದ್ದುದು ಇನ್ನು ಮುಂದೆ ಹೆಚ್ಚು ಹೆಚ್ಚು ಸುಲಭವಾಗುತ್ತಾ ಹೋಗಿ ಕಡೆಗೆ 1910ರಲ್ಲಿ ವೇಗವಾಗಿ ಚಲಿಸಬಲ್ಲ ಹಡಗುಗಳು ಐದುದಿನಗಳಿಗಿಂತ ಕಡಿಮೆ ಕಾಲದಲ್ಲಿ ಈ ಸಾಗರವನ್ನು ದಾಟಲಾರಂಭಿಸಿದುವು. ಅಷ್ಟೇ ಅಲ್ಲ, ಇವು ಸುಮಾರು ಇಂತಹ ದಿನ ಇಷ್ಟು ಗಂಟೆಗೆ ಇಂತಹ ಕಡೆ ಆಗಮಿಸುವುವು ಎಂತಲೂ ಹೇಳಲು ಸಹ ಸಾಧ್ಯವಾಯಿತು.

ಹಬೆ ಎಂಜಿನ್ನಿನಿಂದ ನೆಲ ಜಲ ಸಾರಿಗೆಗಳೆರಡೂ ಅಭಿವೃದ್ಧಿ ಹೊಂದುತ್ತಿದ್ದಾಗಲೇ ವಿದ್ಯುತ್ತಿನ ವಿದ್ಯಮಾನಗಳನ್ನು ಕುರಿತು ವೋಲ್ಟಾ, ಗ್ಯಾಲ್ವಾನಿ ಮತ್ತು ಫ್ಯಾರಡೇಗಳು ನಡೆಸಿದ ಸಂಶೋಧನೆಗಳ ಫಲವಾಗಿ ಅದುವರೆಗೆ ಇದ್ದ ಸಂಪರ್ಕ ಸಾಧನಗಳ ಜೊತೆಗೆ ಅತ್ಯಾಶ್ಚರ್ಯಕರವಾದ ಒಂದು ಹೊಸ ಸಾಧನ ಸೇರಿಕೊಂಡಿತು. 1835ರಲ್ಲಿ ತಂತಿವರ್ತಮಾನ ಕಳುಹಿಸುವುದು ಜಾರಿಗೆ ಬಂದಿತು. 1851ರಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ಮೊದಲು ಸಮುದ್ರದೊಳಗೆ ತಂತಿಹಾಕಲಾಯಿತು. ಕೆಲವೇ ವರ್ಷಗಳಲ್ಲಿ ತಂತಿವ್ಯವಸ್ಥೆ ನಾಗರಿಕ ಪ್ರಪಂಚದಾದ್ಯಂತ ಹರಡಿತು. ನಿದಾನವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಂದಾಗುತ್ತಲೂ

ಒಂದು ಸ್ಥಳದಂತೆ ಸಾಗುತ್ತಿದ್ದ ವರ್ತಮಾನ ಈಗ ಪ್ರಪಂಚದಾದ್ಯಂತ ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ಹರಡಲು ಸಾಧ್ಯವಾಯಿತು.

ಹಬೆ ಬಂಡಿ ಮತ್ತು ತಂತಿವರ್ತಮಾನ ವ್ಯವಸ್ಥೆ ಹತ್ತೊಂಬತ್ತನೆ ಶತಮಾನದ ಮಧ್ಯಭಾಗದ ಜನಸಾಮಾನ್ಯರಿಗೆ ಅತ್ಯಂತ ಕ್ರಾಂತಿಕಾರಿ ಮತ್ತು ಆಶ್ಚರ್ಯಕರ ಉಪಜ್ಞೆಗಳಂತೆ ಕಂಡುಬಂದರೂ ಇವು ಇದಕ್ಕಿಂತ ಅತ್ಯಂತ ವಿಶಾಲ ಹರಹಿನ ಕ್ರಿಯೆಯೊಂದರ ಮೊದಲ ಗಮನಾರ್ಹ ಆದರೆ ಅಷ್ಟೇನೂ ಕೌಶಲ್ಯಪೂರ್ಣವಲ್ಲದ ಫಲಗಳಾಗಿದ್ದುವು. ಇದರ ಮೊದಲಿನ ಯಾವ ಯುಗದ ಪ್ರಗತಿಯನ್ನೂ ಮೀರಿಸಿದ ವೇಗದಲ್ಲಿ ತಾಂತ್ರಿಕ ಜ್ಞಾನ ಮತ್ತು ಕುಶಲತೆಗಳು ಅಸಾಧಾರಣ ಪ್ರಮಾಣದಲ್ಲಿ ಬೆಳೆಯುತ್ತಿದ್ದುವು. ದೈನಂದಿನ ಜೀವನದಲ್ಲಿ ಅಷ್ಟು ಬೇಗ ಗಮನ ಸೆಳೆಯದಿದ್ದರೂ ಕೊಟ್ಟಕೊನೆಗೆ ಅತ್ಯಂತ ಮುಖ್ಯವಾದ ಪರಿಣಾಮ ಕೊಟ್ಟುದೆಂದರೆ ವಿವಿಧ ಕಟ್ಟಡ ಸಾಮಗ್ರಿಗಳನ್ನುಪಯೋಗಿಸುವುದರಲ್ಲಿ ಮಾನವ ಸಾಧಿಸಿದ ಪ್ರಗತಿ. ಹದಿನೆಂಟನೆಯ ಶತಮಾನದ ಮಧ್ಯಭಾಗದ ಮೊದಲು ಸೌದೆಯ ಇದ್ದಿಲನ್ನುಪಯೋಗಿಸಿ ಕಬ್ಬಿಣದ ಅದುರಿನಿಂದ ಕಬ್ಬಿಣವನ್ನು ತೆಗೆದು ಅದರ ಸಣ್ಣ ಸಣ್ಣ ತುಂಡುಗಳನ್ನು ತೆಗೆದುಕೊಂಡು ಸುತ್ತಿಗೆಯಿಂದ ಬಡಿದು ಸಾಮಾನುಗಳನ್ನು ತಯಾರಿಸುತ್ತಿದ್ದರು. ಕಬ್ಬಿಣವೆಂದರೆ ಕರಕುಶಲಗಾರನ ಕೆಲಸಕ್ಕೆ ತಕ್ಕವಸ್ತು ಮಾತ್ರವಾಗಿತ್ತು. ಈ ಸಾಮಾನುಗಳ ಯೋಗ್ಯತೆ ಮತ್ತು ಉಪಯುಕ್ತತೆ ಪ್ರತಿಯೊಬ್ಬ ಕಮ್ಮಾರನ ವೈಯಕ್ತಿಕ ಅನುಭವ ಮತ್ತು ಬುದ್ಧಿವಂತಿಕೆಯ ಮೇಲೆ ಬಹುಮಟ್ಟಿಗೆ ನಿಂತಿರುತ್ತಿತ್ತು. ಅಂದಿನ ಪರಿಸ್ಥಿತಿಯಲ್ಲಿ (ಹದಿನಾರನೇ ಶತಮಾನ) ಬಹು ಹೆಚ್ಚು ಎಂದರೆ ಎರಡು ಅಥವಾ ಮೂರು ಟನ್ನುಗಳಷ್ಟು ಕಬ್ಬಿಣವನ್ನು ಒಟ್ಟಿಗೆ ಸಂಸ್ಕರಿಸಲು ಸಾಧ್ಯವಿತ್ತು ಅಷ್ಟೆ. (ಹೀಗೆ ಪಿರಂಗಿಗಳ ಗಾತ್ರಕ್ಕೆ ಬಹು ನಿರ್ದಿಷ್ಟವಾದ ಒಂದು ಮಿತಿಯಿತ್ತು.) ಹದಿನೆಂಟನೆ ಶತಮಾನದಲ್ಲಿ ಊದುಕುಲುಮೆ ಉಪಯೋಗಕ್ಕೆ ಬಂದಿತು. ಹೊಗೆಯಾಡದ ಕಲ್ಲಿದ್ದಲಿನ ಉಪಯೋಗದೊಂದಿಗೆ ಇದು ಕೂಡ ಅಭಿವೃದ್ಧಿ ಹೊಂದಿತು. 18ನೆ ಶತಮಾನಕ್ಕೆ ಮೊದಲು ಲಟ್ಟಿಸಿದ ತಗಡು ಕಬ್ಬಿಣ (1728) ಮತ್ತು ಕಬ್ಬಿಣದ ಕಡ್ಡಿಗಳು ಮತ್ತು ಪಟ್ಟಿಗಳು (1738) ಇರಲೇ ಇಲ್ಲ. ನ್ಯಾಸ್ಮಿತನ ಹಬೆ ಸುತ್ತಿಗೆ ಉಪಯೋಗಕ್ಕೆ ಬಂದಿದ್ದು ಇನ್ನೂ ಈಚೆಗೆ, 1838ರಲ್ಲಿ.

ಹೀಗೆ ಲೋಹಶಾಸ್ತ್ರದ ಕುಂದುಕೊರತೆಗಳಿಂದಾಗಿ ಪ್ರಾಚೀನ ಕಾಲದಲ್ಲಿ ಹಬೆಯನ್ನು ಉಪಯೋಗಿಸಲು ಸಾಧ್ಯವಿರಲಿಲ್ಲ. ಹಬೆಯಂತ್ರದ ಮಾತಿರಲಿ, ಅತ್ಯಂತ ಸರಳವಾದ ಪಂಪ್ ಮಾಡುವ ಯಂತ್ರಕೂಡ ಕಬ್ಬಿಣದ ತಗಡು ದೊರಕುವ ಮೊದಲು ತಯಾರಾಗಲು ಸಾಧ್ಯವಿರಲಿಲ್ಲ. ಮೊದಮೊದಲು ಸಿದ್ಧಪಡಿಸಿದ ಯಂತ್ರಗಳು ಈಗಿನವರ ದೃಷ್ಟಿಯಲ್ಲಿ ಇವುಗಳ ಯೋಗ್ಯತೆ ಇಷ್ಟೇನೇ ಎನಿಸುವಷ್ಟು ಸರಳವಾಗಿ ಒಡ್ಡೊಡ್ಡಾಗಿ ಕಾಣಿಸುತ್ತವೆ. ಆದರೆ ಆಗಿನ ಲೋಹಶಾಸ್ತ್ರ ಜ್ಞಾನದ ಮಟ್ಟ ಇದ್ದಿದ್ದರಲ್ಲಿ ಅಷ್ಟನ್ನು ಮಾತ್ರ ಸಾಧಿಸಬಹುದಾಗಿತ್ತು. ಬೆಸೆಮರ್ ವಿಧಾನ

1856ರ ವರೆಗೆ ಉಪಯೋಗಕ್ಕೆ ಬರಲಿಲ್ಲ. ಆದಾದನೇಲೆ 1864ರಲ್ಲೇ ತೆರೆದ ಕುಲುಮೆ ವಿಧಾನ ಬಳಕೆಗೆ ಬಂದುಬಿಟ್ಟಿತು. ಈ ವಿಧಾನದಲ್ಲಿ ಅದುವರೆಗೆ ಊಹಿಸಲು ಸಾಧ್ಯವೇ ಇಲ್ಲದಿದ್ದಷ್ಟು ಪ್ರಮಾಣದಲ್ಲಿ ಉಕ್ಕು ಮತ್ತು ಎಲ್ಲ ವಿಧದ ಕಬ್ಬಿಣವನ್ನು ಕರಗಿಸಿ ಶುದ್ಧಿಮಾಡಿ ಅಚ್ಚಿಗೆ ಹಾಕಲು ಸಾಧ್ಯವಾಯಿತು. ಈಗ ವಿದ್ಯುತ್ ಕುಲುಮೆಗಳಲ್ಲಿ ಟನ್ನುಗಟ್ಟಲೆ ಕರಗಿದ ಉಕ್ಕು ಪಾತ್ರೆಯಲ್ಲಿ ಹಾಲು ಮರಳುವಂತೆ ಸುಳಿಗಟ್ಟಿರುವುದನ್ನು ಕಾಣಬಹುದು. ಇದಕ್ಕೆ ಮುಂಚೆ ಮಾನವ ಕಾರ್ಯತಃ ಸಾಧಿಸಿದ ಯಾವ ಮುನ್ನಡೆಯೂ ಈಗ ಅವನು ಅಗಾಧ ಪ್ರಮಾಣದಲ್ಲಿ ಕಬ್ಬಿಣ ಉಕ್ಕುಗಳ ಮೇಲೆ ಮತ್ತು ಅವುಗಳ ಗುಣಮಟ್ಟದ ಮೇಲೆ ಸಾಧಿಸಿದ ಪ್ರವೀಣತೆಗೆ ಸರಿದೂಗುವಂತಹುದಾಗಿಲ್ಲಿಲ್ಲ. ಈ ಹೊಸ ಲೋಹವಿದ್ಯೆಯ ವಿಧಾನಗಳು ಸಾಧಿಸಿದ ಪ್ರಪ್ರಥಮ ಮಹಾಸಾಧನೆಗಳೆಂದರೆ ರೈಲ್ವೆಗಳು ಮತ್ತು ಮೊದಲು ತಯಾರಾದ ವಿವಿಧ ರೀತಿಯ ಹಬೆಯಂತ್ರಗಳು. ಇಷ್ಟರಲ್ಲೇ ಕಬ್ಬಿಣ ಮತ್ತು ಉಕ್ಕಿನ ಹಡಗುಗಳು, ದೊಡ್ಡ ಸೇತುವೆಗಳು ಮತ್ತು ಉಕ್ಕನ್ನು ಉಪಯೋಗಿಸಿ ದೈತ್ಯಗಾತ್ರದ ರಚನೆಗಳನ್ನು ಕಟ್ಟುವ ಹೊಸ ವಿಧಾನಗಳು ಬಂದುವು. ಎಷ್ಟೋ ಕಾಲ ಕಳೆದ ಮೇಲೆ ಮಾನವರಿಗೆ ಮೊದಲು ರೈಲ್ವೆಗಳ ಗೇಟುಗಳನ್ನು ಸ್ವಲ್ಪ ಅಧೈರ್ಯದಿಂದಲೇ ಸಣ್ಣ ಪ್ರಮಾಣದಲ್ಲಿ ಹಾಕಲಾಯಿತು ಎಂದೂ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಅದಕ್ಕಿಂತ ಆರಾಮವಾಗಿ ಕಲುಕಾಟವಿಲ್ಲದೆ ಪ್ರಯಾಣಮಾಡಲು ಏರ್ಪಾಟು ಮಾಡಬಹುದಾಗಿತ್ತು ಎಂತಲೂ ತಿಳಿಯಿತು.

ಹತ್ತೊಂಬತ್ತನೆ ಶತಮಾನಕ್ಕೆ ಮುಂಚೆ ಎರಡುಸಾವಿರ ಟನ್‌ಗಿಂತ ಹೆಚ್ಚು ಭಾರಹೊರುವ ಹಡಗುಗಳಿರಲೇ ಇಲ್ಲ. ಈಗ 50000 ಟನ್ನಿನ ಹಡಗು ಎಂದರೂ ಆಶ್ಚರ್ಯವೇ ಇಲ್ಲ. ಈ ರೀತಿಯ ಪ್ರಗತಿಯನ್ನು ಕಂಡು ಇದು ಬರಿ ಗಾತ್ರದಲ್ಲಿನ ಪ್ರಗತಿ ಎಂದು ಹಿಯ್ಯಾಳಿಸುವವರೆಷ್ಟೋ ಜನರಿದ್ದಾರೆ. ಆದರೆ ಈ ರೀತಿಯ ಹಿಯ್ಯಾಳಿಕೆಯಿಂದ ಅಂತಹವರ ಬುದ್ಧಿಮಟ್ಟದ ಮಿತಿ ತಿಳಿಯುತ್ತದೆ ಅಷ್ಟೆ. ಈಗ ಇರುವ ದೊಡ್ಡದೊಡ್ಡ ಹಡಗುಗಳು ಮತ್ತು ದೊಡ್ಡ ಉಕ್ಕಿನ ಚೌಕಟ್ಟುಗಳ ಕಟ್ಟಡಗಳು ಹಿಂದಿನ ಪುಟ್ಟಹಡಗು ಮತ್ತು ಕಟ್ಟಡಗಳನ್ನೇ ಅಳತೆ ಹೆಚ್ಚಿಸಿ ಕಟ್ಟಿದುವುಗಳಲ್ಲ. ಇವುಗಳನ್ನು ಕಟ್ಟುವ ರೀತಿಯೇ ಬೇರೆ. ಇವು ಹಗುರವಾಗಿದ್ದರೂ ಬಲವಾಗಿರುತ್ತವೆ. ಮೊದಲಿಗಿಂತ ಸೂಕ್ಷ್ಮವಾದ ಆದರೆ ಶಕ್ತಿಯುತವಾದ ಪದಾರ್ಥಗಳನ್ನುಪಯೋಗಿಸಿ ಇವುಗಳನ್ನು ರಚಿಸುತ್ತಾರೆ. ಮೊದಲು ಕಟ್ಟಿದ್ದರ ಮಾದರಿಯ ಮೇಲೆ ತ್ರೈರಾಶಿಯ ಮೂಲಕ ಅಂದಾಜು ಹಾಕಿಕೊಂಡು ನಿರ್ಮಿಸಿದುವಲ್ಲ ಇವು. ಇವುಗಳ ರಚನೆ ಸೂಕ್ಷ್ಮ ಮತ್ತು ಜಟಿಲ ಲೆಕ್ಕಾಚಾರವನ್ನವಲಂಬಿಸಿರುತ್ತವೆ. ಹಳೆಯ ಕಟ್ಟಡಗಳಲ್ಲಿ ಮತ್ತು ಹಡಗುಗಳಲ್ಲಿ ರಚನಾ ಸಾಮಗ್ರಿಗೇ ಪ್ರಮುಖ ಸ್ಥಾನವಿರುತ್ತಿತ್ತು. ಈ ಸಾಮಗ್ರಿಗಳ ಅವಶ್ಯಕತೆಗನುಗುಣವಾಗಿ ಚಾಚೂ ತಪ್ಪದೆ ನಿರ್ಮಾಣ ನಡೆಯುತ್ತಿತ್ತು. ಹೊಸ ರಚನೆಗಳಲ್ಲಿ ಸಾಮಗ್ರಿಯನ್ನು ಹತೋಟಿಗೆ

ತಂದು ಬದಲಾಯಿಸಿ ಇಷ್ಟ ಬಂದಂತೆ ಉಪಯೋಗಿಸಿಕೊಳ್ಳಲಾಗುತ್ತದೆ. ಕಲ್ಲಿದ್ದಲು ಕಬ್ಬಿಣ ಮತ್ತು ಮರಳುಗಳನ್ನು ದಿಬ್ಬಗಳಿಂದ ಹಳ್ಳಗಳಿಂದ ಹೊತ್ತು ತಂದು ಅವುಗಳನ್ನು ತಟ್ಟಿ ಕುಟ್ಟಿ ಬಡಿದು ಕರಗಿಸಿ ತಿರುಚಿ ಅಚ್ಚಿಗೆ ಹಾಕಿ ಅಂತೂ ಇಂತೂ ಕಡೆಗೆ ತುಂಬಿ ಗಿಜಿಗುಟ್ಟುತ್ತಿರುವ ಪಟ್ಟಣದ ನಡುವೆ ಆರುನೂರು ಅಡಿ ಎತ್ತರದ ನಾಜೂಕಾದ ತಳತಳಿಸುವ ಉಕ್ಕು ಗಾಜುಗಳಿಂದಾದ ಶಿಖರಪ್ರಾಯವಾದ ಕಟ್ಟಡ ನಿರ್ಮಿಸುವುದು ಎಂದರೆ ಸಾಮಾನ್ಯವೇನಲ್ಲ.

ಉಕ್ಕಿನ ತಯಾರಿಕೆಯಲ್ಲಿ ಮಾನವನ ಮುನ್ನಡೆ ಮತ್ತು ಅದರ ಪರಿಣಾಮ ಗಳನ್ನು ಕುರಿತ ಈ ವಿವರಗಳನ್ನು ಕೇವಲ ಒಂದು ದೃಷ್ಟಾಂತವೆಂದು ಇಲ್ಲಿ ವರ್ಣಿಸ ಲಾಯಿತು. ಇನ್ನೂ ತಾಮ್ರ, ತವರ ಅಲ್ಲದೆ 19ನೆಯ ಶತಮಾನದವರೆಗೆ ಅಜ್ಞಾತ ವಾಗಿದ್ದ ಅನೇಕ ಲೋಹಗಳು (ಇವುಗಳಲ್ಲಿ ನಿಕೆಲ್ ಮತ್ತು ಅಲ್ಯುಮಿನಿಯಂ ಪ್ರಮುಖವಾದುವೆರಡು) ಇವೆಲ್ಲವುಗಳ ವಿಷಯವಾಗಿಯೂ ಇಂತಹುದೇ ಉದಾಹರಣೆ ಕೊಡಬಹುದು. ಈ ರೀತಿ ವಿವಿಧ ದ್ರವ್ಯಗಳು, ವಿವಿಧ ರೀತಿಯ ಗಾಜುಗಳು ಕಲ್ಲುಗಳು ಪ್ಲಾಸ್ಟರುಗಳು ಅಂತಹುದೇ ಇತರ ಪದಾರ್ಥಗಳ ಮೇಲೆಯೂ ವರ್ಣಗಳು ಮತ್ತು ಪದಾರ್ಥಗಳ ರಚನಾವಿನ್ಯಾಸಗಳ ಮೇಲೆಯೂ ಮಾನವಹತೋಟಿ ಪಡೆಯಲು ಸಾಧ್ಯವಾಗಿರುವುದರಿಂದಲೇ ಯಾಂತ್ರಿಕ ಕ್ರಾಂತಿಯ ಪ್ರಮುಖ ವಿಕ್ರಮಗಳನ್ನು ಸಾಧಿಸಲು ಆಗಿದ್ದು. ಆದರೆ ಇಲ್ಲಿಯೂ ನಾವಿನ್ನೂ ಮೊದಲ ಪೈರು ತೆಗೆಯು ತ್ತಿದ್ದೇವೆ ಅಷ್ಟೆ. ನಮಗೆ ಸಾಮರ್ಥ್ಯವೇನೋ ಇದೆ. ಆದರೆ ಅದನ್ನು ಉಪಯೋಗಿ ಸುವುದು ಹೇಗೆಂದು ಇನ್ನೂ ತಿಳಿದುಕೊಳ್ಳಬೇಕಾಗಿದೆ. ವಿಜ್ಞಾನ ನಮಗಿತ್ತಿರುವ ಈ ಉಡುಗೊರೆಗಳನ್ನು ಎಷ್ಟೋ ಬಾರಿ ನಾವು ಅಸಂಸ್ಕೃತ ರೀತಿಯಲ್ಲಿ ಹೊರಡಾಲಗಾಗಿ ಮೂಢರಂತೆ ಅಸಹ್ಯವಾದ ರೀತಿಯಲ್ಲಿ ಉಪಯೋಗಿಸಿದ್ದೇವೆ. ಈಗ ದೊರೆಯುತ್ತಿ ರುವ ಅಸಂಖ್ಯಾತ ರೀತಿಯ ಪದಾರ್ಥಗಳನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂದು ತಿಳಿದುಕೊಳ್ಳಲು ಕಲಾವಿದರು ಮತ್ತು ಇವುಗಳನ್ನು ಅಳವಡಿಸಿಕೊಳ್ಳಬೇಕಾದ ತಂತ್ರಜ್ಞರು ಇದೇ ತಾನೇ ಮೊದಲ ಹೆಜ್ಜೆಯಿಟ್ಟಿದ್ದಾರೆ ಅಷ್ಟೆ.

ಯಾಂತ್ರಿಕ ರಚನೆಯ ಸಾಧ್ಯತೆಗಳ ಜೊತೆ ಜೊತೆಯಾಗಿಯೇ ಹೊಸದಾದ ವಿದ್ಯುಚ್ಛಕ್ತಿ ಶಾಸ್ತ್ರವೂ ಬೆಳೆಯಿತು. ಹತ್ತೊಂಬತ್ತನೆ ಶತಮಾನದ ಎಂಟನೆ ದಶಕ ದಲ್ಲಷ್ಟೇ ಈ ಸಂಶೋಧನೆಗಳು ಸಾಮಾನ್ಯ ಜನತೆಯ ಗಮನ ಸೆಳೆಯುವಂತಹ ಫಲಗಳನ್ನು ಕೊಡಲಾರಂಭಿಸಿದ್ದು. ಬಳಿಕ ಇದ್ದಕ್ಕಿದ್ದಂತೆ ವಿದ್ಯುದ್ದೀಪಗಳು ವಿದ್ಯುತ್ ಚಾಲನೆ ಮತ್ತು ಶಕ್ತಿಗಳ ಪರಸ್ಪರ ಪರಿವರ್ತನೆ ಅಂದರೆ ಸ್ಥಳದಿಂದ ಸ್ಥಳಕ್ಕೆ ಕೊಳವೆಯ ಮೂಲಕ ನೀರನ್ನು ಕಳುಹಿಸಿದಂತೆ ಶಕ್ತಿಯನ್ನು ತಾಮ್ರದ ತಂತಿಯ ಮೂಲಕ ಕಳುಹಿಸಿ ಅವಶ್ಯಕತೆಯಿದ್ದಂತೆ ಯಾಂತ್ರಿಕ ಚಲನೆ ಬೆಳಕು ಅಥವಾ ಶಾಖಗಳನ್ನಾಗಿ ಪರಿವರ್ತಿಸುವ ಸಾಧ್ಯತೆ ಸಾಮಾನ್ಯ ಜನತೆಯ ಅರಿವನ್ನು ಮುಟ್ಟಿತು.

ಜ್ಞಾನ ಈ ರೀತಿ ಬಹುದೊಡ್ಡ ಪ್ರಮಾಣದಲ್ಲಿ ಶೀಘ್ರವಾಗಿ ವಿವಿಧರೀತಿಯಲ್ಲಿ

ಅಭಿವೃದ್ಧಿಯಾದಾಗ ಫ್ರೆಂಚರು ಮತ್ತು ಬ್ರಿಟಿಷರು ಮೊದಲು ಮಾರ್ಗದರ್ಶಿಗಳಾಗಿದ್ದರು. ಆದರೆ ನೆಪೋಲಿಯನ್ನನ ಕೆಳಗಿದ್ದು ತಗ್ಗಿಬಗ್ಗಿ ನಡೆಯುವುದನ್ನು ಕಲಿತಿದ್ದ ಜರ್ಮನರು ವೈಜ್ಞಾನಿಕ ಅನ್ವೇಷಣೆಯಲ್ಲಿ ಎಷ್ಟು ಶ್ರದ್ಧೆ ಮತ್ತು ಛಲಗಳನ್ನು ತೋರಿದರೆಂದರೆ ಈ ಮುಂದಾಳುಗಳನ್ನು ಬಹುಬೇಗನೆ ಅವರು ಹಿಂದೆ ಹಾಕಿಬಿಟ್ಟರು. ಬ್ರಿಟನ್ನಿನ ವಿಜ್ಞಾನದ ಬಹುಪಾಲು ಪಾಂಡಿತ್ಯದ ಕೇಂದ್ರಗಳ ಹೊರಗೆ ಇದ್ದು ಕೆಲಸ ಮಾಡುತ್ತಿದ್ದ ಇಂಗ್ಲಿಷ್ ಮತ್ತು ಸ್ಕಾಟ್ ವ್ಯಕ್ತಿಗಳ ಸೃಷ್ಟಿ.

ಬ್ರಿಟನ್ನಿನ ವಿಶ್ವವಿದ್ಯಾನಿಲಯಗಳು ಆಗ ಶಿಕ್ಷಣಕ್ಷೇತ್ರದಲ್ಲಿ ಒಂದು ರೀತಿಯ 'ಹಿನ್ನಡೆ'ಯ ಸ್ಥಿತಿಯಲ್ಲಿದ್ದುವು ಅವುಗಳಲ್ಲಿ ಲ್ಯಾಟಿನ್ ಮತ್ತು ಗ್ರೀಕ್ ಪ್ರಾಚೀನ ಸಾಹಿತ್ಯಗಳನ್ನು ಯಾಂತ್ರಿಕವಾಗಿ ಬಾಯಿಪಾಠ ಮಾಡುವುದೇ ಮುಖ್ಯವಾಗಿತ್ತು. ಫ್ರೆಂಚ್ ಶಿಕ್ಷಣಕ್ಷೇತ್ರದಲ್ಲಿಯೂ ಜೆಸ್ಯೂಟರ ಶಾಲೆಗಳ ಹಳೆಯ ಸಂಪ್ರದಾಯದ್ದೇ ಮೇಲುಗೈಯಾಗಿತ್ತು. ಹೀಗಾಗಿ ಜರ್ಮನ್ನರು ಆ ಸಂದರ್ಭದಲ್ಲಿ ಸಾಧ್ಯವಿದ್ದುದಕ್ಕಿಂತ ಚಿಕ್ಕದೇ ಆದರೂ ಬ್ರಿಟಿಷ್ ಮತ್ತು ಫ್ರೆಂಚ್ ಸಂಶೋಧನಾಕಾರರು ಮತ್ತು ಪ್ರಯೋಗಕಾರರ ಪುಟ್ಟತಂಡಕ್ಕಿಂತ ದೊಡ್ಡದಾದ ಸಂಶೋಧನಾ ತಂಡವನ್ನು ಏನೂ ಕಷ್ಟವಿಲ್ಲದೆ ವ್ಯವಸ್ಥೆಗೊಳಿಸಿದರು, ಇಂತಹ ಪ್ರಯೋಗ ಮತ್ತು ಸಂಶೋಧನಾ ಕಾರ್ಯಗಳಿಂದ ಬ್ರಿಟನ್ ಮತ್ತು ಫ್ರಾನ್ಸುಗಳು ಪ್ರಪಂಚದಲ್ಲೇ ಅತ್ಯಂತ ಸಂಪದ್ಯುಕ್ತ ಶಕ್ತಿವಂತ ರಾಷ್ಟ್ರಗಳಾದರೂ ಇದರಿಂದ ಈ ಪ್ರಯೋಗಕಾರರು ಮತ್ತು ಸಂಶೋಧಕರಿಗೆ ಯಾವ ಸಂಪತ್ತೂ ಪ್ರಾಬಲ್ಯವೂ ಬರಲಿಲ್ಲ. ಮನಃಪೂರ್ವಕ ಕೆಲಸ ಮಾಡುವ ವಿಜ್ಞಾನಿಗೆ ಸಹಜವಾಗಿಯೇ ಲೌಕಿಕ ವ್ಯವಹಾರದಲ್ಲಿ ಅಷ್ಟುಗಮನವಿರುವುದಿಲ್ಲ. ಅವನು ಎಷ್ಟರಮಟ್ಟಿಗೆ ತನ್ನ ಸಂಶೋಧನೆಯಲ್ಲಿ ಮುಳುಗಿರುತ್ತಾನೆಂದರೆ ಅದರಿಂದ ದುಡ್ಡು ಮಾಡುವುದು ಹೇಗೆ ಎಂದು ಹವಣಿಸಿ ಮಸಲತ್ತುಮಾಡಲು ಅವನಿಗೆ ಸಾಧ್ಯವಾಗುವುದಿಲ್ಲ. ಹೀಗಿರುವುದರಿಂದ ಇವನ ಸಂಶೋಧನೆಗಳ ಆರ್ಥಿಕ ಪ್ರಯೋಜನ ಸಹಜವಾಗಿಯೇ ಅತಿಸುಲಭವಾಗಿ ಹಣಗಳಿಸುವುದರಲ್ಲಿ ಇವನಿಗಿಂತ ಹೆಚ್ಚು ಆಸಕ್ತಿಯುಳ್ಳ ಜನರ ಕೈಗೆ ಹೋಯಿತು. ಆದುದರಿಂದಲೇ ಬ್ರಿಟನ್ನಿನಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಮುನ್ನಡೆಯ ಪ್ರತಿಯೊಂದು ಹೊಸ ಹೆಜ್ಜೆಯಲ್ಲಿಯೂ ಐಶ್ವರ್ಯವಂತರ ಹೊಸಹೊಸ ತಂಡಗಳು ಉದ್ಭವವಾಗುವುದನ್ನು ಕಾಣುತ್ತೇವೆ. ಕ್ರೈಸ್ತ ಪಾದ್ರಿಗಳು ಮತ್ತು ಸಂಪ್ರದಾಯಬದ್ಧ ಪಂಡಿತರಂತೆ ಉದ್ರೇಕಗೊಂಡು ರಾಷ್ಟ್ರಕ್ಕೆ ಚಿನ್ನದಮೊಟ್ಟೆಯ ನ್ನಿಟ್ಟುಕೊಡುವ ಈ ಬಾತುಕೋಳಿಯನ್ನು ತಿರಸ್ಕರಿಸಿ ಕೊಲ್ಲುವಷ್ಟಕ್ಕೆ ಇವರು ಹೋಗದಿದ್ದರೂ ಲಾಭದಾಯಕ ಪ್ರಾಣಿಯಾದ ವಿಜ್ಞಾನಿ ತನ್ನಷ್ಟಕ್ಕೆ ತಾನು ಹೊಟ್ಟೆಗಿಲ್ಲದೆ ಸಾಯುತ್ತಿದ್ದರೂ ಸಮಾಧಾನದಿಂದಲೇ ಇರುತ್ತಿದ್ದರು. ಈ ಸಂಶೋಧಕರನ್ನೂ ನಿರ್ಮಾಪಕರನ್ನೂ ಹೇಗೂ ಪ್ರಕೃತಿ ಸೃಷ್ಟಿಸುತ್ತಾಳೆ, ಅವರಿಗಿಂತ ಯುಕ್ತಿವಂತರಾದವರು ಅದರ ಲಾಭ ಪಡೆದುಕೊಳ್ಳಬೇಕು ಎಂಬುದು ಅವರ ಭಾವನೆಯಾಗಿತ್ತು.

ಈ ವಿಷಯದಲ್ಲಿ ಜರ್ಮನರು ಇವರಿಗಿಂತ ಬುದ್ಧಿವಂತರಾಗಿದ್ದರು. ಈ ಹೊಸ ವಿದ್ಯೆಯನ್ನು ಕಂಡರೆ ಜರ್ಮನ್ ವಿದ್ವಾಂಸರು ಅಷ್ಟು ತೀವ್ರವಾದ ದ್ವೇಷ ತೋರಿಸುತ್ತಿರಲಿಲ್ಲ. ಅದು ಬೆಳೆಯಲು ಅವರು ಅವಕಾಶ ಕಲ್ಪಿಸಿಕೊಟ್ಟರು. ಜರ್ಮನ್ ವ್ಯಾಪಾರಿ ಅಥವಾ ಕೈಗಾರಿಕೋದ್ಯಮಿಗೂ ತನ್ನ ಬ್ರಿಟಿಷ್ ಪ್ರತಿಸ್ಪರ್ಧಿಗಳಂತೆ ವಿಜ್ಞಾನಿಯನ್ನು ಕಂಡರೆ ತಿರಸ್ಕಾರ ಭಾವನೆ ಇರಲಿಲ್ಲ. ಗೊಬ್ಬರ ಹಾಕಿದರೆ ಹೆಚ್ಚು ಫಸಲು ಕೊಡುವ ಹೊಲಗದ್ದೆಗಳ ಸಸ್ಯಗಳಂತೆ ಜ್ಞಾನದ್ದೂ ಬೆಳೆತೆಗೆಯಬಹುದು ಎಂದು ಈ ಜರ್ಮನ್ನರು ಭಾವಿಸಿದರು. ಹೀಗಾಗಿ ವೈಜ್ಞಾನಿಕ ಮನೋವೃತ್ತಿಗೆ ಇವರೂ ಸ್ವಲ್ಪಮಟ್ಟಿನ ಅನುಕೂಲ ಕಲ್ಪಿಸಿಕೊಟ್ಟರು. ವೈಜ್ಞಾನಿಕ ಸಂಶೋಧನೆಗಾಗಿ ಜರ್ಮನಿಯಲ್ಲಿ ಬ್ರಿಟನ್ನಿಗಿಂತ ಹೆಚ್ಚಾಗಿ ದೇಶದ ಹಣವನ್ನು ಖರ್ಚುಮಾಡುತ್ತಿದ್ದರು. ಇದು ಬೇಕಾದಷ್ಟು ಫಲಕೊಟ್ಟಿತು. ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದ ಹೊತ್ತಿಗೆ ಜರ್ಮನ್ ವೈಜ್ಞಾನಿಕ ಕಾರ್ಯಕರ್ತರಿಂದಾಗಿ ಪ್ರತಿವಿಜ್ಞಾನದ ವಿದ್ಯಾರ್ಥಿಯೂ ತನ್ನ ಪಠ್ಯವಿಷಯದ ಅತ್ಯಂತ ಸಮಕಾಲೀನ ಸಂಗತಿಗಳನ್ನು ತಿಳಿಯಬೇಕಾದಲ್ಲಿ ಜರ್ಮನ್ ಭಾಷೆಯನ್ನು ಕಲಿಯಲೇಬೇಕಾಯಿತು. ಕೆಲವು ಶಾಖೆಗಳಲ್ಲಿ ಅದರಲ್ಲೂ ರಸಾಯನಶಾಸ್ತ್ರದಲ್ಲಿ ಜರ್ಮನಿ ತನ್ನ ಪಶ್ಚಿಮದ ನೆರೆಹೊರೆಯವರಿಗಿಂತ ಬಹು ಉತ್ತಮ ಮಟ್ಟವನ್ನು ಸಾಧಿಸಿತು. ಹತ್ತೊಂಬತ್ತನೆ ಶತಮಾನದ ಆರನೆ ಮತ್ತು ಏಳನೆ ದಶಕಗಳ ವೈಜ್ಞಾನಿಕ ಪ್ರಯತ್ನಗಳ ಫಲ ಎಂಟನೆ ದಶಕದ ನಂತರ ಕಾಣಿಸಿಕೊಂಡಿತು. ತಾಂತ್ರಿಕ ಮತ್ತು ಔದ್ಯಮಿಕ ಸಂಪದಭಿವೃದ್ಧಿಯಲ್ಲಿ ಜರ್ಮನ್ನರು ಬ್ರಿಟನ್ ಮತ್ತು ಫ್ರಾನ್ಸನ್ನು ಒಂದೇ ಸಮನೆ ಹಿಂದೆ ಹಾಕಿದರು.

ಆವಿಯ ವಿಸ್ತರಣ ಶಕ್ತಿಯ ಸ್ಥಾನದಲ್ಲಿ ಸಿಡಿಯುವ ಗುಣವುಳ್ಳ ಮಿಶ್ರಣದ ವಿಸ್ತರ ಶೀಲತೆಯ ಶಕ್ತಿಯಿಂದ ನಡೆಯುವ ಒಂದು ಹೊಸ ರೀತಿಯ ಯಂತ್ರ ಹತ್ತೊಂಬತ್ತನೆ ಶತಮಾನದ ಎಂಟನೆದಶಕದಲ್ಲಿ ಉಪಯೋಗಕ್ಕೆ ಒಂದು ಉಪಜ್ಞೆಗಳ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವೇ ತೆರೆಯಿತು. ಇದರಿಂದ ಹಗುರವಾದ, ಆದರೆ ಅಧಿಕವಾದ ಕಾರ್ಯಸಾಮರ್ಥ್ಯವುಳ್ಳ ಯಂತ್ರಗಳನ್ನು ಮಾಡಲು ಸಾಧ್ಯವಾಯಿತು. ಇಂತಹ ಯಂತ್ರಗಳನ್ನು ಸ್ವಯಂಚಾಲಿತ ಗಾಡಿಗಳಿಗೆ ಹೊಂದಿಸಲಾಯಿತು. ಇವು ಉತ್ತಮಗೊಳ್ಳುತ್ತಾ ಹೋಗಿ ಕಡೆಗೆ ಎಷ್ಟು ಹಗುರವೂ ಕಾರ್ಯದಕ್ಷವೂ ಆದುವೆಂದರೆ ಬಹುಕಾಲದಿಂದ ಸಾಧ್ಯ ಎಂದು ಮಾತ್ರ ಗೊತ್ತಿದ್ದ ಆಕಾಶಯಾನ ಈಗ ನಿಜವಾಗಿಯೂ ಪ್ರಾಯೋಗಿಕವಾಗಿಯೂ ಸಾಧ್ಯವಾಯಿತು. 1897ರಲ್ಲಿಯೇ ವಾಷಿಂಗ್‌ಟನ್ನಿನ ಸ್ಮಿತ್‌ಸೋನಿಯನ್ ಇನ್‌ಸ್ಟಿಟ್ಯೂಟಿನ ಪ್ರೊಫೆಸರ್ ಲ್ಯಾಂಗ್ಲಿಯವರು ಒಂದು ಹಾರುವ ಯಂತ್ರವನ್ನು ಯಶಸ್ವಿಯಾಗಿ ನಿರ್ಮಿಸಿದ್ದರು. ಆದರೆ ಇದು ಮನುಷ್ಯನನ್ನು ಹೊರುವಷ್ಟು ದೊಡ್ಡದಾಗಿರಲಿಲ್ಲ. 1909ರಲ್ಲಿಯಾಗಲೀ ಮಾನವ ಸಂಚಾರಕ್ಕೆ ವಿಮಾನಗಳು ತಯಾರಾದುವು. ರೈಲುಗಾಡಿಗಳು ಮತ್ತು ಮೋಟಾರ್‌ಗಾಡಿಗಳು ಪರಿಪೂರ್ಣತೆಯನ್ನು ಪಡೆದಮೇಲೆ ಮಾನವ ಸಂಚಾರ

ಸಾಧನಗಳ ವೇಗದ ಏರುವಿಕೆಗೆ ಒಂದು ತಡೆ ಬಂದಂತೆ ತೋರುತ್ತಿತ್ತು. ಆದರೆ ಹಾರುವ ಯಂತ್ರಗಳು ಬರುತ್ತಲೂ ಭೂಮಿಯ ಮೇಲ್ಮೈಯ ಒಂದು ಸ್ಥಳಕ್ಕೂ ಮತ್ತೊಂದು ಸ್ಥಳಕ್ಕೂ ನಡುವಿನ ಪರಿಣಾಮಕಾರಿ ದೂರ ಮತ್ತೊಮ್ಮೆ ಕಡಿಮೆಯಾಗುತ್ತಾ ಹೋಯಿತು. ಹದಿನೆಂಟನೆ ಶತಮಾನದಲ್ಲಿ ಲಂಡನ್ನಿನಿಂದ ಎಡಿನ್‌ಬರೋಗೆ ಹೋಗಲು ಎಂಟು ದಿನ ಬೇಕಾಗುತ್ತಿತ್ತು. 1918ರಲ್ಲಿ ಬ್ರಿಟಿಷ್ ಸಾರ್ವಜನಿಕ ಸಾರಿಗೆ ಮಂಡಲಿಯು ಲಂಡನ್ ಮತ್ತು ಮೆಲ್‌ಬೋರ್ನ್‌ಗಳ ನಡುವಿನ ಪ್ರಯಾಣವನ್ನು ಭೂಗೋಳದ ಅರ್ಧಸುತ್ತಳತೆಯಷ್ಟು ದೂರದ ಪ್ರಯಾಣವನ್ನು ಕೆಲವೇ ವರ್ಷಗಳಾದ ಮೇಲೆ ಅದೇ ಕಾಲಾವಧಿಯಲ್ಲಿ ಪೂರೈಸಲು ಬಹುಶಃ ಸಾಧ್ಯವಾಗಬಹುದೆಂದು ವರದಿಮಾಡಿತು.*

ಆದರೆ ಪ್ರಯಾಣ ಕಾಲಗಳಲ್ಲಿ ಹೀಗೆ ಎದ್ದು ಕಾಣುವಂತೆ ಇಳಿತ ಆಗಿದ್ದರ ಮೇಲೆಯೇ ಹೆಚ್ಚಾಗಿ ಒತ್ತುಕೊಡಬಾರದು. ಇದು ಮಾನವನ ಸಾಮರ್ಥ್ಯದಲ್ಲಿ ಆದ ಇನ್ನೂ ತೀವ್ರವಾದ ಇನ್ನೂ ಮುಖ್ಯವಾದ ಬೆಳೆವಣಿಗೆಗಳ ಒಂದು ಮುಖ ಅಷ್ಟೆ. ಉದಾಹರಣೆಗೆ 19ನೆಯ ಶತಮಾನದಲ್ಲಿ ಕೃಷಿವಿಜ್ಞಾನ ಮತ್ತು ಕೃಷಿಗೆ ಸಂಬಂಧಿಸಿದ ರಸಾಯನಶಾಸ್ತ್ರಗಳೂ ಇದಕ್ಕೆ ಸಮಾನಾಂತರವಾಗಿ ಮುನ್ನಡೆದುವು. 17ನೆಯ ಶತಮಾನದಲ್ಲಿ ಒಂದು ಕ್ಷೇತ್ರದಿಂದ ಪಡೆಯುತ್ತಿದ್ದ ಫಸಲಿನ ನಾಲ್ಕರಷ್ಟು ಐದರಷ್ಟು ಫಸಲು ತೆಗೆಯುವಂತೆ ಆ ಸ್ಥಳಕ್ಕೆ ಗೊಬ್ಬರಹಾಕಿ ಫಲವತ್ತು ಮಾಡುವುದನ್ನು ಜನ ಕಲಿತರು. ವೈದ್ಯಕೀಯ ವಿಜ್ಞಾನದಲ್ಲಿ ಇನ್ನೂ ಅಸಾಧಾರಣ ಮುನ್ನಡೆಯಾಯಿತು. ಮಾನವನ ಸರಾಸರಿ ಆಯುಃ ಪ್ರಮಾಣ ಏರಿತು. ಪ್ರತಿದಿನ್ನ ಮಾಡಬಲ್ಲ ಕಾರ್ಯಪ್ರಮಾಣ ಹೆಚ್ಚಾಯಿತು. ಅನಾರೋಗ್ಯದಿಂದ ಜೀವನ ವ್ಯರ್ಥವಾಗುವುದು ಕಡಿಮೆಯಾಯಿತು.

ಒಟ್ಟಿನಲ್ಲಿ ಚರಿತ್ರೆಯಲ್ಲಿ ಒಂದು ನೂತನ ಅಧ್ಯಾಯವನ್ನೇ ನಿರ್ಮಿಸುವಷ್ಟು ಪರಿವರ್ತನೆ ಈಗ ಮಾನವ ಜೀವನದಲ್ಲಿ ಆಯಿತು. ಒಂದು ಶತಮಾನಕ್ಕಿಂತ ಸ್ವಲ್ಪವೇ ಹೆಚ್ಚು ಸಮಯದಲ್ಲಿ ಈ ಯಾಂತ್ರಿಕ ಕ್ರಾಂತಿ ನಡೆದುಹೋಯಿತು. ಮಾನವನು ತನ್ನ ಜೀವನದ ಭೌತಿಕ ಸೌಕರ್ಯಗಳ ಕ್ಷೇತ್ರದಲ್ಲಿ ಪ್ರಾಚೀನ ಶಿಲಾಯುಗ ಮತ್ತು ಕೃಷಿಯುಗದ ಮಧ್ಯದ ದೀರ್ಘಕಾಲಾವಧಿಯಲ್ಲಿ ಸಾಧಿಸಿದುದಕ್ಕಿಂತ ಹೆಚ್ಚು ಸಾಧಿಸಿದನು ಅಥವಾ ಈಜಿಪ್ಟಿನ ಪೆಪಿ ಮತ್ತು ಇಂಗ್ಲೆಂಡಿನ ಮೂರನೆ ಜಾರ್ಜ್‌ನ ಕಾಲಗಳ ನಡುವಿನ ಅವಧಿಯಲ್ಲಿಟ್ಟುದಕ್ಕಿಂತ ದೊಡ್ಡ ಹೆಜ್ಜೆಯನ್ನಿಟ್ಟನು. ಮಾನವ ವ್ಯವಹಾರಗಳು ಈಗ ಒಂದು ದೈತ್ಯಗಾತ್ರದ ಹೊಸದಾದ ಭೌತಿಕ ಚೌಕಟ್ಟಿನಲ್ಲಿ ನಡೆಯುತ್ತವೆ. ಇದಕ್ಕೆ ಹೊಂದಿಕೊಳ್ಳುವುದಕ್ಕೋಸ್ಕರ ನಮ್ಮ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಮಾರ್ಗಗಳಲ್ಲಿ ತುಂಬಾ ಪುನರ್ವ್ಯವಸ್ಥೆಗಳಾಗಬೇಕಾಗಿವೆ. ಸಹಜವಾಗಿಯೇ ಈ ಪುನರ್ವ್ಯವಸ್ಥೆಗಳು ಯಾಂತ್ರಿಕ ಕ್ರಾಂತಿಯ ಬೆಳವಣಿಗೆಯನ್ನು ಅವಲಂಬಿಸಿವೆ. ಈಗ ಇವುಗಳೆಲ್ಲ ಮೊದಲಘಟ್ಟದಲ್ಲಿವೆ ಅಷ್ಟೆ.

* ಇಂದಿನ ಜೆಟ್‌ಯುಗದಲ್ಲಿ ಈ ಪ್ರಯಾಣಕ್ಕೆ ಒಂದು ದಿನ ಸಹಾ ಬೇಡ.

ಬಿ. ಜಿ. ಕನಕೇಶಮೂರ್ತಿ

ಜನಪದ ಕ್ರೀಡಾಸಾಧನ 'ತೊಡಕು' : ಒಂದು ಪರಿಚಯ

ಪ್ರಾಚೀನ ಕಾಲದಿಂದಲೂ ನಮ್ಮ ಜನಪದರಲ್ಲಿ ಹಲವು ಉದ್ದೇಶಗಳಿಂದ ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳು ಸೃಷ್ಟಿಯಾದದ್ದು ಕಂಡುಬರುತ್ತದೆ. ಈ ಹಲವು ಉದ್ದೇಶಗಳ ಪೈಕಿ ಮುಖ್ಯವಾಗಿ ದೈವಾರಾಧನೆಯ ಉದ್ದೇಶ ಮತ್ತು ದುಡಿಮೆಯ ಬೇಸರದ ಪರಿಹಾರ ಈ ಎರಡನ್ನೂ ಗುರುತಿಸಬಹುದು. ನಮ್ಮ ಜನಪದರ ಸೃಷ್ಟಿಕಾರ್ಯದಲ್ಲಿ ಉದ್ದೇಶ ಏನೇ ಇದ್ದರೂ, ಅವರ ಪ್ರತಿಭೆಯ ವಿರಾಟ ದರ್ಶನವನ್ನು ಅವರ ಪ್ರತಿಯೊಂದು ಜನಪದ ಪ್ರಕಾರಗಳಲ್ಲೂ ಕಾಣಬಹುದು.

ನಮ್ಮ ಜನ ಮನರಂಜನೆಗಾಗಿ, ಬುದ್ಧಿಶಕ್ತಿಯನ್ನು ಅಳೆಯುವುದಕ್ಕಾಗಿ ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದರು. ತಮ್ಮ ನಿತ್ಯ ಬದುಕಿನ ಕೆಲಸಗಳೆಲ್ಲವೂ ಮುಗಿದ ಬಳಿಕ ಸಂಜೆ ಹೊತ್ತು ಒಟ್ಟಾಗಿ ಒಂದು ಕಡೆ ಕಲೆತು ದಿನದ ಆಯಾಸವನ್ನು ಪರಿಹರಿಸಿಕೊಂಡು, ಮನಸ್ಸಿಗೆ ಉಲ್ಲಾಸವನ್ನು, ಬುದ್ಧಿಗೆ ಚುರುಕನ್ನು ತಂದು ಕೊಳ್ಳುವುದಕ್ಕಾಗಿ ಹಾಡು, ಒಗಟು, ಗಾದೆಗಳನ್ನು ಹೇಳುವುದು, ವಿವಿಧ ರೀತಿಯ ಆಟಗಳನ್ನು ಆಡುವುದು, ನಾಟಕಗಳನ್ನು ಪ್ರದರ್ಶಿಸುವುದು, ಕುಣಿತಗಳು, ಉತ್ಸವಗಳು ಹೀಗೆ ಹಲವು ಬಗೆಯಾದ ಮನರಂಜನಾ ಕಾರ್ಯಕ್ರಮಗಳನ್ನು ಅಳವಡಿಸಿ ಕೊಂಡಿದ್ದರು.

ಸಮಸ್ಯಾತ್ಮಕ ಲೆಕ್ಕಗಳನ್ನು, ಒಗಟುಗಳನ್ನು ಹೇಳುವುದರ ಮೂಲಕ ಹಾಗೂ ಕಬ್ಬಿಣದ ಬಳೆಗಳಿಂದ ಮಾಡಿದ ಸಾಧನಗಳು, ಮರದಿಂದ ಮಾಡಿದ ಸಾಧನಗಳನ್ನು ಕೊಟ್ಟು, ಅವನ್ನು ಬಿಡಿಸುವಂತೆ ಹೇಳುತ್ತಿದ್ದರು. ವ್ಯಕ್ತಿ ಇದರಲ್ಲಿ ಸಫಲನಾದರೆ, ಅವನನ್ನು ಬುದ್ಧಿವಂತನೆಂದು, ಚಾಣಾಕ್ಷನೆಂದು ಕರೆಯುತ್ತಿದ್ದರು.

ಪ್ರಸ್ತುತ ಲೇಖನದಲ್ಲಿ ನಾನು ಪರಿಚಯಿಸುತ್ತಿರುವ ಸಾಧನದ ಹೆಸರು 'ತೊಡಕು', ವ್ಯಕ್ತಿಗಳ ಬುದ್ಧಿ, ಚಾಣಾಕ್ಷತನ, ತಂತ್ರಗಳನ್ನು ಅಳೆಯಲು ಜನಪದ ಕಸರತ್ತಿನ ಸಾಧನವಾಗಿ ಬಳಸುತ್ತಿದ್ದ, ಇಂದಿನವರೆಗೂ ಯಾರ ಕಣ್ಣಿಗೂ ಬೀಳದೆ ನಿಗೂಢವಾಗಿದ್ದ ಕಬ್ಬಿಣದಿಂದ ತಯಾರಿಸಿದ ವಿಶಿಷ್ಟ ಸಾಧನವಿದು.

ಇದು ಸಂಯಮ, ಏಕಾಗ್ರತೆಗಳಿಲ್ಲದೆ ಸುಲಭವಾಗಿ ಬಿಡಿಸುವುದಕ್ಕೆ ಬರದ ಒಂದು ಜನಪದ ಆಟದ ಸಾಧನ. ಇದರ ಕ್ರಮ ತಿಳಿದಿಲ್ಲದಿದ್ದರೆ ಅಥವಾ ಮಧ್ಯದಲ್ಲಿ

ಒಂದು ಕ್ರಮ ತಪ್ಪಿದರೂ ಇದನ್ನು ಬಿಡಿಸುವುದಕ್ಕೆ ಬರುವುದಿಲ್ಲ, ಅಳವಡಿಸುವುದಕ್ಕೂ ಆಗುವುದಿಲ್ಲ. ಇದೊಂದು 'ಚಕ್ರವ್ಯೂಹ'ದ ರೀತಿಯ 'ಉಂಗುರವ್ಯೂಹ' ಎಂದೂ ಕರೆಯಬಹುದು.

ಹಿಂದಿನ ಕಾಲದಲ್ಲಿ ಜನಪದರು ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಡುವಾಗ ಗಂಡಿನಿಂದ ಸೌದೆ ಹೊಡೆಸುವುದು, ಭಾರವಾದ ವಸ್ತುಗಳನ್ನು ಎತ್ತಿಸುವುದು ಮುಂತಾದ ಕಾರ್ಯಗಳ ಮೂಲಕ ಅವನ ಶಕ್ತಿ ಸಾಮರ್ಥ್ಯಗಳನ್ನು ಅಳೆಯುತ್ತಿದ್ದರಂತೆ. ಹಾಗೆಯೇ ಈ 'ತೊಡಕ'ನ್ನು ಬಿಡಿಸಿದವನಿಗೆ ಹೆಣ್ಣನ್ನು ಕೊಡುತ್ತಿದ್ದರು!

ಈ 'ತೊಡಕು' ಸಾಧನ ನಮ್ಮ ಮನೆಯಲ್ಲಿ ನಮ್ಮ ತಾತನವರ (ಲಿಂಗಾಚಾರ್ಯ) ಕಾಲದಿಂದಲೂ ಇತ್ತೆಂದು ನಮ್ಮ ತಂದೆಯವರು (ಗುಂಡಾಚಾರ್ಯ) ಹೇಳುತ್ತಿದ್ದರು. ಅಂದರೆ ಇದು ಸುಮಾರು ನೂರೈವತ್ತು ವರ್ಷಗಳಿಗೂ ಪ್ರಾಚೀನದ್ದೆಂದು ಹೇಳಬಹುದು. ಇದು ಯಾವ ಮೂಲದಿಂದ ಬಂತು ಅಥವಾ ಇದನ್ನು ರಚಿಸಿದವರು ಯಾರು ಎಂಬುದು ತಿಳಿದಿಲ್ಲ. ಆದರೆ ಇದನ್ನು ಅಳವಡಿಸುವ ಮತ್ತು ತೆಗೆಯುವ ಸಾಧನ ನಮ್ಮ ಮನೆಯವರೆಲ್ಲರಿಗೂ ತಿಳಿದಿದೆ.

1. ತೊಡಕಿನ ಸ್ವರೂಪ, ರಚನಾವಿಧಾನ ಮತ್ತು ತೊಡಕಿಗೆ ಕೊಕ್ಕೆಯನ್ನು ಅಳವಡಿಸುವ ಹಾಗೂ ಬಿಡಿಸುವ ಬಗೆ ಇಂತಿದೆ:


1:1 **ಸಾಧನ:** ಸುಮಾರು 8 ಅಂಗುಲ ಉದ್ದ ಮತ್ತು $1\frac{1}{4}$ ಅಂಗುಲ ಅಗಲವಿರುವ ಮಂದವಾದ ಕಬ್ಬಿಣದ ಪಟ್ಟಿಯಲ್ಲಿ ಸಮಾಂತರದಲ್ಲಿ 12 ರಂಧ್ರಗಳನ್ನು ಮಾಡಿರುತ್ತದೆ. ಈ 12 ರಂಧ್ರಗಳಲ್ಲೂ ಸರಳವಾಗಿ ಚಲಿಸುವಂಥ 2 ಅಂಗುಲ ಉದ್ದವಿರುವ ಕಬ್ಬಿಣದ 12 ತಂತಿಗಳನ್ನು ಸೇರಿಸಿರುತ್ತದೆ. ಒಂದು ಕಡೆ ಈ ತಂತಿಗಳ ಒಂದೊಂದು ತುದಿಯಲ್ಲೂ $\frac{3}{4}$ ಅಂಗುಲ ವ್ಯಾಸದ, ಬೆಸೆದಿರುವ ಕಬ್ಬಿಣದ ಉಂಗುರಗಳಿರುತ್ತವೆ. ತಂತಿಗಳ ಮತ್ತೊಂದು ತುದಿಗಳನ್ನು ಕಬ್ಬಿಣದ ಪಟ್ಟಿಯಿಂದ ಬೇರ್ಪಡಿಸಲಾಗದಂತೆ ಮಡಿಸಲಾಗಿರುತ್ತದೆ. ಈ ಉಂಗುರಗಳು ಬಿಡಿಬಿಡಿಯಾಗಿರದೆ ಪಕ್ಕದ ತಂತಿಯೊಳಗೆ ಸಿಲುಕಿಕೊಂಡಿರುತ್ತವೆ. ಒಂದು ತುದಿಯ ಒಂದು ಉಂಗುರ ಮಾತ್ರ ಸ್ವತಂತ್ರವಾಗಿರುತ್ತದೆ. ಆದರೆ ಅದರ ತಂತಿಯು ಅದರ ಪಕ್ಕದ ಉಂಗುರದೊಳಗೆ ಸಿಲುಕಿಕೊಂಡಿರುತ್ತದೆ.

1:2 **ಕೊಕ್ಕೆ:** ಇದು ಸುಮಾರು 12 ಅಂಗುಲ ಉದ್ದವಿರುತ್ತದೆ. ಉದ್ದವಾದ ತಂತಿಯನ್ನು ತೆಗೆದುಕೊಂಡು ಚಿತ್ರದಲ್ಲಿ ಕಾಣಿಸಿರುವಂತೆ ಸಮಾಂತರವಾಗಿ ಬಗ್ಗಿಸಿ ತಂತಿಯ ಎರಡೂ ತುದಿಗಳನ್ನು ಬೆಸೆದಿರಲಾಗುತ್ತದೆ. ಹೀಗೆ ಬಗ್ಗಿಸಿದ ಕೊಕ್ಕೆಯು ಮೇಲೆ ತೋರಿಸಿರುವ ಉಂಗುರಗಳೊಳಗೆ ಸರಾಗವಾಗಿ ಚಲಿಸುವಂತಿರಬೇಕು. ಕೊಕ್ಕೆಯನ್ನು ಹಿಡಿಯಲು ಅನುಕೂಲವಾಗುವಂತೆ ಬೆಸೆದಿರುವ ತುದಿಯಲ್ಲಿ ಹಿಡಿಕೆಯನ್ನು ಮಾಡಿರುತ್ತದೆ. ಬಗ್ಗಿಸಿದ ಮತ್ತೊಂದು ತುದಿ ಸ್ವಲ್ಪ ಬಾಗಿರುತ್ತದೆ.


ಕೊಕ್ಕೆಯನ್ನು ಕಬ್ಬಿಣದ ಪಟ್ಟಿಯಲ್ಲಿರುವ ಉಂಗುರಗಳ ತೊಡಕಿಗೆ ಅಳವಡಿಸಬೇಕು ಮತ್ತು ಅದರಿಂದ ಬಿಡಿಸಬೇಕು. ಹೀಗೆ ತೊಡಕಿಗೆ ಕೊಕ್ಕೆಯನ್ನು ಅಳವಡಿಸುವ ಮತ್ತು ಬಿಡಿಸುವ ಈ ಕ್ರೀಡೆಯನ್ನೇ 'ತೊಡಕು' ಎನ್ನುವರು.

ಕೊಕ್ಕೆಯನ್ನು ತೊಡಕಿಗೆ ಅಳವಡಿಸುವ ವಿಧಾನ


ಕೊಕ್ಕೆಯ ಹಿಡಿಕೆಯನ್ನು ಬಲಗೈಯಲ್ಲಿ ಹಿಡಿದುಕೊಳ್ಳಬೇಕು. ಎಡಗೈ ಹೆಬ್ಬೆರಳು ಹಾಗೂ ತೋರುಬೆರಳುಗಳಲ್ಲಿ ಕಬ್ಬಿಣದ ಪಟ್ಟಿಯಲ್ಲಿ ಬಿಡಿಯಾಗಿರುವಂತೆ ತೋರುತ್ತಿರುವ ಮೊದಲನೆಯ ಉಂಗುರ ಮತ್ತು ಅನಂತರದ ಉಂಗುರವನ್ನು ಹಿಡಿದುಕೊಳ್ಳಬೇಕು. (ಚಿತ್ರ 1).



ಎಡಗೈ ಬೆರಳುಗಳಲ್ಲಿ ಹಿಡಿದಿರುವ ಎರಡು ಉಂಗುರಗಳನ್ನು ಕೊಕ್ಕೆಯ ಸಂದುಗಳ ಮಧ್ಯದಿಂದ ಮೇಲಕ್ಕೆ ತೆಗೆದುಕೊಂಡು ಮೊದಲನೆಯ ಉಂಗುರವನ್ನು ಬೆರಳಿನಲ್ಲಿ ಹಾಗೆಯೇ ಹಿಡಿದುಕೊಂಡು ಎರಡನೆಯ ಉಂಗುರವನ್ನು ಕೊಕ್ಕೆಯ ಮೇಲೆ ಸಮಾಂತರವಾಗಿರುವಂತೆ ಮಲಗಿಸಬೇಕು. (ಚಿತ್ರ 2).



ಅನಂತರ ಕೊಕ್ಕೆಯನ್ನು ಬಲಗೈಯಿಂದ ಹಿಂದಕ್ಕೆ ಎಳೆಯಬೇಕು. ಈಗ ಕೊಕ್ಕೆಯ ಮೇಲೆ ಸಮಾಂತರವಾಗಿ ಮಲಗಿರುವ ಎರಡನೆಯ ಉಂಗುರವು ಕೊಕ್ಕೆಯ ಒಳಗೆ ಸೇರಿಕೊಂಡಿರುತ್ತದೆ (ಚಿತ್ರ 3).




ಮತ್ತೆ ಕೊಕ್ಕೆಯನ್ನು ಮುಂದಕ್ಕೆ ತಳ್ಳಿ ಬೆರಳಿನಲ್ಲಿ ಹಾಗೆಯೇ ಹಿಡಿದಿರುವ ಮೊದಲನೆಯ ಉಂಗುರವನ್ನು ಕೊಕ್ಕೆಯ ಸಂದುಗಳಲ್ಲಿ ಕೆಳಗೆ ಬಿಟ್ಟು ಕೊಕ್ಕೆಯನ್ನು ಹಿಂದಕ್ಕೆ ಎಳೆದರೆ, ಕೊಕ್ಕೆಯು ಎರಡನೆಯ ಉಂಗುರದ ತಂತಿಯೊಳಗೆ ಸೇರಿಕೊಂಡಿರುವುದು ಕಾಣುತ್ತದೆ (ಚಿತ್ರ 4).




ಇದಿಷ್ಟು ಕಾರ್ಯ ಕೆಲವೇ ಸೆಕೆಂಡುಗಳಲ್ಲಿ ಮಾಡಬಹುದಾದದ್ದು.

ಈಗ ಮುಂದಿನ ಹಂತ ಮೂರನೆಯ ಉಂಗುರದ ತಂತಿಯೊಳಗೆ ಕೊಕ್ಕೆಯನ್ನು ಸೇರಿಸುವುದು. ಕ್ರಮ ಮೊದಲಿನಂತೆಯೇ ಸ್ವಲ್ಪ ಎಚ್ಚರಿಕೆಯಿಂದ ಗಮನಿಸಬೇಕು. ಮೊದಲಿನ ಎರಡು ಉಂಗುರಗಳನ್ನು ಕೊಕ್ಕೆಯ ಮಧ್ಯದಲ್ಲಿ ಮೇಲಕ್ಕೆ ಎತ್ತಿಕೊಂಡ ರೀತಿಯಲ್ಲಿ ಮೂರನೆಯ ಉಂಗುರವನ್ನೂ ಎತ್ತಿಕೊಂಡು ಕೊಕ್ಕೆಯ ಮೇಲೆ ಸಮಾಂತರವಾಗಿ ಮಲಗಿಸಬೇಕು. ಮೇಲೆ ಎರಡನೆಯ ಉಂಗುರವನ್ನು, ಕೊಕ್ಕೆಯನ್ನು ಹಿಂದಕ್ಕೆ ಎಳೆದು ಕೊಕ್ಕೆಗೆ ಸೇರಿಸಿವಂತೆ ಈಗಲೂ ಕೊಕ್ಕೆಯನ್ನು ಹಿಂದಕ್ಕೆ ಎಳೆದು ಮೂರನೆಯ ಉಂಗುರವನ್ನೂ ಕೊಕ್ಕೆಯೊಳಗೆ ಸೇರಿಸಬೇಕು. ಬಳಿಕ


ಮೂರನೆಯ ಹಾಗೂ ಎರಡನೆಯ ಉಂಗುರಗಳೊಳಗೆ ಕೊಕ್ಕೆಯಿರುವ ಸ್ಥಿತಿಯಲ್ಲಿ ಕೊಕ್ಕೆಯನ್ನು ಮುಂದಕ್ಕೆ ತಳ್ಳಬೇಕು (ಚಿತ್ರ 5).



ಒಂದನೆಯ ಉಂಗುರವನ್ನು ಕೊಕ್ಕೆಯ ಮಧ್ಯದಿಂದ ಮೇಲಕ್ಕೆ ತೆಗೆದುಕೊಂಡು ಕೊಕ್ಕೆಯನ್ನು ಹಿಂದಕ್ಕೆ ಎಳೆದರೆ ಎರಡನೆಯ ಉಂಗುರವು ಕೊಕ್ಕೆಯಿಂದ ಮೇಲಕ್ಕೆ ಬರುತ್ತದೆ (ಚಿತ್ರ 6).




ತರುವಾಯ ಒಂದು ಹಾಗೂ ಎರಡನೆಯ ಉಂಗುರಗಳನ್ನು ಕೊಕ್ಕೆಯ ಮಧ್ಯದಲ್ಲಿ ಕೆಳಗೆ ಬಿಟ್ಟು ಕೊಕ್ಕೆಯನ್ನು ಹಿಂದಕ್ಕೆ ಎಳೆದರೆ ಈಗ ಕೊಕ್ಕೆಯು ಮೂರನೆಯ ಉಂಗುರದ ತಂತಿಯೊಳಗೆ ಸಿಲುಕಿಕೊಂಡಿರುವುದು ಕಂಡುಬರುತ್ತದೆ (ಚಿತ್ರ 7).



ಈ ಮೂರೂ ಉಂಗುರಗಳಿಗೆ ಕೊಕ್ಕೆಯನ್ನು ಅಳವಡಿಸಿದ ರೀತಿಯಲ್ಲಿಯೇ ಉಳಿದ ಉಂಗುರಗಳಿಗೂ ಅಳವಡಿಸಬಹುದು. ಉದಾಹರಣೆಗೆ: ಕೊಕ್ಕೆಯು ನಾಲ್ಕನೆಯ ಉಂಗುರದ ತಂತಿಯೊಳಗಿದ್ದು, ಐದನೆಯ ಉಂಗುರದ ತಂತಿಯೊಳಗೆ ಅದನ್ನು ಅಳವಡಿಸುವಾಗ ಮೇಲಿನ ಕ್ರಮದಂತೆ ಐದನೆಯ ಉಂಗುರವನ್ನು ಕೊಕ್ಕೆಗೆ ಸಿಲುಕಿಸಿ ನಾಲ್ಕನೆಯ ಉಂಗುರದೊಳಗೂ ಸೇರಿಸಿ, ಕೊಕ್ಕೆಯನ್ನು ಮುಂದಕ್ಕೆ ತಳ್ಳಿ ಮೊದಲಿನಂತೆ ಒಂದನೆಯ ಉಂಗುರದಲ್ಲಿ ಕೊಕ್ಕೆಯನ್ನು ಅಳವಡಿಸಿಕೊಂಡು, ಮೂರನೆಯ ಉಂಗುರದೊಳಗೆ, ಕೊಕ್ಕೆಯು ಬರುವಂತೆ ಮಾಡಬೇಕು. ಈಗ ಅದರ ಮುಂದಿನ ನಾಲ್ಕನೆಯ ಉಂಗುರವು ಕೊಕ್ಕೆಯಿಂದ ಬೇರ್ಪಟ್ಟಿರುವುದು ಕಾಣುತ್ತದೆ. ಮತ್ತೆ ಪುನಃ ಮೊದಲಿನ ಮೂರೂ ಉಂಗುರಗಳನ್ನು ಕೊಕ್ಕೆಯಿಂದ ಬೇರ್ಪಡಿಸಿದರೆ ಕೊಕ್ಕೆಯು ಐದನೆಯ ಉಂಗುರದ ತಂತಿಯಲ್ಲಿ ಸಿಲುಕಿಕೊಂಡಿರುವುದನ್ನು ಗಮನಿಸಬಹುದು. ಇದೇ ಕ್ರಮದಲ್ಲಿ ಉಳಿದ ಉಂಗುರಗಳನ್ನೂ ಅಳವಡಿಸಬೇಕು.


3. ಕೊಕ್ಕೆಯನ್ನು ತೊಡಕಿನಿಂದ ಬೇರ್ಪಡಿಸುವ ವಿಧಾನ

ಮೇಲೆ ವಿವರಿಸಿರುವ ಕ್ರಮಕ್ಕೆ ತದ್ವಿರುದ್ಧವಾದ ಕ್ರಮವನ್ನು ಅನುಸರಿಸಿದರೆ ತೊಡಕನ್ನು ಬಿಡಿಸಬಹುದು. ಉದಾ: ಐದನೆಯ ಉಂಗುರದ ತಂತಿಯಿಂದ ಕೊಕ್ಕೆಯನ್ನು ಬಿಡಿಸಬೇಕೆಂದುಕೊಳ್ಳೋಣ ಈಗ ಐದನೆಯ ಉಂಗುರದೊಳಗೆ ಕೊಕ್ಕೆಯನ್ನು ಮುಂದಕ್ಕೆ ತಳ್ಳಿ ಕೊಕ್ಕೆಯು ನಾಲ್ಕನೆಯ ಉಂಗುರದ ತಂತಿಯೊಳಗೆ ಸಿಲುಕಿಕೊಳ್ಳುವ ತನಕ ಮೇಲಿನ ಕ್ರಮವನ್ನು ಪುನರಾವರ್ತಿಸಬೇಕು (ಚಿತ್ರ 8).




ಕೊಕ್ಕೆಯು ನಾಲ್ಕನೆಯ ಉಂಗುರದ ತಂತಿಯೊಳಗೆ ಸಿಲುಕಿಕೊಂಡಾಗ ಐದನೆಯ ಉಂಗುರವನ್ನು ಕೊಕ್ಕೆಯ ತುದಿಯಿಂದ ಮೇಲೆ ತೆಗೆದುಕೊಂಡು, ಕೊಕ್ಕೆಯ

ಮಧ್ಯದಲ್ಲಿ ಕೆಳಗೆ ಬಿಟ್ಟರೆ ಐದನೆಯ ಉಂಗುರವನ್ನು ಬಿಡಿಸಿದಂತಾಯ್ತು (ಚಿತ್ರ 9). ಇದೇ ರೀತಿಯಲ್ಲಿ ಉಳಿದ ಉಂಗುರಗಳನ್ನು ಬಿಡಿಸಬಹುದು.



ಕೊಕ್ಕೆಯನ್ನು ತೊಡಕಿನ ಹನ್ನೆರಡನೆಯ ಉಂಗುರದ ತಂತಿಯೊಳಗೆ ತುಂಬಾ ವೇಗವಾಗಿ ಆಳವಡಿಸುವವರಿಗೆ ಕನಿಷ್ಠ ಒಂದೂವರೆ ಗಂಟೆ ಬೇಕೇಬೇಕು. ಅದೇ ರೀತಿ ಅದೇ ವೇಗದಲ್ಲಿ ತೊಡಕನ್ನು ಬಿಡಿಸಲು ಒಂದೂವರೆ ಗಂಟೆ ಹಿಡಿಯುತ್ತದೆ.



ತೊಡಕು



ಕೊಕ್ಕೆ

ಮನಸ್ಸನ್ನು ಕೇಂದ್ರೀಕರಿಸುವಲ್ಲಿ, ಉಲ್ಲಾಸ ನೀಡುವುದರಲ್ಲಿ 'ತೊಡಕು' ಒಂದು ಅಪೂರ್ವ ಜನಪದ ಕ್ರೀಡಾಸಾಧನ.

ಯಾವ ಮನುಷ್ಯನೂ ಭವಿಷ್ಯದಲ್ಲಿ ಏನಾಗುವುದೆಂಬುದನ್ನು ಹೇಳುವ ಪ್ರವಾದಿಯಾಗಲಾರ. ಆದರೂ ರಚನಾತ್ಮಕವಾದ ಮತ್ತು ಸೃಜನಶೀಲವಾದ ಪ್ರಯತ್ನಕ್ಕೆ ಯಶವು ದೊರಕೇ ತೀರುವುದೆಂಬ ಶ್ರದ್ಧೆಯನ್ನು ತಾಳಿ ಯಾವನೂ ತನ್ನ ಪ್ರಯತ್ನವನ್ನು ಫಲಪ್ರದಗೊಳಿಸಬಲ್ಲ. ಸ್ವಪ್ರಯತ್ನ ಹಾಗೂ ಸಾಧಿಸಿಯೇ ತೀರುವನೆಂಬ ನಿಷ್ಠೆ ಇವುಗಳನ್ನೇ ಎಲ್ಲವೂ ಅವಲಂಬಿಸಿರುತ್ತವೆ. ಕೆಲವೊಂದು ಸಲ ದುರದೃಷ್ಟವು ನಮ್ಮ ಪ್ರಯತ್ನಕ್ಕೆ ಅಡ್ಡಿಯಾದರೂ ಬಲವಾದ ಇಚ್ಛಾಶಕ್ತಿಯಿದ್ದಲ್ಲಿ ಯಶಸ್ಸು ಕಟ್ಟಿಟ್ಟಂತೆಯೆ.

—ನೆಹರೂ

ವಿಚಾರಶೀಲರಿಗೆ ಜಗತ್ತೊಂದು ಪ್ರಹಸನ
ಸಂವೇದನಶೀಲರಿಗೆ ಅದೊಂದು ದುರಂತ ನಾಟಕ.

—ಹೊರೆಸ್ ವಾಲ್‌ಪೋಲ್

ದೇವಕಿ ಎಚ್. ಪಿ.

'ಋಗ್ವೇದದಲ್ಲಿ—ನೇಗಿಲ ಬದುಕು'

ಯುನಕ್ತ ಸೀರಾ ವಿಯುಗಾ ತನುಧ್ವಂ ಕೃತೇ
ಯೋನೌ ವಪತೇ ಹ ಬೀಜಂ !
ಗಿರಾ ಚ ಶ್ರುಷ್ಟಿಃ ಸಭರಾ ಅಸನ್ನೋನೇದೀಯ
ಇತ್ಸೃಣ್ಯಃ ಪಕ್ವಮೇಯಾತ್ ॥ ಋಗ್ವೇದ : 8–101–3

"ಎತ್ತುಗಳನ್ನು ನೇಗಿಲಿಗೆ ಹೂಡಿ, ನೊಣೆಯ ಮೀಟಿರಿ, ಉತ್ತು ಹಸನಾದ ಭೂಮಿಯಲ್ಲಿ ಬೀಜವನ್ನು ಬಿತ್ತಿರಿ; ನಮ್ಮ ಅನ್ನವು ಪುಷ್ಕಲವಾಗಿ ಬೆಳೆಯಲಿ, ಬಲಿತ ಹೊಡೆಗಳನ್ನು ನಮ್ಮ ಕುಡುಗೋಲು ಸಮೀಪಿಸಲಿ".

ಅರ್ಥಸಹಿತವಾಗಿ ಮೇಲಿನ ಮಂತ್ರವನ್ನೋದುವ ಸಹೃದಯನ ಮನದಲ್ಲಿ ಭಕ್ತಿ, ಆಸೆ, ಆಕಾಂಕ್ಷೆಗಳೊಡನೆ ಉಳಲು ಸಿದ್ಧನಾದ ರೈತನೊಬ್ಬನ ಚಿತ್ರ ಮೂಡುವುದಲ್ಲವೆ? ಇದು ಇಡೀ ವಿಶ್ವದಲ್ಲಿಯೇ ಪ್ರಾಚೀನತಮ ಗ್ರಂಥವೆನಿಸಿರುವ ಋಗ್ವೇದದಲ್ಲಿ ಕಂಡುಬರುವ ಕೃಷಿಜೀವನದ ಒಂದು ಚಿತ್ರ. ಪ್ರಾಚೀನ ಭಾರತದ ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಎಲ್ಲವುಗಳ ಅಧ್ಯಯನಕ್ಕೆ ಮಾಹಿತಿ ದೊರೆಯಬಹುದಾದ ಏಕೈಕ ಗ್ರಂಥ ಋಗ್ವೇದ. ಇಷ್ಟಲ್ಲದೆ ಅಂದಿನ ಬದುಕಿನ ಮುಖ್ಯ ಅಂಗವಾಗಿದ್ದ ಕೃಷಿಯ ಅಥವಾ ಸಾವಿರಾರು ವರ್ಷಗಳ ಹಿಂದಿನ ವೈದಿಕ ಭಾರತೀಯರ ಬೇಸಾಯ ಪದ್ಧತಿಯ ಬಗ್ಗೆ ಬೆಳಕು ಚೆಲ್ಲುವುದೂ ಸಹ ಋಗ್ವೇದವೆ. ಇಲ್ಲಿ ನಿರೂಪಿತವಾಗಿರುವ ಕೃಷಿಜೀವನದ ಒಂದು ಸಂಗ್ರಹ ಪರಿಚಯವೇ ಈ ಲೇಖನದ ಉದ್ದೇಶ.

ಋಗ್ವೇದದ ಸಮಾಜ ಕೃಷಿಕ ಸಮಾಜ. ನೇಗಿಲ ಬದುಕನ್ನೇ ಮೆಚ್ಚಿ, ಅದನ್ನೇ ನೆಚ್ಚಿದವನು ಜೀವನದಲ್ಲಿ ಹೆಚ್ಚು ಸುಖಿಯಾದಾನು. ಋಗ್ವೇದದ ಕಿತವಸೂಕ್ತದ ಮಂತ್ರವೊಂದು ಜೂಜುಕೋರರನ್ನು ಖಂಡಿಸಿ ಕೃಷಿಜೀವನವನ್ನು ಪ್ರಶಂಸಿಸುತ್ತದೆ. ಜೂಜಿನ ಕ್ಷಣಿಕ ಸುಖಕ್ಕಾಗಿ ಹಾತೊರೆದವನ ಬಾಳು ಎಂದಿಗೂ

ಹಾಳು. ಏಕೆಂದರೆ ಜೂಜಿನ ಮೋಜು ಕ್ಷುಲ್ಲಕ. ಪಗಡೆಯನ್ನು ಬಿಟ್ಟು ಫಾಲವನ್ನು ನಂಬಿದರೆ ಹೊನ್ನು–ಹೆಣ್ಣು–ಮಣ್ಣುಗಳು ಜೀವನಕ್ಕೆಂದೂ ಹೊರೆಯಾಗದೆ ಹಾರ ವಾದಾವು. ಇಂತಹ ನೇಗಿಲ ಬದುಕಿನ ಮಹಿಮೆಯನ್ನು ಸುಂದರವಾಗಿ ಚಿತ್ರಿಸಿದೆ ಕೆಳಗಿನ ಈ ಮಂತ್ರ :

ಅಕ್ಷೈರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ ವಿತ್ತೇ
ರಮಸ್ವ ಬಹು ಮನ್ಯಮಾನಃ ।
ತತ್ರ ಗಾವಃ ಕಿತವ ತತ್ರ ಜಾಯಾ ತನ್ಮೇ ವಿಚಷ್ಟೆ
ಸವಿತಾಯಮರ್ಯಃ ॥

ರೈತನ ಕೃಷಿ ಜೀವನದಲ್ಲಿ ಅವನಿಗೆ ಬೆನ್ನೆಲುಬಾಗಿ ನಿಲ್ಲುವಂತಹುದು ಆತನ ಎತ್ತು. ಪಶುಸಂಗೋಪನೆಯೂ ಸಹ ಕೃಷಿಜೀವನದೊಂದಿಗೆ ಬೆರೆತುಹೋಗಿತ್ತು. ಇಂದು ಹಣ, ಕಾರು, ಬಂಗಲೆಗಳಿಂದ ಒಬ್ಬ ವ್ಯಕ್ತಿಯ ಸಂಪತ್ತನ್ನು ಅಳೆಯುತ್ತಾರಷ್ಟೆ. ಋಗ್ವೇದಕಾಲದ ಗೃಹಸ್ಥನ ಅಂತಸ್ತು ಅವನ ಪಶುಸಂಪತ್ತು ಮತ್ತು ಧಾನ್ಯದ ಕಣಜವನ್ನೇ ಅವಲಂಬಿಸಿರುತ್ತಿತ್ತು. ಮೇದು ಕೊಟ್ಟಿಗೆಗೆ ಹಿಂದಿರುಗಿದ ಆಕಳು ಕರುವನ್ನು ನೆಕ್ಕುವ ದೃಶ್ಯ ವೈದಿಕ ಗೃಹಸ್ಥನಿಗೆ ನಯನಮನೋಹರ. ನೇಗಿಲನ್ನು ಎಳೆಯುವುದರಿಂದ ಹಿಡಿದು ಕುಡಿಯಲು ನೊರೆಹಾಲನ್ನಿತ್ತು, ಬೆಳೆಗೆ ಗೊಬ್ಬರವನ್ನಿತ್ತು ಸಮಸ್ತ ವಿಧದಲ್ಲಿ ತನಗೆ ಊರುಗೋಲಾಗಿರುವ ಪಶುಮಂದೆಯ ಸಮೃದ್ಧಿಗಾಗಿ ಪ್ರಾರ್ಥನೆ ಕೃಷಿಕನ ಕೊರಳಿನಿಂದ ಮೂಡಿಬರುತ್ತಿತ್ತು. ಸುಡುವ ಬಿಸಿಲಿನಲ್ಲಿ ಬೆವರು ಹರಿಸುತ್ತಾ ರೈತನೊಂದಿಗೆ ಬಳಲುವ ಎತ್ತುಗಳ ಒಳಿತಿಗಾಗಿ ಈ ಕೆಳಗಿನ ಮಂತ್ರ—

"ಶುನಂ ವಾಹಾಃ ಶುನಂ ನರಃ ಶುನಂ
ಕೃಷತು ಲಾಂಗಲಂ ।
ಶುನಂ ವರತ್ರಾ ಬಧ್ಯಂತಾಂ ಶುನಮಷ್ಟ್ರಾಮುದಿಂಗಯ ॥

—ಋಗ್ವೇದ 4–57–4

"ನೇಗಿಲಿನ ಭಾರವನ್ನು ಹೊತ್ತು ಎಳೆಯುವ ಕಾಯಕ ಈ ಮೂಕಪ್ರಾಣಿಗಳಿಗೆ ಸುಖವಾಗಿ ಪರಿಣಮಿಸಲಿ. ನೇಗಿಲು ಸುಲಭವಾಗಿ ಭೂಮಿಯನ್ನು ಬಗೆಯುತ್ತಾ ಸಾಗಿದರೆ ಅದೆಷ್ಟು ಚೆನ್ನ; ಎತ್ತುಗಳ ಮೂಗುದಾರ ಅವುಗಳನ್ನು ನೋಯಿಸದಿದ್ದರೆ ಮತ್ತೂ ಸುಲಭ" ಇದೇ ಮೇಲಿನ ಮಂತ್ರದಲ್ಲಿ ಪ್ರತಿಬಿಂಬಿತವಾಗಿರುವ ಋಗ್ವೇದದ ರೈತನ ಪರಮ ಹಾರೈಕೆ.

ಋಗ್ವೇದದಲ್ಲಿ ಶುನ, ಸೀರ, ಲಾಂಗಲ, ಫಾಲ, ಸೀತಾ ಎಂಬ ಶಬ್ದಗಳು 'ನೇಗಿಲು' 'ನೇಗಿಲುಗುಳ' ಎಂಬ ಅರ್ಥದಲ್ಲೇ ವಿಶೇಷವಾಗಿ ಪ್ರಯುಕ್ತವಾಗಿವೆ. ಕೆಲವೊಮ್ಮೆ 'ಶುನ' ಎಂದರೆ ಇಂದ್ರನೆಂದೂ, 'ಸೀರ' ಎಂದರೆ ವಾಯುವೆಂದೂ (ಅಂತರಿಕ್ಷೇ ಸರಣಾತ್ ಸೀರಃ), 'ಶುನಾ—ಸೀರ' ಪದಕ್ಕೆ ಇಂದ್ರವಾಯುಗಳೆಂದೂ ಅರ್ಥೈಸಿರುವುದನ್ನು ಕಾಣಬಹುದು. ಬೇಸಾಯದ ಬದುಕು ಸಾರ್ಥಕವಾಗಲು ಭಗವಂತನ ಕೃಪೆಯು ರೂಪದಲ್ಲಿ ಮಳೆಯೂ ಬೀಳಬೇಕಷ್ಟೆ. ಹಾಗಾದಾಗ ಮಾತ್ರ ಕೃಷಿಕನು ತನ್ನ ಕಾಯಕವನ್ನೆಸಗಲು ನೆಮ್ಮದಿಯಿಂದ ಹೊರಟಾನು. 'ಶುನಾ ಸೀರರೇ', (ಇಂದ್ರವಾಯುಗಳೇ) ನಮಗೆ ಶುಭವನ್ನುಂಟುಮಾಡಿರಿ' ಎಂಬ ಕಳಕಳಿಯ ಹಂಬಲ ಈ ಕೆಳಗಿನ ಮಂತ್ರದಲ್ಲಿ ಚಿತ್ರಿತವಾಗಿದೆ. ಏಕೆಂದರೆ ಯೋಗ್ಯಸಮಯದ ಮಳೆಯಿಂದಲೇ ಒಳ್ಳೆಯ ಬೆಳೆ.

"ಶುನಂ ನಃ ಫಾಲಾ ವಿಕೃಷಂತು ಭೂಮಿಂ ಶುನಂ
ಕೀನಾಶಾಃ ಅಭಿಯಂತು ವಾಹೈಃ |
ಶುನಂ ಪರ್ಜನ್ಯೋ ಮಧುನಾ ಪಯೋಭಿಃ ಶುನಾಸೀರಾ
ಶುನಮಸ್ಮಾಸು ಧತ್ತಂ ||

"ನೇಗಿಲೇ ಮೊದಲಾದ ಉಳುವ ಸಾಧನಗಳು ಸುಖವಾಗಿ ಉಳಲಿ; ರೈತರು ಎತ್ತುಗಳೊಡನೆ ಸುಖವಾಗಿ ತಮ್ಮ ಕಾರ್ಯಗಳಿಗೆ ಹೋಗಲಿ; ಪರ್ಜನ್ಯನು ಮಧುರವಾದ ಉದಕಗಳನ್ನು ಸುಖಕಾರಕವಾಗಿರುವಂತೆ ವರ್ಷಿಸಲಿ, ಶುನಾಸೀರರೇ; ನಮಗೆ ಸುಖವನ್ನುಂಟುಮಾಡಿರಿ."

ಇಂದ್ರವಾಯುಗಳಷ್ಟೇ ಅಲ್ಲದೆ ಮರುತ್ತುಗಳೆಂಬ ದೇವತೆಗಳೂ ಸಹ 'ಮಳೆರಾಯ'ನನ್ನು ಭೂಮಿಯತ್ತ ತೆರಳುವಂತೆ ಒಲಿಸುವರು. ಈ ಮಳೆರಾಯನು (ಪರ್ಜನ್ಯ) ರಥಾರೂಢನಾಗಿ ಭೂಲೋಕದಲ್ಲೆಲ್ಲಾ ಸಂಚರಿಸಿದಲ್ಲಿ ನದಿಗಳು ತುಂಬಿ ಹರಿದಾವು. ಐದನೆಯ ಮಂಡಲದ ಕೆಲವಾರು ಮಂತ್ರಗಳು ಕೃಷಿಬದುಕಿಗೆ ಸಹಜವೆನಿಸುವ ಬಯಕೆಗಳನ್ನೇ ತುಂಬಿಕೊಂಡಿವೆ. 'ಮಳೆರಾಯನು ಮೋಡಗಳೆಂಬ ಚೀಲಗಳನ್ನು ಎತ್ತಿ ಹಿಡಿದು ಮಳೆಯನ್ನು ಸುರಿಸಲಿ, ನದಿಗಳು ಪೂರ್ವಾಭಿಮುಖವಾಗಿ ಹರಿಯಲಿ, ಪಶುಗಳ ಪಾನಕ್ಕೆ ಯೋಗ್ಯವಾದ ಜಲವು ತುಂಬಿ ಹರಿಯಲಿ" ಎಂಬ ರೈತನೊಬ್ಬನ ಆಕಾಂಕ್ಷೆಗಳನ್ನು ಈ ಮಂತ್ರಗಳು ಬಿಂಬಿಸುತ್ತವೆ. ಮಳೆಹನಿಗಳ ಸ್ಪರ್ಶದಿಂದ ಭೂದೇವಿ ಪುಳಕಿತಳಾಗಿ ಆನಂದಪಟ್ಟಾಳು—

"ಪ್ರತೀದಂ ವಿಶ್ವಂ ಮೋದತೇ ಯತ್ಕಿಂ ಚ ಪೃಥಿವ್ಯಾಮಧಿ"

ರೈತರ ಬಾಳಿನಲ್ಲಿ ಮಳೆಯು ಪಾತ್ರ ಮಹತ್ತರವಾದದ್ದು. ಅತಿವೃಷ್ಟಿ ಅನಾವೃಷ್ಟಿ ಎರಡೂ ಸಹ ರೈತನ ಬಾಳನ್ನು ಗೋಳಾಗಿಸಬಾರದು. ಮಳೆರಾಯನ 'ಮುನಿಸು' ಕೆಡುಕನ್ನುಂಟುಮಾಡುವಂತೆ ಅತಿಯಾದ ಅನುಗ್ರಹವೂ ಭಯಂಕರವಾದೀತು. ಅದಕ್ಕೆಂದೇ ಈ ಕೆಳಗಿನ ಪ್ರಾರ್ಥನೆ—

"ಅವರ್ಷೀರ್ವರ್ಷಮುದುಷೂ ಗೃಭಾಯಾಕರ್ಧನ್ವಾನ್ಯತ್ಯೇತ ವಾಉ ।
ಅಜೀಜನ ಓಷಧೀರ್ಭೋಜನಾಯ ಕಮುತ ಪ್ರಜಾಭ್ಯೋಽವಿದೋ
ಮನೀಷಾಂ ॥

"ಎಲೈ ಪರ್ಜನ್ಯನೇ, ನೀನು ವೃಷ್ಟಿಯನ್ನು ಸುರಿಸಿದ್ದೀಯೆ. ಒಂದೇ ಸಮನೆ ಬೀಳತಕ್ಕ (ಅದೇ) ಮಳೆಯನ್ನು ನಮಗೆ ತೊಂದರೆಯಾಗುವ ರೀತಿಯಲ್ಲಿ ಬೀಳದಂತೆ ತಡೆದಿದು, ನೀರಿಲ್ಲದ ಮರಳುಗಾಡುಗಳನ್ನು ದಾಟಲು ಅನುಕೂಲವಾಗಿರುವಂತೆ ಉದಕಭರಿತವನ್ನಾಗಿ ಮಾಡಿರುವೆ, ಓಷಧಿಗಳನ್ನು ಮಾನವರ ಉಪಯೋಗಕ್ಕೆ ಯೋಗ್ಯವಾಗಿರುವಂತೆ ಮಾಡಿರುವೆ, ಋತ್ವಿಕ್ಕುಗಳಿಂದ ಸ್ತುತಿಯನ್ನು ಪಡೆದಿರುವೆ.

ಅನಾವೃಷ್ಟಿಯಿಂದ ಹೇಗೆ ಕೇಡಾಗುವುದೋ ಹಾಗೆಯೇ ಹದಮೀರಿ ಬಿದ್ದಂತಹ ಮಳೆಯೂ ತೊಂದರೆಯನ್ನೇ ತಂದೀತೆಂಬ ಅಂಜಿಕೆಯಿಂದ 'ಕ್ಷೇತ್ರಪತಿ' ಎಂಬ ಮತ್ತೊಬ್ಬ ದೇವತೆಗೂ ಕಾತರದಿಂದ ಕೈಮುಗಿಯುವನು ಋಗ್ವೇದದ ರೈತ—

ಕ್ಷೇತ್ರಸ್ಯ ಪತೇ ಮಧುಮಂತಮೂರ್ಮಿಂ ಧೇನುರಿವ
ಪಯೋ ಅಸ್ಮಾಸು ಧುಕ್ಷ್ವ ।
ಮಧುಶ್ಚುತಂ ಘೃತಮಿವ ಸುಪೂತಮೃತಸ್ಯ ನಃ
ಪತಯೋ ಮೃಳಯಂತು ॥

ಎಲೈ ಕ್ಷೇತ್ರಪತಿಯೇ ; ಹಾಲನ್ನು ಹಸುವು ಕರೆಯುವಂತೆ, ಮಧುವಿನ ಬಿಂದುಗಳಂತೆ ರುಚಿಕರವಾದುದೂ, ಘೃತದಂತೆ ಪವಿತ್ರವೂ ಮಾಧುರ್ಯೋಪೇತವೂ ಆದ (ಉದಕವನ್ನು) ಮಳೆಯನ್ನು ಸುರಿಸಿ, ಪರ್ಜನ್ಯ ದೇವತೆಗಳು ನಮ್ಮನ್ನು ತೃಪ್ತಿಪಡಿಸಲಿ.

ಹದವಾದ ಮಳೆಗಾಗಿ ಆದರಿಂದ ಲಭಿಸುವ ಒಳ್ಳೆಯ ಬೆಳೆಗಾಗಿ ರೈತರು ಭಕ್ತಿಯಿಂದ ಪ್ರಾರ್ಥಿಸುತ್ತಾ ಶರಣುಹೋಗುವ ಈ 'ಕ್ಷೇತ್ರಪತಿ' ಎಂದರೆ ಯಾರು? ಜಮೀನುದಾರನೋ? ಅಲ್ಲ; ಈ ಕ್ಷೇತ್ರಪತಿ ರುದ್ರ, ವೇದಭಾಷ್ಯಕಾರರಲ್ಲಿ ಬಹು ಪ್ರಸಿದ್ಧರಾದ ಮುಖ್ಯವಾಗಿ ಕರ್ನಾಟಕದವರೂ ಆದ ಸಾಯಣಾಚಾರ್ಯರು ಕ್ಷೇತ್ರಪತಿ ಎಂಬ ಪದಕ್ಕೆ 'ರುದ್ರ' 'ಅಗ್ನಿ' ಅಥವಾ ಇವರಿಬ್ಬರೂ ಅಲ್ಲದ ಮತ್ತೊಬ್ಬ ಸ್ವತಂತ್ರದೇವತೆ ಇರಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ನಿರುಕ್ತಕಾರರಾದ ಯಾಸ್ಕಾಚಾರ್ಯರ ಪ್ರಕಾರ 'ಕ್ಷೇತ್ರಪತಿ' ಎಂಬ ಪ್ರತ್ಯೇಕ ದೇವತೆಯೇ ಉಂಟು. (ನಿರುಕ್ತ 10–14). ಇವನೇ ಭೂರಕ್ಷಕ. ಮಳೆಯಿಂದ ಹದಗೊಂಡ ಭೂಮಿಯಲ್ಲಿ ನೇಗಿಲನ್ನು ಹೂಡುವ ಮುನ್ನ ಈ ಕ್ಷೇತ್ರಪತಿಗೆ ಪ್ರಾರ್ಥನೆ ಸಲ್ಲಲೇಬೇಕು.

ಮಳೆಯಿಂದ ಮೆದುವಾಗಿ ಹದಗೊಂಡ ಭೂಮಿಯನ್ನು ಬಗೆಯುತ್ತಾ ಸಾಗುವ 'ಸೀತೆಯೂ' (ನೇಗಿಲಿನ ಗುಳ) ಸಹ 'ಎತ್ತಿನ ಜೋಡಿ' 'ಕಾಲೋಚಿತ ಮಳೆ' ಗಳಷ್ಟೇ ಮುಖ್ಯ. ಉಳುವ ಸಾದನಗಳಲ್ಲಿ ಯಾವುದು ಮುಖ್ಯ? ಯಾವುದು ಮುಖ್ಯವಲ್ಲ? ಎಲ್ಲವೂ ಮುಖ್ಯವೇ ಸರಿ. "ಮಳೆರಾಯ, ಮಳೆರಾಯ, ಹೊನ್ನ ಸುರಿಸು? ಭೂಮಿತಾಯಿ! ಭೂಮಿತಾಯಿ! ಬಂಗಾರ ತರಿಸು" ಎಂಬ ಜಾನಪದ ಗೀತೆ ಇಂದು ಎಲ್ಲರಿಗೂ ಪರಿಚಿತವಷ್ಟೆ. ಸೀತೆಯ ಅನುಗ್ರಹಕ್ಕಾಗಿ ಋಗ್ವೇದ ಕಾಲದ ಕೃಷಿಕನ ಪ್ರಾರ್ಥನೆ ಇಂತಿರುವುದು.

ಅರ್ವಾಚೀ ಸುಭಗೇ ಭವ ಸೀತೇ
ವಂದಾಮಹೇ ತ್ವಾ ।
ಯಥಾ ನಃ ಸುಭಗಾಸಸಿ ಯಥಾ ನಃ ಸುಫಲಾಸಸಿ ॥

ರೈತನ ದೈಹಿಕ ಶ್ರಮದೊಡನೆ ಸೀತೆಯ (ನೇಗಿಲು) ಕೃಪೆಯೂ ಬೆರೆತಾಗ ಉತ್ತಮ ಫಲ ಖಂಡಿತವಾಗಿಯೂ ದೊರೆಯುವುದು ಅವಳೀಯುವ ಉತ್ತಮ ಬೆಳೆಯೇ 'ಸುಭಗಾ' ಶ್ರೇಷ್ಠಸಂಪತ್ತು. ಇಂತಹ ಸಂಪತ್ತಿನಿಂದಲೇ ಬದುಕು ಸಾರ್ಥಕ. ಜೀವನ ಸಂತೃಪ್ತವಾಗಬೇಕಾದರೆ ಈ ಧಾನ್ಯಸಂಪತ್ತು ಅಕ್ಷಯವಾಗಿರಬೇಕು. ಮಕ್ಕಳು ಮೊಮ್ಮಕ್ಕಳೆಲ್ಲಾ ಉಂಡರೂ ಸವೆಯದಂತಿರಬೇಕು. ಆ ಉದ್ದೇಶಕ್ಕಾಗಿ ಕೆಳಗಿನ ಈ ಪ್ರಾರ್ಥನೆ:

ಯೇನ ತೋಕಾಯ ತನಯಾಯ ಧಾನ್ಯಂ ಬೀಜಂ
ವಹಧ್ವೇ ಅಕ್ಷಿತಂ ।

ಅಸ್ಮಭ್ಯಂ ತದ್ಧತ್ತನಯದ್ವ ಈ ಮಹೇ ರಾಧೋ

ವಿಶ್ವಾಯು ಸೌಭಗಂ ॥ (5-50-13)

(ಇಲ್ಲಿ ತೋಕಾಯ ಮಗನಿಗೆ, ತನಯಾಯ ಮೊಮ್ಮಗನಿಗೆ ಎಂದರ್ಥ).

ಹದವಾಗಿ ಬಿದ್ದ ಮಳೆಯಿಂದ ಹುರುಪುಗೊಂಡ ರೈತ ಶ್ರಮಪಟ್ಟು "ಉತ್ತು ಬಿತ್ತಿದರೆ ಜಾಯಿಗೆ ತುತ್ತು." ಲೋಕಕ್ಕೆ ಅನ್ನ ದೊರೆತೀತು.

"ಕೃಷನ್ನಿತ್ಫಾಲ ಆಶಿತಂ ಕೃಣೋತಿ" (10-117-7)

ಹೀಗೆ ಚಳಿ ಮಳೆ ಬಿಸಿಲು ಗಾಳಿಗಳೆನ್ನದೆ ಬೇಸಾಯದ ಬದುಕನ್ನಪ್ಪಿದ, ಊಹೆಗೂ ನಿಲುಕದ ಅಂದಿನ ಆ ಪ್ರಾಚೀನ ವೈದಿಕಯುಗದಿಂದ ಇಂದಿನವರೆಗೂ ರೈತಪರಂಪರೆ ಮಣ್ಣಿನಿಂದ ಅನ್ನ ತೆಗೆಯುವ ಪವಿತ್ರಕಾರ್ಯವನ್ನಂಟಿಕೊಂಡೇ ಬಂದಿದೆ ಅನೇಕ ರಾಜರುಗಳು ಈ ಜಗತ್ತಿನಲ್ಲಿ ದರ್ಪದಿಂದ ಆಳಿದ್ದಾರೆ. ಕೋಟೆ ಕೊತ್ತಲಗಳು ಮೂಡಿವೆ—ಮುದುಡಿವೆ ಆದರೆ ಕೃಷಿಜೀವನವನ್ನಪ್ಪಿದ ಮುಗ್ಧ ರೈತನ ಕಾತರ ಕಳವಳಗಳು ರಾಜ್ಯ ಕೋಟೆಕೊತ್ತಲಗಳಿಗಾಗಿಯಲ್ಲ. ಅಂದಿನ ಋಗ್ವೇದ ಕಾಲದ ರೈತ ತನ್ನ ಗೋವುಗಳ ಅಶ್ವಗಳ ರಕ್ಷಣೆಗಾಗಿ ಪ್ರಾರ್ಥಿಸುತ್ತಿದ್ದ. ಹಸುಗಳ ಮೇವಿಗಾಗಿ ಸ್ವಂತ ಹುಲ್ಲುಗಾವಲನ್ನು ಹೊಂದಬೇಕೆಂಬ ಆಸೆ ಅವನದಾಗಿತ್ತು. ಮೇಯಲು ಕಾಡಿಗೆ ಹೋದ ಹಸುಗಳನ್ನು ವ್ಯಾಘ್ರಾದಿಗಳು ಭಕ್ಷಿಸದಿರಲಿ. ಅವು ಕಾಲುಜಾರಿ ಬಾವಿಗೆ ಬೀಳದಿರಲಿ, ಸಂಧ್ಯಾಸಮಯದಲ್ಲಿ ಸುರಕ್ಷಿತವಾಗಿ ಹಿಂತಿರುಗಲೆಂಬ ಕಳವಳದ ಬೇಡಿಕೆ ಪೂಷನನೆಂಬ ದೇವತೆಯ ಮುಂದೆ ಇರಿಸಲ್ಪಡುತ್ತಿತ್ತು. ಲೋಕ ಹಿತಕ್ಕಾಗಿ ಮಣ್ಣಿನಿಂದ ಅನ್ನ ಬೆಳೆಯುವ ಕೃಷಿಕನ ಬಾಳೇ ಎಲ್ಲಕ್ಕಿಂತ ಶ್ರೇಷ್ಠ. ಅನ್ನವಿಲ್ಲದೆ ಲೋಕಯಾತ್ರೆ ಸಾಗುವುದಾದರೂ ಎಂತು? ಅನ್ನದಿಂದಲೇ 'ಜೀವರಾಶಿ' ನಿಂತಿರುವುದು. ಅಂತೆಯೇ ಉಪನಿಷತ್ತಿನ ಋಷಿಗಳು ಅನ್ನದ ಮಹಿಮೆಯನ್ನು ಪರಬ್ರಹ್ಮತತ್ತ್ವಕ್ಕೆ ಹೋಲಿಸಿರುವರು. "ಅನ್ನದೇವರ ಮುಂದೆ ಇನ್ನು ದೇವರುಂಟೆ?" ಎಂಬುದಾಗಿ ಸರ್ವಜ್ಞನಂತಹ ಕವಿಗಳು ಉದ್ಗರಿಸಿರುವರು.

ಅಂದಿನ ವೈದಿಕಯುಗದಿಂದ ಹಿಡಿದು ಇಂದಿನ ಈ ಕಂಪ್ಯೂಟರ್ ಯುಗದಲ್ಲಿ ಕಂಡುಬರುತ್ತಿರುವ ಸಮಸ್ತ ರೀತಿಯ ಸಂಘಟನೆ—ಸ್ಫೂರ್ತಿ—ಪ್ರೇರಣೆಗಳ ಹಿಂದೆ ಅಡಗಿರುವ ಶಕ್ತಿಯೇ ಅನ್ನ. ಅನ್ನದಾತ ರೈತನೇ ಪರಮಯೋಗಿ. "ನೇಗಿಲ ಗುಳದೊಳಗಡಗಿದೆ ಕರ್ಮ, ನೇಗಿಲ ಮೇಲೆಯೇ ನಿಂತಿದೆ ಧರ್ಮ" ಎಂಬ ಕವಿವರೇಣ್ಯರೊಬ್ಬರ ಮಾತುಗಳು ಚಿರಸ್ಮರಣೀಯ.

"ಜೀಯಾತ್ ಚಿರಂ ಗೀರ್ವಾಣ ಭಾರತೀ"

ಹಲವು ಆಧಾರಗಳಿಂದ.

ಪ್ರಭು ಖಾನಾಪುರೆ

ಉಡಿಕೆ

ಮದುವೆಯ ವ್ಯವಸ್ಥೆ ಎಂದಿನಿಂದ ಪ್ರಾರಂಭವಾಯಿತೆಂದು ಖಚಿತವಾಗಿ ನಿರ್ಧರಿಸುವುದು ಸಾಧ್ಯವಿಲ್ಲ. ಇದು ಮಾನವನಷ್ಟೇ ಪ್ರಾಚೀನವಾದುದು. ಒಂದು ಗಂಡು ಮತ್ತು ಒಂದು ಹೆಣ್ಣನ್ನು ವಿವಿಧ ಆಚರಣೆಗಳ ಮೂಲಕ ಒಂದುಗೂಡಿಸುವ ವಿಧಿಯೇ ಮದುವೆ, ಅಂದರೆ ಅವರ ಲೈಂಗಿಕ ಬದುಕಿಗೆ ಸಾರ್ವಜನಿಕವಾಗಿ ಒಪ್ಪಿಗೆ ಕೊಡುವುದು. ಇದು ಹಿಂದೂಗಳಲ್ಲಿ ಒಂದು ಧಾರ್ಮಿಕ ಸಂಸ್ಕಾರವೆಂದು ಪವಿತ್ರೀಕರಿಸಿ ವಿಧಿಪೂರ್ವಕವಾಗಿ ಶಾಸ್ತ್ರೋಕ್ತವಾಗಿ ನೆರವೇರಿಸುವರು. ಪಾಶ್ಚಿಮಾತ್ಯರಲ್ಲಿ ಮದುವೆ ಒಂದು ಕರಾರು. ಮುಸ್ಲಿಂರಲ್ಲಿ ಮದುವೆ ಒಂದು ಸಾಮಾಜಿಕ ಒಪ್ಪಂದವೆಂದು ತಿಳಿಯುವರು. ಕಾರಣ ಇವರಲ್ಲಿ ಮರುಮದುವೆ ಮತ್ತು ವಿಚ್ಛೇದನಗಳು ಸಮಸ್ಯೆಗಳಾಗಿ ಪರಿಣಮಿಸುವುದಿಲ್ಲ. ಹಿಂದುಗಳಲ್ಲಿ ಇವುಗಳು ಸಮಸ್ಯೆಗಳಾಗಿವೆ. ಒಂದು ಸಲ ಮದುವೆಯಾದರೆ ಮುಗಿಯಿತು, ಜೀವನ ಪರ್ಯಂತ ಅದನ್ನು ಮುಂದುವರೆಸಿಕೊಂಡು ಹೋಗಬೇಕು. ದಂಪತಿಗಳಲ್ಲಿ ಹೊಂದಿಕೆಯಾಗದಿದ್ದರೆ ಬೇರೆ ಬೇರೆಯಾಗಿ ಉಳಿಯಬೇಕು. ಗಂಡಸರು ಮರು ಮದುವೆಮಾಡಿಕೊಳ್ಳುವರು ಇಲ್ಲವೇ ಉಪಪತ್ನಿಯರನ್ನು ಇಟ್ಟುಕೊಳ್ಳುವರು. ಆದರೆ ಹೆಣ್ಣು ಹಾಗೆಯೇ ಇರಬೇಕು. ಗಂಡ ಸತ್ತರೆ ಸಹಗಮನ ಮಾಡಬೇಕು ಇಲ್ಲವೆ ವಿಧವೆಯಾಗಿಯೇ ಉಳಿಯಬೇಕು. ಗಂಡ ಬಿಟ್ಟರೆ ಬೇರೊಂದು ಮದುವೆಯಾಗುವ ಅವಕಾಶವಿಲ್ಲ. ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಹೊಂದಿದ ಹಿಂದುಗಳಲ್ಲಿ ಗಂಡಸರು ಮರುಮದುವೆ ಮಾಡಿಕೊಳ್ಳುವ, ಉಪಪತ್ನಿಯರನ್ನು ಹೊಂದುವ ಅವಕಾಶವನ್ನು ಧರ್ಮಶಾಸ್ತ್ರಗಳು ಕಲ್ಪಿಸಿಕೊಟ್ಟು ಸ್ತ್ರೀಯರಿಗೆ ಈ ಅವಕಾಶವನ್ನು ಕೊಡದೆ ತದ್ವಿರುದ್ಧ ಕಟ್ಟುಪಾಡುಗಳನ್ನು ಹಾಕಿವೆ. ಪ್ರಕೃತಿ ಗಂಡಿಗೆ, ಹೆಣ್ಣಿಗೆ ಭೇದವನ್ನು ಸಮಾನ ನಿಯಮಗಳನ್ನು ಒದಗಿಸಿದರೂ ಸಮಾಜದ ಧೋರಣೆಗಳು ಗಂಡಿನ ಪರವಹಿಸಿ ಹೆಣ್ಣಿನ ಸ್ಥಾನಮಾನಗಳನ್ನು ಮೊಟಕುಗೊಳಿಸುವುದರ ಮೂಲಕ ಸ್ತ್ರೀಕುಲಕ್ಕೆ ಅನ್ಯಾಯ ಮಾಡಿವೆ. ನಾಗರಿಕತೆ ಬೆಳೆದಂತೆ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಗಾಢವಾದಂತೆ ಸ್ತ್ರೀಗೂ ಸಮಾನ ಅವಕಾಶಗಳು ದೊರೆಯುತ್ತಿವೆ.

ಲಾರ್ಡ ವಿಲಿಯಂ ಬೆಂಟಿಂಕ್, ರಾಜಾರಾಮ್ ಮೋಹನರಾಯ್, ಈಶ್ವರ

ಚಂದ್ರ ವಿದ್ಯಾಸಾಗರ ವಿಧವಾ ವಿವಾಹವನ್ನು ಪ್ರೋತ್ಸಾಹಿಸಿ ಸ್ತ್ರೀಯರಿಗೆ ಸಾಮಾಜಿಕ ಸ್ಥಾನಮಾನವನ್ನು ಕಲ್ಪಿಸಿಕೊಡಲು ಪ್ರಯತ್ನಿಸಿದರು. ಇವರೆಲ್ಲರ ಸತತ ಪ್ರಯತ್ನದ ಫಲವಾಗಿ 1856ರಲ್ಲಿ ಹಿಂದು ವಿಧವಾ ವಿವಾಹ ಜಾರಿಗೆ ಬಂತು. ಕ್ರೈಸ್ತ, ಮುಸ್ಲಿಂ ಮುಂತಾದ ಧರ್ಮದವರಲ್ಲಿ ಅದರಲ್ಲಿಯೂ ಪಾಶ್ಚಿಮಾತ್ಯ ಸಮಾಜದಲ್ಲಿ ವಿಧವೆತನ ಅನಿಷ್ಟವೆಂಬ ನಂಬಿಕೆ ಇಲ್ಲ. ಹೆಂಡತಿ ಸತ್ತರೆ ಅಥವಾ ಹೆಂಡತಿಯನ್ನು ಬಿಟ್ಟವರು ಸಾಮಾಜಿಕವಾಗಿಯಾಗಲಿ, ಧಾರ್ಮಿಕವಾಗಿಯಾಗಲಿ ಯಾವುದೇ ಅಡೆತಡೆಯಿಲ್ಲದೆ ಮತ್ತೊಂದು ಮದುವೆ ಮಾಡಿಕೊಳ್ಳಬಹುದು ಹಿಂದುಗಳಲ್ಲಿಯೂ ಧರ್ಮಶಾಸ್ತ್ರಗಳು ಮತ್ತು ಕೆಲವು ಸ್ಮೃತಿಗಳು ಹೆಂಡತಿ ಸತ್ತ ವಿಧುರ ಮರುಮದುವೆ ಮಾಡಿಕೊಳ್ಳುವುದನ್ನು ಕಠೋರವಾಗಿ ವಿರೋಧಿಸುತ್ತವೆ. "ಕರ್ನಾಟಕದ ಬ್ರಾಹ್ಮಣರು ವಿಧವಾ ವಿವಾಹವನ್ನು ಒಪ್ಪುವುದಿಲ್ಲ. ವಿಧವಾ ವಿವಾಹ ಆಗಬಾರದೆಂಬ ನಿರ್ಬಂಧದ ವಿರುದ್ಧ ಕಳೆದ ನೂರು ವರ್ಷಗಳಲ್ಲಿ ಹಲವು ಚಳವಳಿಗಳಾಗಿವೆ. ಧಾರವಾಡದ ವೆಂಕಟರಾಗೋಳಕಟ್ಟಿ, ಉತ್ತರ ಕರ್ನಾಟಕದ ಶಾಮರಾಯ ತಾಯಿಕಣೆ ಮತ್ತಿತರರು ವಿಧವಾ ಮುಂಡನ ಅನಾಚಾರವನ್ನು ಖಂಡಿಸಿ ಬರೆದು ಮರುಮದುವೆಯನ್ನು ಪುರಸ್ಕರಿಸಿದರು. ಆದರೂ ವಿಧವಾ ವಿವಾಹ ಸಂಪ್ರದಾಯಸ್ಥರಿಗೆ ಒಪ್ಪಿಗೆ ಇಲ್ಲ."[1]

ಹೆಂಡತಿಯನ್ನು ಬಿಟ್ಟ ಗಂಡಸರು ಅಥವಾ ವಿಧುರರು, ಮಾಡಿಕೊಳ್ಳುವ ಮರುಮದುವೆಗೆ ಯಾವುದೇ ವಿಶೇಷ ಹೆಸರು ಇಲ್ಲ, ವಿಶೇಷ ಪದ್ಧತಿಯೂ ಇಲ್ಲ. ಮೊದಲಿನ ಮದುವೆಯಾದಂತೆ ಮುಂದಿನ ಮದುವೆಗಳು ನಡೆದುಹೋಗುತ್ತವೆ. ಗಂಡನನ್ನು ಬಿಟ್ಟವಳಿಗೆ ಇಲ್ಲವೇ ಗಂಡಸತ್ತ ವಿಧವೆಗೆ ಮದುವೆ ಮಾಡಿಕೊಳ್ಳುವ ಹಕ್ಕು ಇಲ್ಲ ಆದಿವಾಸಿ ಬುಡಕಟ್ಟು ಜನಾಂಗಗಳಲ್ಲಿ ವಿಧವೆಯ ಮದುವೆಯನ್ನು "ಉಡಿಕೆ"ಯೆಂಬ ವಿಶೇಷ ಹೆಸರಿನಿಂದ ಕರೆಯುವರು. ವೀರಶೈವರಲ್ಲಿ ಮತ್ತು ಆದಿವಾಸಿ ಬುಡಕಟ್ಟು ಜನಾಂಗಗಳಾದ ಬಂಟರಲ್ಲಿ, ಸಾರಸ್ವತರಲ್ಲಿ, ಹಳೆಪೈಕದವರಲ್ಲಿ, ಕೊಡವರಲ್ಲಿ, ಲಂಬಾಣಿಗರಲ್ಲಿ, ದೊಂಬರಲ್ಲಿ, ಗೊಂಡರಲ್ಲಿ, ಕಾಡುಗೊಲ್ಲರಲ್ಲಿ, ಸೋಲಿಗರಲ್ಲಿ, ಸಿದ್ಧಿಯರಲ್ಲಿ, ಮಕ್ಕಳ ಕಟ್ಟಿನ ಗೌಡರಲ್ಲಿ, ನಾಯಕರಲ್ಲಿ, ತೋಡರಲ್ಲಿ, ಅಮೆರಿಕನ್ ಇಂಡಿಯನ್‌ಗಲ್ಲಿ ಕೋಳಿ ಸಮಾಜ-ಮುಂತಾದ ಜನಾಂಗಗಳಲ್ಲಿ ವಿಧವೆಯ ಮದುವೆ ಪದ್ಧತಿ ಇದೆ. ಆದರೆ ಮದುವೆಯಂತೆ ಆಚರಿಸುವುದಿಲ್ಲ. "ಮದುವೆ"ಯೆಂಬ ಹೆಸರಿನಿಂದ ಕರೆಯುವುದೂ ಇಲ್ಲ. ಇದು ಮಂಗಳದಾಯಕವಾದ ಆಚರಣೆಯಲ್ಲವೆಂದು ಕೆಲವು ವಿಶಿಷ್ಟ ಪದ್ಧತಿಯಲ್ಲಿ ನಡೆಸುವರು. ಇದಕ್ಕೆ ಉಡಿಕೆ, ಉಡುಕೆ, ಉಡಕಿ, ಉಟಿಕೆ, ಕೂಡಿಕೆ, ಕೂಡಾವಳಿ, ಸೀರುಡಿಕೆ, ಬಿಡುಧಾರಿ, ಬಿಡುವಳಿಕೆಗಳೆಂದು ಕರೆಯುವರು. ವಿಧವಾ ವಿವಾಹ ನಿನ್ನೆ ಮೊನ್ನೆಯದಲ್ಲ ಪ್ರಾಚೀನ ಕಾಲದಲ್ಲಿಯೂ ಇತ್ತು. "ಋಗ್ವೇದಗಳ ಕಾಲದಲ್ಲಿ ವಿಧವೆಯರು ಕೆಲವು ಸಂದರ್ಭದಲ್ಲಿ ಪುನರ್ವಿವಾಹ ಮಾಡಿಕೊಳ್ಳುವ

1. ಸುಧಾ, ಯುಗಾದಿ ಸಂಚಿಕೆ 1982 ಪು. 15

ಅವಕಾಶವಿತ್ತು. ಸೂತ್ರಗಳ ಕಾಲದಲ್ಲಿ ವಿಧವಾ ವಿವಾಹ ನಿಷೇಧವಾಯಿತು.* ಕಾರಣ ಸ್ತ್ರೀಯ ಪಾತಿವ್ರತ್ಯಕ್ಕೆ ಭಂಗತರದಿರಲು ವಿಚ್ಛೇದನಕ್ಕೂ ನಿಯೋಗ[1] ಪದ್ಧತಿಗೂ ಅವಕಾಶ ಕೊಡದೆ ಸಹಗಮನ ಪದ್ಧತಿಗೆ ಅವಕಾಶ ಕೊಡಲಾಯಿತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇದರ ಬಗ್ಗೆ ನಿರೂಪಣೆಯಿದೆ. ಮನು ಪುನರ್ವಿವಾಹ ವನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಒಪ್ಪಿದ್ದಾರೆ. ಗಂಡ ತಲೆಮರೆಸಿಕೊಂಡು ಹೋಗಿದ್ದರೆ, ಸನ್ಯಾಸಿಯಾಗಿದ್ದರೆ, ಜಾತಿಭ್ರಷ್ಟನಾದರೆ, ನಪುಂಸಕನಾಗಿದ್ದರೆ ಸ್ತ್ರೀಯು ಪುನಃ ವಿವಾಹವಾಗಲು ನಾರದ, ಪರಾಶರ ಸ್ಮೃತಿಗಳು ಸಮ್ಮತಿಸಿವೆ."[2]

"ಉಡು" ಎಂಬ ನಾಮಪದಕ್ಕೆ "ಇಕೆ" ಎಂಬ ತದ್ಧಿತ ಪ್ರತ್ಯಯ ಸೇರಿ "ಉಡಿಕೆ" ಎಂಬ ರೂಪ ತಾಳಿದೆ. ಉಡು+ಇಕೆ>ಉಡುಕೆ>ಉಡಿಕೆ>ಉಡಿಕಿ ಎಂದಾಗಿದೆ. ಉಡಿಕಿಗೆ ಕೂಡಿಕೆ, ಕೂಡಾವಳಿ ಎಂತಲೂ ಕರೆಯುವರು. "ಕೂಡು" ಎಂಬ ಕ್ರಿಯಾಪದಕ್ಕೆ "ಇಕೆ" ಮತ್ತು "ವಳಿ" ಸೇರಿ ಕೂಡಿಕೆ, ಕೂಡಾವಳಿ ಎಂದಾಗಿದೆ. ಕೂಡು+ಇಕೆ>ಕೂಡುಕೆ>ಕೂಡಿಕೆ ಹಾಗೆಯೇ ಕೂಡು+ವಳಿ>ಕೂಡುವಳಿ> ಕೂಡಾವಳಿ ಎಂದಾಗಿದೆ. "ಕೂಡು" ಎಂದರೆ ಸೇರು, ಬೆರೆ, ಸಂಭೋಗಿಸು, ಕೂಡಿಸು, ಒಟ್ಟು, ಬಂಧಿಸು, ಕುಳ್ಳಿರು, ಕೂಟವೆಂದು ಮುಂತಾದ ಅರ್ಥಗಳಿವೆ.

ಆದಿಮಾನವ ಹಸಿವಾದಾಗ ತಿನ್ನುವಂತೆ, ಕಾಮಾತುರನಾದಾಗ ಹೆಣ್ಣಿನ ಜತೆಗೆ ಕೂಡಿ, ಬೇರೆಯಾಗಿ ಅಲೆದಾಡುತ್ತಿದ್ದ. ಅನಂತರದ ಹಂತದಲ್ಲಿ ಒಂದೇ ಸ್ಥಳದಲ್ಲಿ ನೆಲೆಸಿದಾಗ ಗಂಡು ಹೆಣ್ಣು ಕೂಡಿ ಇರುವುದು ಅನಿವಾರ್ಯವಾಯಿತು. ಹೀಗೆ ಕೂಡಿ ಜೀವಿಸುವ ಹೆಣ್ಣುಗಂಡು ಲೈಂಗಿಕ ಸಂಬಂಧ ಹೊಂದಿರುತ್ತಿದ್ದರು. ಇವರು ಯಾವುದೇ ರೀತಿಯ ವಿಧಿವತ್ತಾದ ಆಚರಣೆಯನ್ನು ಮಾಡಿಕೊಡುತ್ತಿರಲಿಲ್ಲ. ಕೂಡುವಿಕೆಯು "ಕೂಡಿಕೆ"ಯಾಗಿದೆ.

ಮುಂದಿನ ಹಂತದಲ್ಲಿ ಮದುವೆ ವ್ಯವಸ್ಥೆ, ನಾಗರಿಕತೆ ಬೆಳೆದಂತೆ ಕೂಡುವಿಕೆ ಯಲ್ಲಿ ಆಚರಣೆಗಳು ಬಂದವು. ಒಂದು ಅರ್ಥದಲ್ಲಿ ಉಡಿಕೆಯು ನಂತರವೇ ಮದುವೆ ಎಂದು ಹೇಳಬಹುದು. "ಕೂಡಿಕೆ" ಎಂಬುದಕ್ಕೆ "ಉಡಿಕೆ" ಶಬ್ದ ಪ್ರಯೋಗ ಹೇಗಾಗಿರಬೇಕು, "ಕೂಡುಕೆ" ಈ ಶಬ್ದಾದಿ "ಕ" ಕಾರವು ಲೋಪವಾಗಿ ಸ್ವರಾದಿ ಶಬ್ದವಾಗಿರುವಂತೆ ತೋರುವುದು. ಕೂಡಿಕೆ>ಉಡಿಕೆಯಾಗಿರಲಿಕ್ಕೇ ಸಾಕು. ಉತ್ತರ

---

* Manu Yajnavalkya I 75

1. "ನಿಯೋಗ" ಅಂದರೆ ಮಡಿದ ಗಂಡನ ಸೋದರನ ಸಂಬಂಧದಿಂದ ಮಕ್ಕಳನ್ನು ಪಡೆಯುವುದು. ಕ್ರಿ. ಪೂ. ದ ಶತಮಾನಗಳಲ್ಲಿ ಈ ಪದ್ಧತಿಯಿತ್ತು. (Altekar : The Position of Women in Hindu Civilization, pp. 144–185) ಡಾ|| ಚಿದಾನಂದ ಮೂರ್ತಿಯವರು. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ.

2. ಭಾರತೀಯ ಸಾಮಾಜಿಕ ಸಂಸ್ಥೆಗಳು : ಎಂ. ನಂಜಮ್ಮಣ್ಣಿ ಪು. 187

ಕರ್ನಾಟಕದವರು ಉಡಿಕೆ ಎಂಬ ಶಬ್ದ ಬಳಸಿದರೆ, ದಕ್ಷಿಣ ಕರ್ನಾಟಕದವರು ಕೂಡಿಕೆ ಎಂಬ ಶಬ್ದ ಬಳಸುವರು. ಇವುಗಳು ಶಬ್ದವ್ಯತ್ಯಾಸವೇ ಹೊರತು ಅರ್ಥವ್ಯತ್ಯಾಸವಿರುವಂತೆ ತೋರುವುದಿಲ್ಲ.

ಉಡಿಕೆಯ ಬಗ್ಗೆ ಅನೇಕ ಗಾದೆಗಳು ಹುಟ್ಟಿಕೊಂಡಿವೆ. ಉಡಿಕೆ ಹಲವಾರು ಗಾದೆಗಳಿಗೆ ಜನ್ಮ ನೀಡಿರುವುದರಿಂದ ಇದು ಅನಾದಿಕಾಲದಿಂದಲೂ ಆಚರಣೆಯಲ್ಲಿದ್ದುದು ಮನದಟ್ಟಾಗುವುದು. ಇದನ್ನು ಸಂಪ್ರದಾಯಸ್ಥರು ಮನ್ನಿಸಲಿಲ್ಲ. ಧರ್ಮಶಾಸ್ತ್ರಗಳು ಪುರಸ್ಕರಿಸಲಿಲ್ಲವಾದ್ದರಿಂದ ಕಾವ್ಯಗಳಲ್ಲಿ, ಪುರಾಣಗಳಲ್ಲಿ, ಗ್ರಂಥಗಳಲ್ಲಿ ಪ್ರಸ್ತಾಪಗೊಂಡಿಲ್ಲ. ಆದರೂ ಬುಡಕಟ್ಟು ಆದಿವಾಸಿ ಜನಾಂಗಗಳಲ್ಲಿ ಮತ್ತು ಜನಪದರಲ್ಲಿ "ಉಡಿಕಿ ಪದ್ಧತಿ" ಆಚರಣೆಯಲ್ಲಿ ಉಳಿದುಕೊಂಡು ಬಂದಿದೆ. ಈಗಲೂ ಹಳ್ಳಿಗಳಲ್ಲಿ ಪ್ರಚಲಿತದಲ್ಲಿದೆ

(1) ಉಡಿಕಿ ಗಂಡನ ಉಪ್ಪದರ ಭಾಳ[3]
(2) ಉಡಿಕಿ ಗಂಡಲ್ಲ ಗುಳ್ಳದ ದೇವರಲ್ಲ[3]
(3) ಉಡಿಕಿ ಗಂಡಲ್ಲ ಬುಗುಡಿ ವಸ್ತಲ್ಲ[3]
(4) ಮದವಿ ಗಂಡನ ಕಿಟಕಿಟ ಭಾಳ ಉಡಿಕಿ ಗಂಡನ ಉಪ್ಪದರ ಭಾಳ[4]
(5) ಉಡ್ಕಿ ಮಾಡ್ಕೊಂಡವನ ಫಡಕಿ ಹಾರ್ತದ[4]
(6) ಉಡಿಕಿ ಹೆಣ್ತಿಯಲ್ಲ ಗುಳ್ಳದ ದೇವರಲ್ಲ[4]
(7) ಬಾಡಿಗೇ ಮನೆ ಉಡಿಕೇ ನಂಟರು[5]
(8) ಉಡಿಕಿ ಹೆಣ್ಣ ಮಡದಿ (ಗರತಿ) ಯಾಗಲ್ಲ ಉಪ್ಪಿಲ್ಲದೆ ಅಡಗಿಯಾಗಲ್ಲ
(9) ಉಡಿಕಿ ಮದುವಿಯಲ್ಲ ಬುಗಡಿ ವಸ್ತಾ ಅಲ್ಲ
(10) ಉಡಿಕಿ ಸಂಸಾರ ಉದ್ರಿವ್ಯಾಪಾರ ಎರಡು ಒಂದೇ.

ಇವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಗಾದೆ ಮಾತುಗಳಿಗಿಂತ ಉಡಿಕಿ ಪ್ರಾಚೀನವಾದುದೆಂದು ಹೇಳಬಹುದು. ಒಂದು ಆಚರಣೆ ಕಾಲಾನಂತರ ಅದು ನಂಬಿಕೆಯಾಗಿ, ಗಾದೆಮಾತಾಗಿ ರೂಪಗೊಳ್ಳುವುದು.

ಉಡಿಕೆಯೆಂಬುದು ಮದುವೆಯಲ್ಲ. ಅದು ಒಂದು ಪದ್ಧತಿಯಾಗಿದೆ. ವಿಧವೆ–ವಿಧುರ ಗಂಡ ಹೆಂಡತಿಯರಾಗುವ ಒಂದು ವಿಧಿಯೆಂಬುದು ತಿಳಿಯುವುದು. "ಉಡಿಕಿ ಗಂಡಲ್ಲ, ಉಡಿಕಿ ಹೆಣ್ತಿಯಲ್ಲ, ಉಡಿಕೆ ನೆಂಟರಲ್ಲ, ಉಡಿಕಿ ಗಂಡನ ಕಿಟಕಿಟಭಾಳ" ಎಲ್ಲ ಮಾತುಗಳನ್ನು ಗಮನಿಸಿದರೆ "ಉಡಿಕಿಪದ್ಧತಿ" ಜನಪದರಲ್ಲಿ ಅನಾದಿ ಕಾಲ

---

3. ಕಿಟ್ಟೆಲರ ಅರ್ಥಕೋಶ.
4. ಡಾ॥ ವೀರಣ್ಣ ದಂಡೆ–ಆಯ್ದ ಗಾದೆಗಳು, ಪು. 26.
5. ಕನ್ನಡ ಅರ್ಥಕೋಶ–ಮೈ.ವಿ.ಮೈ. 2010.

ದಿಂದಲೂ ಬಳಕೆಯಲ್ಲಿದ್ದು ಉಡಿಕೆ ಸಂಬಂಧ ಮದುವೆ ಮಾಡಿಕೊಂಡವರಷ್ಟು ಅನ್ಯೋನ್ಯವಾಗಿರುವುದಿಲ್ಲವೆಂಬುದು ಗೊತ್ತಾಗುತ್ತದೆ.

ಜನಪದರ ಜೀವನವನ್ನು ಪ್ರತಿನಿಧಿಸುವ ಈ ಮೇಲಿನ ಗಾದೆಗಳನ್ನು ನೋಡಿದರೆ ಉಡಿಕೆ ಪದ್ಧತಿ ವಿವಾಹದಷ್ಟೇ ಪ್ರಾಚೀನವಾದುದು. ಒಂದೆರಡು ಅಪವಾದಗಳನ್ನು ಬಿಟ್ಟರೆ ಭಾರತೀಯ ಎಲ್ಲ ಆದಿವಾಸಿಗಳಲ್ಲಿ ಉಡಿಕೆ ಪದ್ಧತಿಯಿದೆ ಇದನ್ನು ಧರ್ಮ ಶಾಸ್ತ್ರಗಳು ಒಪ್ಪದಿದ್ದರೂ ಜನ ಇದನ್ನು ಒಪ್ಪಿಕೊಂಡು ಬಂದಿದ್ದಾರೆ. ಆದರೆ ಮದುವೆಗಿರುವಷ್ಟು ಮಹತ್ವ ಉಡಿಕೆಗಿಲ್ಲವೆಂದು ಗಾದೆಗಳು ತಿಳಿಯಪಡಿಸುತ್ತವೆ. ಮದುವೆ ಗಂಡನಿದ್ದರೆ ಹೆಣ್ಣುಮಕ್ಕಳಿಗೆ ಮುತ್ತೈದಿತನ ಇರುವುದು. ಅಂಥವರಿಗೆ ಸಮಾಜ ಗೌರವಿಸುವುದು. ಉಡಿಕೆ ಗಂಡ ಬದುಕಿದ್ದರೂ ಹೆಣ್ಣು ಮುತ್ತೈದಿತನದ ಗೌರವದಿಂದ ವಂಚಿತಳಾಗುವಳು. ಅದಕ್ಕೇ ಉಡಿಕೆ ಗಂಡನಲ್ಲ' ಎಂಬ ಮಾತು ಜನಜನಿತವಾಗಿದೆ. ವಿಧವೆಯನ್ನು ಮದುವೆಯಾದರೆ ಅನಿಷ್ಟವನ್ನು ಕರೆದು ತಂದಂತೆಯೆಂಬ ಭಾವನೆ ಜನಪದರಲ್ಲಿದೆ.

"ಉಡಿಕೆ ಪದ್ಧತಿ"ಯ ವಿಷಯವಾಗಿ ಜನಪದರಲ್ಲಿ ವಿಚಾರಿಸಿದರೆ ತಮ್ಮದೆಯಾದ ರೀತಿಯಲ್ಲಿ ಅರ್ಥೈಸುತ್ತಾರೆ. ಹೆಂಡತಿ ಸತ್ತ ವಿಧುರ ಅಥವಾ ಹೆಂಡತಿಯನ್ನು ಬಿಟ್ಟವನು ಉಡಿಕೆ ಮಾಡಿಕೊಳ್ಳುವನು. ಒಮ್ಮೊಮ್ಮೆ ಹೆಂಡತಿಯಿದ್ದರೂ ಉಡಿಕೆ ಮಾಡಿಕೊಳ್ಳುವನು. ವಿಧವೆ ಹೆಣ್ಣಿನ ಜತೆಗೆ ಗುಪ್ತವಾಗಿ ಲೈಂಗಿಕ ಸಂಬಂಧವಿಟ್ಟು, ಕೆಲವು ದಿನಗಳ ನಂತರ ಆ ವಿಧವೆಗೆ ತಾಳಿ ಕಟ್ಟಿ ಮನೆಗೆ ಕರೆತರಲು ಉಡಿಕೆ ಮಾಡಿಕೊಳ್ಳುವನು. ಇದಾದ ಮೇಲೆ ಅವರ ಗುಪ್ತಲೈಂಗಿಕ ಬದುಕಿಗೆ ಸಮಾಜ ಮಾನ್ಯ ಮಾಡುತ್ತದೆ. ಅನಂತರ ಅವರನ್ನು ಗಂಡಹೆಂಡತಿಯೆಂದು ಜನರು ಒಪ್ಪುತ್ತಾರೆ. ಅವರಿಂದ ಹುಟ್ಟಿದ ಮಕ್ಕಳಿಗೆ ತಂದೆ ಆಸ್ತಿಯಲ್ಲಿ ಪಾಲು ದೊರೆಯುತ್ತದೆ, ಗುಪ್ತಲೈಂಗಿಕ ಸಂಬಂಧದಿಂದ ಹುಟ್ಟಿದ ಮಕ್ಕಳಿಗೆ ಆಸ್ತಿಯಲ್ಲಿ ಪಾಲು ದೊರೆಯುವುದಿಲ್ಲ. ವಿಧವೆಯ ಜತೆಗೆ ಸಂಬಂಧ ವಿಟ್ಟುಕೊಂಡು ಅನಂತರ ಉಡಿಕೆಮಾಡಿಕೊಳ್ಳುವನು. ಉಡಿಕೆಯನ್ನು ಕದ್ದುಮಾಡಿ ಮುಗಿಸುವರು. ಏಕೆಂದರೆ ಮದುವೆಯಾದ ಹೆಂಡತಿ ಬಂದು ಉಡಿಕೆ ನಡೆಯದಂತೆ ಅಡ್ಡಿ ಮಾಡುವಳು. ಮದುವೆಯಾದ ಹೆಂಡತಿಯಿಂದ ಗಂಡು ಮಕ್ಕಳಾಗದಿದ್ದರೆ ಲೈಂಗಿಕ ಸಂಬಂಧವಿಲ್ಲದೆಯೂ ಮಿತ್ರರು, ಸಂಬಂಧಿಕರೂ ಕೂಡಿ ವಿಧವೆಯ ಜೊತೆಗೆ ಉಡಿಕೆ ಹಚ್ಚುವರು.

ಈ ಮೊದಲು ಹೇಳಿರುವಂತೆ "ಉಡಿಕೆ"ಯೆಂದರೆ ವಿಧವೆಯ ಮದುವೆ ಕದ್ದು ನಡೆಯುವಂಥದ್ದು. ಉಡಿಕೆ ಮಾಡುವುದಕ್ಕೆ "ಉಡಿಕೆ" ಹಚ್ಚುವುದು" "ಉಡಿಕೆ ಕಟ್ಟು"ವುದೆಂದು ಕರೆಯುವರು. ಇದು ಒಂದು ವಿಶಿಷ್ಟ ರೀತಿಯಲ್ಲಿ ನಡೆಯುವುದು. ಜನಪದರು ಉಡಿಕೆಯನ್ನು ಅಶುಭವೆಂದು, ಅಮಂಗಳಕಾರ್ಯವೆಂದು ಪರಿಗಣಿಸುವುದರಿಂದ ಇದರ ಆಚರಣೆಯಲ್ಲಿ ಬಹಳಷ್ಟು ಜನ ಭಾಗವಹಿಸುವುದಿಲ್ಲ ರಾತ್ರಿ ಸುಮಾರು ಹತ್ತು ಗಂಟೆಯಿಂದ ಬೆಳಿಗ್ಗೆ ನಾಲ್ಕು ಗಂಟೆಯವರೆಗೆ ಉಡಿಕೆ ಹಚ್ಚುವರು. ಮಧ್ಯ

ರಾತ್ರಿಯ ಅನಂತರ ಯಾವುದೇ ರೀತಿ ರಿವಾಜಿಲ್ಲದೆ, ಯಾರಿಗೂ ತಿಳಿಯದಂತೆ ಮಾಡಿ ಮುಗಿಸುವುದೇ ಜಾಸ್ತಿ. ಬೆಳದಿಂಗಳ ದಿನಗಳಲ್ಲಿ ಅಂದರೆ ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗೆ ಹಚ್ಚುವುದಿಲ್ಲ, ಉಡಿಕೆ ಹಚ್ಚುವಾಗ ಬೆಳದಿಂಗಳು ಇರಬಾರದು, ಕತ್ತಲೆ ಇರಬೇಕು. ಉಡಿಕೆಯವರಿಗೆ ಹುಟ್ಟಿದ ಹೆಣ್ಣಿನ ಜತೆಗೆ ಉಡಿಕಿಯವರಿಗೆ ಹುಟ್ಟಿದ ಗಂಡಿನೊಡನೆ ಮದುವೆ ಮಾಡಬಾರದೆಂಬ ನಂಬಿಕೆಯಿದೆ. ಮದುವೆಯಾಗ ಬೇಕಾದರೆ ಗಂಡಿಗೂ ಮತ್ತು ಹೆಣ್ಣಿಗೂ ಕನಿಷ್ಠ ಮೂರು ವರ್ಷಗಳಾದರೂ ಅಂತರ ವಿರಬೇಕು. ಹೆಣ್ಣು ಗಂಡಿಗಿಂತ ವಯಸ್ಸಿನಲ್ಲಿ ಚಿಕ್ಕವಳಿರಬೇಕು. ಆದರೆ ಉಡಿಕೆ ಹಚ್ಚುವಲ್ಲಿ ಗಂಡಿಗಿಂತ ಹೆಣ್ಣುಮಗಳು ದೊಡ್ಡವಳಿರಬಹುದು.

ಉಡಿಕೆಯಲ್ಲಿ ಮದುವೆಯಂತೆ ನಿಶ್ಚಯ ಕಾರ್ಯವಿರುವುದಿಲ್ಲ. ವಧೂವರರು ಒಬ್ಬರಿಗೊಬ್ಬರು ನೋಡಿ ಒಪ್ಪಿಗೆ ಸೂಚಿಸುವುದಿಲ್ಲ. ಉಡಿಕೆ ಹಚ್ಚುವುದು ಹೀಗೆಯೇ ಮಾಡಬೇಕೆಂಬ ನಿಯಮವಿಲ್ಲ. ವಿಧಿಪೂರ್ವಕ, ಶಾಸ್ತ್ರೋಕ್ತವಾಗಿ ಮಾಡಲು ಧರ್ಮ ಶಾಸ್ತ್ರಗಳ ಮನ್ನಣೆಯಿಲ್ಲ. ಜನಪದರು ತಮಗೆ ಸರಿಕಂಡ ರೀತಿಯಲ್ಲಿ ಜಂಗಮನ ಆದೇಶದಂತೆ ಕಾರ್ಯ ಮಾಡಿ ಮುಗಿಸುವರು. ಮದುವೆಯಂತೆ ಅದ್ದೂರಿಯಾಗಿ ಮಾಡಿ ಪ್ರತಿಷ್ಠೆ ಪ್ರದರ್ಶಿಸಿಕೊಳ್ಳುವ ಸಮಾರಂಭವಂತೂ ಅಲ್ಲವೇ ಅಲ್ಲ. ತಿಥಿ, ಮಿತಿ, ಮುಹೂರ್ತ ತೆಗೆದು ನೋಡುವುದಿಲ್ಲ. ಸಮಯ ಕೂಡಿ ಬಂದಾಗ ಮಿತಿ, ಸೂರ್ಯ ಮುಳುಗಿದಾಗ ತಿಥಿ; ಮಧ್ಯರಾತ್ರಿಯೇ ಮುಹೂರ್ತ. ವರದಕ್ಷಿಣೆಯಾಗಲಿ ವರೋಪಚಾರವಾಗಲಿ, ಕೊಡುವ ಅಥವಾ ತೆಗೆದುಕೊಳ್ಳುವುದು ನಾವು ಕೇಳಿದಂತೆ ಅಂಥ ಯಾವ ಘಟನೆಗಳು ಬೆಳಕಿಗೆ ಬಂದಿಲ್ಲ.

ಜನಪದರು ಉಡಿಕೆ ಹಚ್ಚಲು ಕೆಲವು ನಿಯಮಗಳನ್ನು ಚಾಚೂತಪ್ಪದೆ ಪಾಲಿಸುತ್ತಾರೆ. ಉಡಿಕೆಯಾಗಲಿರುವ ಹೆಣ್ಣನ್ನು ಉಡಿಕೆ ಹಚ್ಚುವ ಮನೆಗೆ ಹಗಲು ಹೊತ್ತಿನಲ್ಲಿ ಕರೆದು ತರುವುದಿಲ್ಲ. ರಾತ್ರಿ ಸಮಯದಲ್ಲಿ ಕತ್ತಲಲ್ಲಿ ಕರೆತರುವರು. ಬೇರೆ ಊರಿನಿಂದ ಬಂದರೂ ರಾತ್ರಿಯಾಗುವವರೆಗೆ ಹೊಲದಲ್ಲಿ ಉಳಿದು ಕತ್ತಲೆಯಾದ ಮೇಲೆ ಮನೆಗೆ ಬರುವರು. ಇಲ್ಲವೆ ಹೊತ್ತು ಇರುವಾಗಲೆ ಊರಿಗೆ ಬಂದರೆ ಕತ್ತಲಾಗುವವರೆಗೆ ಸಂಬಂಧಿಕರ ಮನೆಯಲ್ಲಿ ಅಥವಾ ಬೇರೆ ಮನೆಯಲ್ಲಿಡುವರು ಉಡಿಕೆ ಹಚ್ಚುವ ಕೋಣೆಗೆ ಒಂದು ದೀಪದ ಮಂದ ಬೆಳಕಿನಲ್ಲಿ ಅಥವಾ ದೀಪವಿಲ್ಲದೆ ಕತ್ತಲೆಯಲ್ಲಿ ಕುಳಿತುಕೊಳ್ಳುವಳು. ಒಂದು ವೇಳೆ ದೀಪವಿದ್ದರೂ ಅದಕ್ಕೆ ಏನಾದರೂ ಮರೆ ಮಾಡಿ ಮೂಲೆಯಲ್ಲಿ ಕುಳಿತುಕೊಳ್ಳುವಳು. ಉಡಿಕೆಯಾಗುವವಳಿಗೆ ವಿಧುರ ಅಥವಾ ಉಡಿಕೆ ಮಾಡಿಕೊಂಡವನು ಇಲ್ಲವೆ ವಿಧವೆ ಅಥವಾ ಉಡಿಕೆಯಾದವಳು ಮಾತ್ರ ಅವಳನ್ನು ತವರುಮನೆಯಿಂದ ಕರೆದು ತರುವರು ರಾತ್ರಿ ಸುಮಾರು ಹತ್ತು, ಹನ್ನೆರಡು ಗಂಟೆಗೆ ಜಂಗಮ (ಮಠಪತಿ) ಬರುವನು ಒಬ್ಬರ ಮುಖ ಒಬ್ಬರಿಗೆ ಕಾಣದಂಥ ಮಂದ ಬೆಳಕಿನಲ್ಲಿ, ಕತ್ತಲೆಯಿರುವ ಕೋಣೆಯಲ್ಲಿ ಒಂದು ಕಂಬಳಿ ಹಾಸಿ ಅದರ ಮೇಲೆ ಶತಿ ಹಾಕುವನು. ಮದುವೆಯಲ್ಲಿ ಪಂಚಕಳಸ ಹೂಡಿದರೆ ಇಲ್ಲಿ ಒಂದು ಕಳಸ ಮಾಡುವರು.

ಮಧ್ಯರಾತ್ರಿ ಸುಮಾರಿಗೆ ಅವರಿಗೆ ಪಿಯಾರಿ ಮಾಡುವರು. ಕೆಲವು ಕಡೆ ಉಟ್ಟಬಟ್ಟೆಯ ಮೇಲೆ ನಡೆಯುವುದು, ವಿಧವೆ ಸೀರೆ ಉಡಿಸುವಳು. ಗಂಡಿಗೆ ವಿಧುರ ಆಯಾರಿ ಮಾಡುವನು. ಗಂಡು ಬಂದು ಕಂಬಳಿ ಮೇಲೆ ಕುಳಿತುಕೊಳ್ಳುವನು. ಹೆಣ್ಣು ಮಗಳನ್ನು ಜಂಗಮ ದೇವರ ಮನೆಯಲ್ಲಿ ಕರೆದೊಯ್ದು ದೇವರ ಮುಂದೆ ನಿಲ್ಲಿಸಿ, ದೇವರ ಸಾಕ್ಷಿಯಾಗಿ ತಾಳಿ ಕಟ್ಟುವನು. ಆನಂತರ ಗಂಡನ ಮಗ್ಗುಲಲ್ಲಿ ಬಂದು ಕುಳಿತುಕೊಳ್ಳುವಳು. ಇಬ್ಬರಿಗೂ ಜಂಗಮ ವಿಳ್ಯದೆಲೆಯ ಕಂಕಣ ಕಟ್ಟಿ ಸೆರಗಿಗೂ ಮತ್ತು ಶೆಲ್ಲೆಗೂ ಗಂಟು ಹಾಕುವನು. ಮದುವೆಯಲ್ಲಿ ಕೈಧಾರೆ ಮಾಡಿದರೆ ಉಡಿಕೆಯಲ್ಲಿ ಬಿಡುಧಾರೆ ಮಾಡುತ್ತಾರೆ. (ಬಿಲ್ಲವರಲ್ಲಿ, ಗೊಂಡವರಲ್ಲಿ ಈಗಲೂ ಆಚರಣೆಯಲ್ಲಿದೆ). ಗಂಡ ಹೆಂಡತಿಗೆ, ಹೆಂಡತಿ ಗಂಡನಿಗೆ ಅಕ್ಷತೆ ಹಾಕುವರು. ಗಂಡ ಹೆಂಡತಿಯರನ್ನು ಅದೇ ಕೋಣೆಯಲ್ಲಿ ಬಿಟ್ಟು ಬಾಗಿಲು ಮುಚ್ಚಿಕೊಂಡು ಹೊರಬರುವರು. ವಿಧವೆಯನ್ನು ತವರು ಮನೆಯಿಂದ ಕರೆದು ತಂದಾಗಿನಿಂದ ಅಕ್ಷತೆ ಹಾಕುವವರೆಗೆ ಅವರಿಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡುವುದಿಲ್ಲ. ಆ ಒಂದು ರಾತ್ರಿ ಗಂಡ ಹೆಂಡತಿಯರು ಅದೇ ಕೋಣೆಯಲ್ಲಿದ್ದು ನಸುಕಿನಲ್ಲಿ ಎದ್ದು ಸ್ನಾನಮಾಡಿ ಹೊಸ ಬಟ್ಟೆ ಹಾಕಿಕೊಂಡು ಜೋಡಿಯಾಗಿ ಹನುಮಾನ ದೇವರಿಗೆ ಹೋಗಿ ದರ್ಶನ ಮಾಡಿ, ಕಾಯಿ ಕರ್ಪೂರ ಮಾಡುವರು. ಇಷ್ಟಾದ ಮೇಲೆ ಉಡಿಕೆ ಹಚ್ಚುವುದು ಮುಗಿಯಿತು. ದೇವರಿಗೆ ಹೋಗಿಬರುವಾಗ ಅವರಿಗೆ ಯಾರು ನೋಡಬಾರದೆಂಬ ನಂಬಿಕೆಯಿದೆ. ಊರ ಜನರಿಗೆ ಊಟ ಹಾಕಿಸುವುದಿಲ್ಲ. ಅಡಿಗೆ ಮಾಡಿಸಿ ಊಟಕ್ಕೆ ಹೇಳಿದರೆ ಯಾರೂ ಬರುವುದೂ ಇಲ್ಲ. ಉಡಿಕೆ ಮಾಡಿಕೊಂಡ ಹೆಣ್ಣಿಗಾಗಲಿ, ಗಂಡಿಗಾಗಲಿ ಮಂಗಳ ಕಾರ್ಯಗಳಲ್ಲಿ, ಮದುವೆ ಮುಂಜಿಗಳಲ್ಲಿ, ಹಬ್ಬಹರಿದಿನಗಳಲ್ಲಿ ದೇವರ ಪೂಜಾ ಸಮಾರಂಭಗಳಲ್ಲಿ ಮುಂತಾದ ಶುಭ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಅವಕಾಶವಿಲ್ಲ, ಮುತ್ತೈದಿತನ ಕಳೆದುಕೊಳ್ಳುತ್ತಾಳೆ.

ಉಡಿಕೆ ಹಚ್ಚುವುದು ಜಂಗಮರೇ ಮಾಡಬೇಕೆಂದು ಜನಪದರು ಹೇಳುತ್ತಾರೆ. ಆದರೂ ಒಂದೊಂದು ಕಡೆ ವಿಧುರರೇ ಜಂಗಮನ ಕೆಲಸ ಮಾಡುತ್ತಾರೆ. ಕೆಲವೊಂದು ಊರಿನಲ್ಲಿ ಚಾಜಿನ ವ್ಯಕ್ತಿಗಳು ಭಾಗವಹಿಸುವರು. ಮುಲಗೆ, ಪೊಲೀಸ್‌ಗೌಡ, ಮಾಲಿಗೌಡ, ಗಣಾಚಾರಿ ಮತ್ತು ಮಠಪತಿ ಇವರಿಗೆ ಉಡಿಕೆ ಹಚ್ಚುವ ದಿನ ಊಟಕ್ಕೆ ಹೇಳುತ್ತಾರೆ. ಅದೇ ದಿವಸ ರಾತ್ರಿ ಇವರ ಸಮ್ಮುಖದಲ್ಲಿ ಉಡಿಕೆ ಸಮಾರಂಭ ನೆರವೇರುವುದು. ಐದು ಜನ ಚಾಜಿನ ವ್ಯಕ್ತಿಗಳಲ್ಲಿ ಒಬ್ಬರಾದರೂ ಬರುತ್ತಾರೆ. ಬೇರೆಯವರ್ಯಾರೂ ಬರುವುದಿಲ್ಲ. ಚಿಕ್ಕಮಕ್ಕಳಿಗೆ ನೋಡಲು ಬಿಡುವುದಿಲ್ಲ. ಉಡಿಕೆ ಹಚ್ಚುವುದು ಮುಗಿದ ತಕ್ಷಣ ಹಲಿಗೆ ಅಥವಾ ಸಿಂಗ ಬಾರಿಸುವ ವಾಡಿಕೆ ಕೆಲವು ಕಡೆಗಿದೆ.

"ಉಡಿಕೆ" ಹಚ್ಚುವಲ್ಲಿ ಅಥವಾ ಕಟ್ಟುವಲ್ಲಿ ಆಚರಿಸುವ ಕೆಲವು ಪದ್ಧತಿಗಳ ವಿಚಾರವಾಗಿ ನೋಡೋಣ.

1. ವಿಧವೆಯನ್ನು ಮದುವೆಯಾಗಲಿರುವ ಮುಂಬೈ ಪ್ರಾಂತದ ಆದಿವಾಸಿ

ಜನಾಂಗದ ಬ್ರಹ್ಮಚಾರಿ ಮೊದಲು ಶಮಿ ಅಥವಾ ರೂಯಿ ಮರವನ್ನು ಮದುವೆಯಾಗಬೇಕು. ನಿಜವಾದ ಮದುವೆಗೆ ಮುಂಚೆ ಮುಂಡ ಹೆಣ್ಣನ್ನು ಮಹುವಾ ಮರಕ್ಕೆ ಮದುವೆ ಮಾಡುವರು.[3]

2. ಬಂಟರ ಜಾತಿಯಲ್ಲಿ ಉಡಿಕೆಗೆ "ಬುಡುವಳಿಕೆ ಮದುವೆ" ಎನ್ನುತ್ತಾರೆ. ಇದು ಹೆಣ್ಣಿನ ಮನೆಯಲ್ಲಿ ರಾತ್ರಿ ನಡೆಯುವುದು. ಗಂಡು ಹೆಣ್ಣಿಗೆ ಸೀರೆ ರವಿಕೆ ಕೊಡಬೇಕು. ಹೆಣ್ಣು ಗಂಡಿನ ನಡುವೆ ಒಂದು ಬಟ್ಟೆ ತೆರೆ ಹಿಡಿಯುತ್ತಾರೆ. ಆ ತೆರೆಯ ಕೆಳಗಿನಿಂದ ಗಂಡು ಹೆಣ್ಣಿನ ಕೈ ಹಿಡಿದರೆ ಲಗ್ನ ಮುಗಿಯಿತು. ಊಟದ ನಂತರ ಹೆಂಡತಿಯನ್ನು ಗಂಡ ತನ್ನ ಮನೆಗೆ ಕರೆದುಕೊಂಡು ಹೋಗುವನು.

3. ಅಡವಿಯಲ್ಲಿ ಒಂದು ಮಾವಿನ ಮರದ ಕೆಳಗೆ ಸೂರ್ಯ ಮುಳುಗಿದ ನಂತರ ಉಡಿಕೆ ಹಚ್ಚುವರು. ಹೊಸ ಬಟ್ಟೆಯ ಪಿಯಾರಿ ಮಾಡುವುದಿಲ್ಲ. ಉಟ್ಟ ಬಟ್ಟೆಯ ಪಿಯಾರಿ ನಡೆಯುವುದು. ಜಂಗಮ ಇಲ್ಲವೆ ವಿಧುರ ಉಡಿಕಿ ಕಾರ್ಯ ಮುಗಿಸುವನು. ಕಣ್ಣು ಬೆಳಕಿನಲ್ಲಿ ಗಿಡದ ಕೆಳಗೆ ಕಂಬಳಿ ಮೇಲೆ ಗಂಡು ಹೆಣ್ಣು ಕುಳಿತುಕೊಳ್ಳುವರು. ಜಂಗಮ ಹೆಣ್ಣಿಗೆ ತಾಳಿ ಕಟ್ಟುವರು, (ಉಡಕಿಯಲ್ಲಿ ಗಂಡ ತಾಳಿ ಕಟ್ಟುವುದಿಲ್ಲ) ನಂತರ ಸೆರಗಿಗೂ ಶೆಲ್ಲೆಗೂ ಗಂಟುಹಾಕುವನು. ನಂತರ ಗಂಡ ಹೆಂಡತಿಯರು ನೇರವಾಗಿ ಹನುಮಂತ ದೇವರಿಗೆ ಕಾಯಿ ಕರ್ಪೂರ ಮಾಡಿ ಮನೆಗೆ ಬರುವರು.

4. ಉಡಿಕೆಯಾಗಲಿರುವ ಗಂಡು ಹೆಣ್ಣು ಮತ್ತು ಕೆಲವು ಜನ ಸಂಬಂಧಿಕರು ಕೂಡಿಕೊಂಡು ಸಮಾರಂಭಕ್ಕೆ ಬೇಕಾಗುವ ಸಾಮಾನುಗಳನ್ನು ಎತ್ತಿನ ಬಂಡಿಯಲ್ಲಿ ತೆಗೆದುಕೊಂಡು ಹೋಗುವರು. ಹೀಗೆ ಹೋಗುವಾಗ ಎಲ್ಲಿ ಹೊತ್ತು ಮುಳುಗುವುದೋ ಅಲ್ಲಿ ಉಡಿಕೆ ಹಚ್ಚುವರು. ಗ್ರಾಮವಿದ್ದರೆ ದೇವರ ಗುಡಿಯಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಮರಳಿ ಊರಿಗೆ ಬರುವರು. ಮೊದಲನೆ ಹೆಂಡತಿ ಕಡೆಯವರು ಉಡಿಕೆ ಮಾಡಿಕೊಳ್ಳಲಿಕ್ಕೆ ಅಡ್ಡಿ ಆತಂಕ ಮಾಡುವಂತಿದ್ದರೆ, ಹೀಗೆ ಊರು ಬಿಟ್ಟು ಕದ್ದು ಅಡವಿಯಲ್ಲಿ ಮಾಡುವರು. ಇದ್ದೂರಿನ ಹೆಣ್ಣಿನ ಜತೆ ಉಡಿಕೆಮಾಡಿ ಕೊಳ್ಳುವಾಗ ಹೀಗೆ ಮಾಡುವರು.

5. ಉಡಿಕೆಯಾಗಲಿರುವ ಹೆಣ್ಣು ಬೇರೆ ಊರಿನಲ್ಲಿದ್ದರೆ ಅವಳನ್ನು ಕರೆದುಕೊಂಡು ಬರಲು ಒಬ್ಬಿಬ್ಬರು ಹೋಗುವರು. ಈ ಕಡೆ ಉಡಿಕೆ ಮಾಡಿಕೊಳ್ಳುವ ವ್ಯಕ್ತಿ ಕೆಲವು ಜನ ಸಂಬಂಧಿಕರನ್ನು ಕರೆದುಕೊಂಡು ಹೋಗುವನು. ಅವರು ಎಲ್ಲಿ ಎದುರುಗೂಡುವರೋ ಅಲ್ಲಿ ಉಡಿಕಿ ಹಚ್ಚುವರು. ಕತ್ತಲಾದ ಮೇಲೆ ಇದ್ದ ಬಟ್ಟೆಯ ಮೇಲೆ ಉಡಿಕೆ ಮಾಡಿಕೊಂಡು ಮನೆಗೆ ಮರಳುವರು.

---

3. ಡಾ॥ ದೇ. ಜವರೇಗೌಡ, ಜಾನಪದ ಅಧ್ಯಯನ, ಪು. 348.

4. "ಸುಧಾ" ಯುಗಾದಿ, 1982, ಪು. 15.

6. ಈಗೀಗ ಉಡಿಕೆ ಹಚ್ಚುವುದರಲ್ಲಿ ಹೊಸ ಪದ್ಧತಿ ಅನುಸರಿಸುತ್ತಿದ್ದಾರೆ. ಉಡಿಕೆ ಹಗಲಿನಲ್ಲಿ ಹಚ್ಚುವರು. ಸರಳ ಪದ್ಧತಿಯಿಂದ ಸಂಕ್ಷಿಪ್ತವಾಡಿ ಮುಗಿಸುವರು. ಒಂದು ಒಳ್ಳೆಯ ದಿನ ನೋಡಿ ಮನೆಯಲ್ಲಿ ವರದಾಶಂಕರ ಪೂಜೆ ಹಚ್ಚುವರು. ಉಡಿಕೆಯಾಗುವ ಹೆಣ್ಣು-ಗಂಡು ಪೂಜೆಗಾಗಿ ಮುಂದೆ ಕುಳಿತುಕೊಳ್ಳುವರು. ಪೂಜೆ ಮುಗಿದನಂತರ ಹೊಸಬಟ್ಟೆ ಪಿಯಾರಿ ಮಾಡುವರು. ಜಂಗಮ ಗಂಡನ ಕೈಯಲ್ಲಿ ಒಂದು ಮತ್ತು ಹೆಂಡತಿಯಲ್ಲಿ ಒಂದು ಹೂವಿನ ಹಾರ ಕೊಡುವನು. ಅವರು ಒಬ್ಬರಿಗೊಬ್ಬರು ಹಾಕುವರು. ಅಂದಿನಿಂದ ಅವರನ್ನು ಗಂಡ ಹೆಂಡತಿಯೆಂದು ಸಮಾಜ ಒಪ್ಪುವುದು.

7. ಹೀಗೆ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಡಿಕೆ ಹಚ್ಚುವುದು ನಡೆದು ಬಂದಿದೆ. ಉಡಿಕೆ ಮಾಡಿಕೊಂಡವರಿಗೆ ಮುತ್ತೈದಿತನ ಉಳಿಯುವುದಿಲ್ಲ. ಮಂಗಳ ಕಾರ್ಯಗಳಲ್ಲಿ ಯಾವುದೇ ಚಾಜು ಇವರಿಗೆ ಇರುವುದಿಲ್ಲ. ಉಡಿಕೆ ಮಾಡಿಕೊಂಡರೂ ಚಾಜು ಉಳಿಸಿಕೊಳ್ಳುವುದಕ್ಕಾಗಿ ಬೇರೆ ಪದ್ಧತಿಯಿಂದ ಮಾಡುವರು. ಉಡಿಕೆಯಾಗುವ ಹೆಣ್ಣಿನ ಮಗ್ಗುಲಲ್ಲಿ ಕಠಾರಿ (ಖಡ್ಗ) ಇಟ್ಟು ಉಡಿಕೆ ಹಚ್ಚುವರು. ಕಠಾರಿಯೇ ಗಂಡನೆಂದು ತಿಳಿದು ಅದರ ಮೇಲೆ ಹಾಕಿರುವ ಬಟ್ಟೆಗೂ ಹೆಣ್ಣಿನ ಸೆರಗಿಗೂ ಗಂಟು ಹಾಕುವರು. ಹೀಗೆ ಉಡಿಕೆ ಹಚ್ಚುವುದರಿಂದ ಗಂಡಸಿನ ಚಾಜು ಉಳಿಯುವುದು. ಇದು ಗಂಡಿಗೆ ಮಾತ್ರ ಸಾಧ್ಯ.

'ಉಡಿಕೆ' ಅಮಂಗಳಕರವಾದುದೆಂಬ ನಂಬಿಕೆಯಿಂದ ಮಠ, ಮಂದಿರ, ಕಲ್ಯಾಣ ಮಂಟಪ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾಡುವುದಿಲ್ಲ. ಗಂಡಿನ ಮನೆಯಲ್ಲಿ ಉಡಿಕೆ ಹಚ್ಚುವರು. ಹೆಣ್ಣಿನ ಮನೆಯಲ್ಲಲ್ಲ. ಬಾಲ್ಯ ವಿವಾಹವಾಗಿದ್ದು ಹುಡುಗಿ ಮೈ ನೆರೆಯುವುದಕ್ಕಿಂತ ಮುಂಚೆ ಗಂಡ ಸತ್ತರೆ ಉಡಿಕಿ ಮಾಡುವುದಿಲ್ಲ. ಮರು ಮದುವೆ ಮಾಡುತ್ತಾರೆ ಮತ್ತು ಅಕ್ಷತೆಯನ್ನು ಅಕ್ಕಿಯ ಕಾಳಿನಿಂದ ಮಾಡಿರುವರು, ಜೋಳದಿಂದಲ್ಲ. ಹೆಣ್ಣು ಮೊದಲನೆ ಗಂಡನಿಂದ ಒಂದು ಮಗು ಹಡೆದಿದ್ದು, ಗಂಡ ಸತ್ತರೆ ಅಥವಾ ವಿಚ್ಛೇದನದಿಂದ ಬಿಡುಗಡೆ ಪಡೆದರೆ ಉಡಿಕೆ ಹಚ್ಚುವರು. ಅಂದರೆ ಹಡೆದವಳು ಮಾತ್ರ ಉಡಿಕಿಗೆ ಅರ್ಹಳು.

ಜನಪದರ ವಿಚಾರ

ಉಡಿಕಿ ಪದ್ಧತಿ ಈಗೀಗ ಜನಪದರಿಂದ ಮಾಯವಾಗುತ್ತಿದೆ. ವಿದ್ಯಾವಂತ ನಾಗರಿಕರು ಉಡಿಕೆಯ ಬದಲಿಗೆ ಮದುವೆ ಮಾಡಿಕೊಳ್ಳುತ್ತಿದ್ದಾರೆ.

ಗ್ರಂಥ ಋಣ

1. ಭಾರತೀಯ ಸಾಮಾಜಿಕ ಸಂಸ್ಥೆಗಳು : ಎಂ. ನಂಜಮ್ಮಣ್ಣಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
2. ಮಾನವಶಾಸ್ತ್ರ : ಪ್ರೊ. ಡಿ. ಕೆ. ಶಿವಣ್ಣ, ಕಲಾಪ್ರಕಾಶನ–2, ಮುನೇಶ್ವರ ಬ್ಲಾಕಿನ ಎರಡನೆ ಕ್ರಾಸ್, ಬೆಂಗಳೂರು–560003
3. ಹಿಂದು ವಿವಾಹ ಶಾಸನ : ಎಚ್. ಗಂಗಾಧರನ್, ಸರಸ್ವತಿ ಗ್ರಂಥ ಮಾಲೆ
4. ಸುಧಾ : ಯುಗಾದಿ 1982
5. ಕಿಟ್ಟೆಲರ ಅರ್ಥಕೋಶ
6. ಕನ್ನಡ ಅರ್ಥಕೋಶ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿ.ಶ. 450–1150 ಡಾ॥ ಚಿದಾನಂದ ಮೂರ್ತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಡಾ. ಎಚ್. ವಿ. ಶ್ರೀನಿವಾಸಮೂರ್ತಿ

ಸಾಮಾಜಿಕ ಪರಿವರ್ತನೆ ಮತ್ತು ಕನ್ನಡ ಸಾಹಿತ್ಯ

ಸಾಹಿತ್ಯವು ನಾಡಿನ ಸಂಸ್ಕೃತಿಯ ಹಿರಿಮೆಯ ಸೂಚಕವಾಗಿದೆ ಎಂಬ ಹೇಳಿಕೆ ಸತ್ಯಕ್ಕೆ ದೂರವಾದುದಲ್ಲ. ಸಂಸ್ಕೃತಿಯ ಬೆಳವಣಿಗೆ ಸಮಾಜದ ಪ್ರಗತಿಯನ್ನು ಅವಲಂಬಿಸಿರುತ್ತದೆ. ಸಮಾಜದ ಈ ಪ್ರಗತಿಗೆ ಸಾಹಿತ್ಯ ದರ್ಪಣವಿದ್ದಂತೆ. ಹಿಂದೂ ಸಮಾಜ ಸ್ಥಾಯಿಸ್ವಭಾವದ್ದಾಗಿರದೆ ಕ್ರಿಯಾತ್ಮಕವಾಗಿದೆ. ಸಮಾಜದ ಈ ಕ್ರಿಯಾ ಶಕ್ತಿಯನ್ನು ಸಾಹಿತ್ಯ ಪ್ರತಿಬಿಂಬಿಸುತ್ತದೆ. ಅಲ್ಲದೆ, ಸಮಾಜದಲ್ಲಿ ಧರ್ಮವನ್ನು ಪಸರಿಸಲು ವಾಹಕವಾಗಿ ಅನೇಕ ಶತಮಾನಗಳಿಂದ ಸಾಧಕವಾಗಿದೆ. ಸಮಾಜದ ಉದ್ಧಾರಕ್ಕಾಗಿಯೇ ರಾಮಾಯಣ ಮಹಾಭಾರತಗಳಂತಹ ಮಹಾಕಾವ್ಯಗಳು ಜನಿಸಿದವೆಂಬುದು ಎಲ್ಲರಿಗೂ ತಿಳಿದ ವಿಚಾರ. ದೋಷಗಳು ತಲೆಯಿಕ್ಕದಂತೆ ತಡೆದು, ಸೌಂದರ್ಯವನ್ನು ಮಿರುಗಿಸಿ ಸಹೃದಯಿ ಹೃದಯವನ್ನು ಧರ್ಮದತ್ತ ಸೆಳೆದು, ಆ ಮೂಲಕ ಸಮಾಜವನ್ನು ಬಾಳಿಸುವ, ಉನ್ನತಿಗೇರಿಸುವ ವಿಶಿಷ್ಟವಾದೊಂದು ಚೈತನ್ಯವೇ ಕಾವ್ಯ ಅಥವ ಕಾವ್ಯಧರ್ಮ. "ಧರ್ಮದಂತೆ ಕಾವ್ಯಧರ್ಮವೂ ಸಂಸಾರ ಸಾರವಾಗಿದ್ದೆ, ಸಮಾಜೋದ್ಧಾರಕ್ಕೆ ಪಂಚಾಂಗವಾಗದೆ." ಎಂಬ ಪಂಪ ಮಹಾಕವಿಯ ನುಡಿಯನ್ನು ನಾವು ಇಲ್ಲಿ ಸ್ಮರಿಸಬಹುದು.

ನಮ್ಮ ನಾಡಿನಲ್ಲಿ ಕನ್ನಡಸಾಹಿತ್ಯ ಉಗಮವಾಗುವ ಕಾಲಕ್ಕೆ ಭಾರತದ ಪ್ರಮುಖ ಧರ್ಮಗಳಾದ ವೈದೀಕ, ಜೈನ ಮತ್ತು ಬೌದ್ಧ ಧರ್ಮಗಳು ತಮ್ಮ ನೆಲೆಗಳನ್ನು ಇಲ್ಲಿ ಸ್ಥಾಪಿಸಿದ್ದವು. ವೈದಿಕ ಧರ್ಮವು ಜನಪ್ರಿಯವಾಗಿದ್ದು, ಹಿಂದೂ ಸಮಾಜದ ಊರುಗೋಲಾಗಿತ್ತು. ವರ್ಣಾಶ್ರಮ ಧರ್ಮದ ಮೇಲೆ ರೂಪಿತವಾದ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಚಾತುರ್ವರ್ಣ್ಯಗಳಲ್ಲದೆ, ಪಂಚಮರು ಮತ್ತು ಕೆಳಮಟ್ಟದವರು ಎಂದು ಕರೆಯಲ್ಪಡುತ್ತಿದ್ದ ಇತರ ಜಾತಿಗಳೂ ಮೈದೋರಿದ್ದವು. ಆದರೆ ವರ್ಣನಿಯೋಜಿತ ಕರ್ಮಗಳ ನಿಷ್ಠಾಚರಣೆಯಿಂದ ಸಮಾಜದಲ್ಲಿ ಶಾಂತಿ ಮತ್ತು ಸಾಮರಸ್ಯ ನೆಲೆಸಿತ್ತು.

ಸಮಾಜದಲ್ಲಿಯ ಈ ಶಾಂತಿ ಮತ್ತು ಸಾಮರಸ್ಯ ಬಹುಕಾಲ ಉಳಿಯಲಿಲ್ಲ. ಜಾತಿನಿಯಮಗಳು ಸಮಾಜದ ಒಡಕಿಗೆ ಮತ್ತು ವಿಭಜನೆಗೆ ಬಹುಮಟ್ಟಿಗೆ ಕಾರಣ

ವಾದವು. ನಿರಾಶರಾದ ಜನರು ಸಾಂಪ್ರದಾಯಿಕ ಸಮಾಜವನ್ನು ವಿರೋಧಿಸಲಾರಂಭಿಸಿದರು. ಅಸಾಂಪ್ರದಾಯಿಕ ಧರ್ಮಗಳಾದ ಜೈನ ಮತ್ತು ಬೌದ್ಧ ಧರ್ಮಗಳ ವಿಸ್ತರಣೆ ಇದಕ್ಕೆ ಉತ್ತೇಜನ ನೀಡಿತೆಂದರೆ ತಪ್ಪಾಗಲಾರದು. ತಲಕಾಡಿನ ಗಂಗರು, ಹೊಯ್ಸಳರು ಮುಂತಾದ ಅರಸುಮನೆತನದವರು ಜೈನಧರ್ಮಕ್ಕೆ ಪ್ರೋತ್ಸಾಹವಿತ್ತು, ಆ ಧರ್ಮದ ಜನಪ್ರಿಯತೆಗೆ ಕಾರಣರಾದರು. ಈ ಧರ್ಮ ಬೋಧಿಸಿದ ಜಾತ್ಯತೀತ ಸಮಾಜ ಮತ್ತು ಸುಲಭವಾಗಿ ಗ್ರಹಿಸಲಾಗುವ ಅದರ ತತ್ವಗಳು ಜನರ ಮನವನ್ನು ಬಹುಮಟ್ಟಿಗೆ ಆಕರ್ಷಿಸಿದವು. ವೈದಿಕ ಸಮಾಜದ ಪ್ರತಿಪಾದಕರು ತಮ್ಮ ಸಮಾಜದಲ್ಲಿನ ನ್ಯೂನತೆಗಳನ್ನು ಅರಿತು, ಅವುಗಳನ್ನು ತೊಡೆದುಹಾಕಿ, ಸಮಾವನ್ನು ಪರಿವರ್ತಿಸಲು ಯತ್ನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಸಮಾಜದ ಈ ಪರಿವರ್ತನೆಯಲ್ಲಿ ಸಾಹಿತ್ಯದ ಪಾತ್ರವೇನು ? ಎಂಬ ಪ್ರಶ್ನೆಯನ್ನು ಉತ್ತರಿಸುವುದು ಅಥವ ಅದರ ಪಾತ್ರವನ್ನು ನಿರ್ಧರಿಸುವುದು ಸುಲಭದ ಕೆಲಸವಲ್ಲ. ಕನ್ನಡ ಸಾಹಿತ್ಯದಲ್ಲಿ ಮಧ್ಯಕಾಲದವರೆಗೆ ಅಂದರೆ ಸಮಾರು ಹನ್ನೆರಡನೆಯ ಶತಮಾನದವರೆಗೆ ಈ ಯತ್ನ ನಡೆಯಲಿಲ್ಲವೆಂದು ತೋರುತ್ತದೆ. ಆದರೆ ಇದಕ್ಕೆ ಪೂರ್ವದ ಸಾಹಿತ್ಯದಲ್ಲಿ ಸಮಾಜದ ಚಿತ್ರವಿಲ್ಲವೆಂದಲ್ಲ. ಆದರೆ ಇದು ಅಸ್ಪಷ್ಟವಾಗಿದೆ. ಆಗ ಸಮಾಜದ ಪರಿವರ್ತನೆ ಕಾವ್ಯದ ಮುಖ್ಯೋದ್ದೇಶವಾಗಿದ್ದಂತೆ ಕಂಡುಬರುವುದಿಲ್ಲ. ಆದ್ದರಿಂದ ಈ ಆಧಾರದ ಮೇಲೆ ಎಷ್ಟರಮಟ್ಟಿಗೆ ಖಚಿತವಾಗಿ ಸಮಾಜದ ರೂಪರೇಷೆಗಳನ್ನು ನಿರ್ಮಿಸಬಹುದೆಂಬುದು ನಿರ್ವಿವಾದವಾದುದೇನಲ್ಲ.

ಕನ್ನಡ ನಾಡಿನ ಸಮಾಜದ ಸೂಕ್ಷ್ಮಪರಿಚಯವನ್ನು ಪಂಪನ ಕಾವ್ಯಗಳು ಮಾಡಿಕೊಡುತ್ತವೆ. ಜೈನ ಧರ್ಮಾವಲಂಬಿಯಾದರೂ, ಪಂಪ ವೈದಿಕ ಧರ್ಮದ ವಿರೋಧಿಯಾಗಿರಲಿಲ್ಲ. ಆದರೆ ಹಿಂಸಾಪೂರಿತವಾದ ಯಜ್ಞಯಾಗಾದಿಗಳು ಅವನ ಮನಸ್ಸಿಗೆ ಹಿಡಿಸಲಿಲ್ಲ.[1] ತನ್ನ ವಂಶಶಿಖಾಮಣಿ ಮಾಧವ ಸೋಮಯಾಜಿಯು ವೇದೋಕ್ತವೆಂದು ತಿಳಿದು ಮಾಡುತ್ತಿದ್ದ ಯಜ್ಞಕ್ಕೆ ಅತನು ತೀವ್ರವಿರೋಧಿ. "ಈ ಕುಲದ ವೈದಿಕ ಕರ್ಮಕಾಂಡ ಪ್ರವಣತೆ ಮಾಧವ ಸೋಮಯಾಜಿಯಿಂದಿತ್ತ ಮಾಸಿ ಹೋಯಿತು" ಎಂಬ ಹೇಳಿಕೆಯಲ್ಲಿ ಪಂಪನ ಜುಗುಪ್ಸೆ ಎದ್ದುಕಾಣುತ್ತದೆ.

ಈ ಕಾಲಕ್ಕಾಗಲೇ ವೈದಿಕ ಯಜ್ಞಯಾಗಗಳು ಅಪಮೌಲ್ಯಕ್ಕೆ ಈಡಾಗಿದ್ದವೆಂಬುದನ್ನು ಇದರಿಂದ ನಾವು ಭಾವಿಸಬಹುದು. ಮಿಗಿಲಾಗಿ, ಹಿಂಸಾತ್ಮಕವಾದ ಯಜ್ಞಗಳಿಗೆ ಪ್ರಬಲ ವಿರೋಧವಿದ್ದಿತು. ಬಹುಶಃ ಇದೇ ಬ್ರಾಹ್ಮಣರನ್ನು

1. ಜೈನ ಧರ್ಮದಲ್ಲಿ ಸವನ ರೂಢಿಯಲ್ಲಿದ್ದುದು ಕಂಡು ಬರುತ್ತದೆ. ಆದಿಪುರಾಣದಲ್ಲಿ ಪಂಪನೇ ಹೇಳಿರುವಂತೆ "ಘೃತಕ್ಷೀರದಧಿ ನಾಳಿಕೇರತೊಯಾಮ್ರರಸೇಕ್ಷುರಸ ಗಂಧೋದಕಾದಿಗಳಿಂ ಮಾಡುವ ಸವನಂ" ಎಂಬ ವರ್ಣನೆ ಇದನ್ನು ಪುಷ್ಟೀಕರಿಸುತ್ತದೆ. ದ್ರೌಪದೀ ವಿವಾಹದಲ್ಲಿ ನಡೆದ ಲಾಜಹೋಮ ಮತ್ತು ರಾಜಸೂಯ ಸಮಾರಂಭಗಳಲ್ಲಿ ನಡೆದ ಯಾಗಗಳನ್ನು ಪಂಪ ಮನೋಹರವಾಗಿ ವರ್ಣಿಸಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ವಿರೋಧಿಸುವುದಕ್ಕೂ ಕಾರಣವಾಗಿದ್ದಿರಬಹುದು. ಇದರಿಂದ ಬೇಸತ್ತ ಪಂಪನ ತಂದೆ ವೈದಿಕ ಧರ್ಮವನ್ನು ತ್ಯಜಿಸಿ ಜೈನ ಧರ್ಮವನ್ನು ಸ್ವೀಕರಿಸಿದನು. ಇದನ್ನು ಪಂಪ ಹೀಗೆ ವರ್ಣಿಸಿದ್ದಾನೆ.

"ಜಾತಿಯೊಳೆಲ್ಲಮುತ್ತಮದ ಜಾತಿಯಃ ವಿಪ್ರಕುಲಂಗೆ ನಂಬಲೇ
ಮಾತೋ ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ ತ
ಜ್ಜಾತಿಯನುತ್ತರೋತ್ತರಮೆ ಮಾಡಿ ನೆಗಟ್ಟಿದನಿಂತಿರಾತ್ಮವಿ
ಖ್ಯಾತಿಯನಾತನಾತನಮಗಂ ನೆಗಟ್ದಂ ಕವಿತಾಗುಣಾರ್ಣವಂ॥

(ವಿ.ವಿ.ಆ. 14,48)

ಅಹಿಂಸಾತ್ಮಕವಾದ ಯಜ್ಞಕ್ಕೆ ಇಲ್ಲಿ ಅನುಮೋದನೆಯಿದೆ. ಇದಲ್ಲದೆ ಜಾತಿಯ ನಡವಳಿಕೆ ಹಾಗೂ ಅದರ ಪರಿವರ್ತನೆಯನ್ನು ಕುರಿತು ಪಂಪನಕಾವ್ಯಗಳಲ್ಲಿ ಹೆಚ್ಚಿನ ಅಂಶಗಳೇನು ದೊರೆಯುವುದಿಲ್ಲ.

ಸಂಸಾರ ಜೀವನದಲ್ಲಿನ ಅತಿವ್ಯಾಮೋಹವನ್ನು ಪಂಪ ತನ್ನ ಲೌಕಿಕ ಕಾವ್ಯವಾದ 'ವಿಕ್ರಮಾರ್ಜುನವಿಜಯ' ಅಥವ 'ಪಂಪಭಾರತದಲ್ಲಿ ಬರೆದಿದ್ದಾನೆ. ಇಲ್ಲಿ ನಮ್ಮ ಕವಿ ಅರಿಕೇಸರಿಯಿಂದ ಹೇಳಿಸಿರುವುದನ್ನು ನೋಡೋಣ :

ಅಲರ್ಗಣ್ಣೊಳ್ ಸ್ಮರನಿರ್ದನಕ್ಕುಮೆಡೆವೋಪಾ ಜೋಡೆ ಕಾಮಂಗೆ ಕಾ ।
ದಲೆಯಕ್ಕುಂ ಪೆಜತೇನೊಪಾದರದೊಳ್ ಸಂಸಾರಸರ್ವಸ್ವಮಂ ।
ಗೆಲೆವಂದಿಪನಲಂಪನಾಳ್ದ ಸವಿಯಂಟಕ್ಕುಂ ಸಮಂತಾವಗಂ ।
ತಲೆಯಂ ಮೂಗುಮನುತ್ತೆಯಿಟ್ಟು ನೆರೆವಂತುಂತೇನವರ್ ಗಾಂಪರೇ ॥

(ವಿ.ವಿ.ಆ. : 4, ಪ. 84.)

ಸಂಸಾರ ಸರ್ವಸ್ವದ ಮಹಿಮೆಯನ್ನರಿಯದ ಈ ಮೂಢಜನರು ಕೆಡುತ್ತಿದ್ದಾರಲ್ಲ ಎಂಬ ಅರಿಕೇಸರಿಯ ಈ ಕನಿಕರದ ಮಾತು ಮೂಢರಿಗೆ ಎಚ್ಚರಿಕೆ ನೀಡುವಂತಹದೂ ಆಗಿದೆ ಧಾರ್ಮಿಕ ದಾಂಪತ್ಯದ ಸುಖಾನುಭವದತ್ತ ಜನರ ಮನಸ್ಸನ್ನು ಸೆಳೆಯುವುದು ಕವಿಯ ಉದ್ದೇಶವಾಗಿತ್ತೆಂದು ತೋರುತ್ತದೆ.

ಪಂಪನ ಕಾವ್ಯದಲ್ಲಿ ವೇಶ್ಯಾವಾಟದ ಸುಂದರ ವರ್ಣನೆಯಿದೆ. ಕವಿಯು ಅವರನ್ನು ಉತ್ತಮ ಮತ್ತು ಅಧಮ ವರ್ಗಗಳೆಂದು ವಿಭಜಿಸಿ, ಅವರಲ್ಲಿ ಜೋಡೆಗೆಯ್ಯುತ್ತದ ಗಂಡವಳ್ತಿಯರಾದ ಮಾಲೆಗಾರ್ತಿಯರು, ಜೋಡೆಯರು ಅಥವ ಪಾಣ್ಬೆಯರು, ಪೆಂಡವಾಸದ ಒಳ್ವೆಂಡಿರು, ಮತ್ತು ಕಳ್ಳೊಳಮುಮರ್ದಿಸೊಳಂ ಪುಟ್ಟಿದ ಪೆಂಡಿರಂತೆ ಸೊಗೆಯಿಸುವ ಒಳ್ವೆಂಡಿರು ಎಂಬ ನಾಲ್ಕು ವರ್ಗಗಳಿದ್ದುವೆಂದು ಸೂಚಿಸಿದ್ದಾನೆ. ಇದರಲ್ಲಿ ಮೊದಲು ಎರಡು ವರ್ಗದವರು ಅಧಮವರ್ಗದವರಾಗಿದ್ದರೆ ಕಡೆಯ ಎರಡು ವರ್ಗದವರು ಉತ್ತಮ ವರ್ಗದವರಾಗಿದ್ದರು. ಈ ಅಧಮ ವರ್ಗದವರ ವರ್ತನೆಯಿಂದ ಬೇಸರಗೊಂಡ ಅರಿಕೇಸರಿ ಅವರನ್ನು "ಪಿರಿದುಂ ಗಟಪುತ್ತುವಿರ್ಪಳಂ। ಸಾರಿಕೆಯೆಂಬ

ರಲ್ಲದಭಿಸಾರಿಕೆಯೆಂಬರೆ ಬುದ್ಧಿಯುಳ್ಳವರ್" ಎಂದು ಸಾಧಿಸಿದ್ದಾನೆ. ಸಮಾಜದ ಕೆಡುಕಿಗೆ ಅವರು ಬಹುಮಟ್ಟಿಗೆ ಕಾರಣರಾಗಿದ್ದರೆಂದು ತೋರುತ್ತದೆ. ಅವರ ಪಿಡುಗು ಕವಿಯ ವಿರೋಧ ಭಾವನೆಗೆ ಬೀಜವಾದದು ಸಹಜವಾಗಿದೆ.

ಆದರೆ ಉತ್ತಮ ವರ್ಗದ ಒಳ್ವೆಂಡಿರಿಂದ ಸಮಾಜಕ್ಕೆ ಯಾವ ರೀತಿಯ ಭಯ ವಿರಲಿಲ್ಲ. ಅವರು ಹಿಂದೂ ಸಮಾಜದಲ್ಲಿ ಕಂಡುಬರುವ ಗಣಿಕೆಯರಿಗೆ ಸರಿಸಮ ನಾಗಿದ್ದರು. ಅವರು ಸಮಾಜದಲ್ಲಿ ತಮ್ಮದೇ ಆದ ಸ್ಥಾನವನ್ನು ಹೊಂದಿ, ಸಮಾಜದ ಗೌರವಕ್ಕೆ ಪಾತ್ರರಾಗಿದ್ದರು. ಚದುರರೂ, ಸಂಸ್ಕೃತರೂ, ಕುಶಲಕಲೆಗಳಲ್ಲಿ ನಿಪುಣರೂ ಆದ ಗಣಿಕೆಯರು ಒಂದು ರೀತಿಯಲ್ಲಿ ಸಮಾಜದ ಶೋಭೆಗೆ ಕಾರಣ ರಾಗಿದ್ದರು. ಅವರ ಬೆಡಗು ಬಿನ್ನಾಣಗಳನ್ನು ಕವಿ ಈ ರೀತಿ ಚಿತ್ರಿಸಿದ್ದಾನೆ.

> ಒಂದೆಡೆಯೊಳ್ ಮನಸಿಜನ ನಡಪಿದ ಜಂಗಮಲತೆಗಳಂತೆ, ಮನೋಜನ ಕಾಪಿನ ಕಲ್ಪಲತೆಗಳಂತೆ, ಮನೋಜನೆಂಬ ದೀವಗಾಜಿನ ಪುಲ್ಲೆಗಳಂತೆ, ತಂತಮ್ಮ ಮನೆಯ ಮುಂದಣ ಪಟ್ಟಿಯ ಜಗಲಿಗಳೊಳ್, ಮಣಿಮಯ ಮತ್ತವಾರಣಂಗಳೊಳವಳವಿ ಗಳಿಂದ ವಿಳಾಸಗಳೊಳಂ ತಂಡತಂಡದೆ ನೆರೆದಿರ್ಪ ಪೆಂಡವಾಸದೊಳ್ವೆಂಡಿರು.

> ನಯಮೊಳೆ ನೋಡಿ ನೋಟದೊಳೆ ಮೋಳಿಸಿ ಮೋಳದೊಳಪ್ಪುಕೆಯ್ದು ಗೊ ।
> ಟ್ಟಿಯೊಳೊಳಪೊಯ್ದು ಪತ್ತಿಸುವ ಸೂಟಿಯುರಂದಮನೆಯ್ದೆ ಪೋಲ್ವ ಸೂ।
> ಳೆಯರ ತಜುಂಬು ಸೂಳೆಯರ ಮೇಲ್ಮುಡಿ ಸೂಳೆಯರಿರ್ಪ ಪಾಂಗು ಸೂ।
> ಳೆಯರ ಸೊಬಗ್ಗಿ ನಾಡೆ ತನಗಳ್ತಿ ದಲಕ್ಕಳೆ ಸೂಳೆಯಾಗಳೇ ।

ವೇಶ್ಯಾವರ್ಗದಲ್ಲಿದ್ದಂತೆ ವಿಟವರ್ಗದಲ್ಲಿಯೂ ಅರಬೊಜಂಗ, ಕಿರುಕುಳ ಬೊಜಂಗ, ಪೋರ್ಕುಳಿ ಬೊಜಂಗ ಮತ್ತು ಕತ್ತುರಿ ಬೊಜಂಗ ಎಂಬ ನಾಲ್ಕು ವರ್ಗ ಗಳಿದ್ದುವೆಂದು ಕವಿ ತಿಳಿಸಿದ್ದಾನೆ.

ಸ್ತ್ರೀಯರ ಸ್ಥಾನಮಾನ ಕುರಿತಾಗಿ ಪಂಪನ ಕಾವ್ಯಗಳಲ್ಲಿ ಹೆಚ್ಚಿನ ವಿವರಗಳು ನಮಗೆ ಕಂಡು ಬರುವುದಿಲ್ಲ. ಏಕಪತ್ನೀವ್ರತಕ್ಕೆ ಆತನು ಮಾರುಹೋಗಿದ್ದನೆಂಬುದು ಆತನು ಭಾರತದಲ್ಲಿ ಅರ್ಜುನ–ಸುಭದ್ರೆಯರ ವಿವಾಹವನ್ನು ಪುಷ್ಟೀಕರಿಸುವುದರಿಂದ ವ್ಯಕ್ತವಾಗುತ್ತದೆ.

ಪಂಪನ ನಂತರ ಸಾಹಿತ್ಯದಿಂದ ಸಮಾಜದ ನಿಜವಾದ ಪರಿವರ್ತನೆಯಾದುದು ಬಸವಣ್ಣನವರ ಕಾಲದಲ್ಲಿ. ಜಾತಿ ಭೇದಗಳಿಂದಾಗಿ ಸಮಾಜಕ್ಕೆ ಆ ಕಾಲದಲ್ಲಿ ಒಂದು ದೊಡ್ಡ ಗಂಡಾಂತರವುಂಟಾಗಿತ್ತು. ಜಾತಿಯ ಹಾಗೂ ದೇವರ ಹೆಸರಿನಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿದ್ದವು. ಮೇಲು ಕೀಳೆಂಬ ಭಾವನೆ ಅತಿರೇಕದ ಪರಮಾ ವಧಿಯನ್ನು ಮುಟ್ಟಿದ್ದಿತು. ಸ್ತ್ರೀಯ ಸ್ಥಾನಮಾನಗಳಲ್ಲಿ ಅನೇಕ ಮಾರ್ಪಾಡಾಗಿ, ಆಕೆಯ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದುದೇ ಅಲ್ಲದೆ, ಆಕೆಯು ಕೇವಲ ಭೋಗದ ವಸ್ತು

ವಾಗಿ ಪರಿಗಣಿಸಲ್ಪಟ್ಟಿದ್ದಳು. ಒಂದು ಮಾತಿನಲ್ಲಿ ಹೇಳುವುದಾದರೆ, ಸಮಾಜ ತನ್ನ ಅಂತಸ್ಸತ್ವವನ್ನು ಕಳೆದುಕೊಂಡು ಅಧೋಗತಿಗಿಳಿದಿತ್ತು. ಈ ಸಮಾಜದ ಕಾಯಕಲ್ಪ ವಾದುದು ವಚನ ಸಾಹಿತ್ಯದಿಂದ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ವಚನ ಸಾಹಿತ್ಯದಲ್ಲಿ ಜಾತಿ ನಿರ್ಮೂಲನದ ಒಂದು ಬೃಹತ್ ಯತ್ನ ನಡೆದಿದೆ. ವರ್ಣಗಳಿಗೆ ಮೂಲವಾದ ವೇದಗಳನ್ನು ಬಸವಣ್ಣನವರು ಅಪೌರುಷೇಯವೆಂದು ಗಣಿಸಲಿಲ್ಲ. "ಉತ್ತಮ ಕುಲದಲ್ಲಿ ಹುಟ್ಟಿದನೆಂಬ ಕಷ್ಟದ ಹೊರೆಯ ಹೊರಸದಿರಯ್ಯ" ಎಂದು ಬಸವಣ್ಣನವರು ಕೂಡಲ ಸಂಗಮನನ್ನು ಕಳಕಳಿಯಿಂದ ಪ್ರಾರ್ಥಿಸಿದ್ದಾರೆ. ಉತ್ತಮ ಕುಲದವರಿಂದ ಮಾತ್ರ ಲೋಕೋದ್ಧಾರ ಸಾಧ್ಯ ಎಂಬುದನ್ನು ಹೀಗೆ ಮೂದಲಿಸಿದ್ದಾರೆ.

ವ್ಯಾಸ ಬೋಯಿತಿಯ ಮಗ।
ಮಾರ್ಕಾಂಡೇಯ ಮಾತಲಗಿಯ ಮಗ।
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿ ಭೋ।
ಕುಲದಿಂದ ಮುನ್ನೇನಾದಿರಿ ಭೋ:

ಸಾಕ್ಷಾದಗಸ್ತ್ಯ ಕ್ಬಬಿಲ, ದೂರ್ವಾಸ ಮಚ್ಚಿಗ,
ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ
ಮೂರು ಲೋಕವನರಿಯೆ ನಾವಿಂದ ಕಾಣಿ ಭೋ
ನಮ್ಮ ಕೂಡಲಸಂಗನ ವಚನವಿಂತೆದುದು:
ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜಂ ಭೋ।

ಮತ್ತೆ

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ।
ಜಲ–ಬಿಂದುವಿನ ವ್ಯವಹಾರ ಒಂದೇ,
ಆಶೆಯಾಮಿಷ ಹರುಷರೋಷ ವಿಷಯಾದಿಗಳೆಲ್ಲ ಒಂದೇ।
ಏನನೋದಿ, ಏನಕೇಳಿ, ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
....
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ।
ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ?
ಇದು ಕಾರಣ ಕೂಡಲ ಸಂಗಮದೇವ,
ಲಿಂಗಸ್ಥಲವನರಿದವನೇ ಕುಲಜನು।

ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲಯ, ಕುಲವೇನೊ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

ಈ ವಚನಗಳು ಸಮಾಜದಲ್ಲಿದ್ದ ನ್ಯೂನತೆಗಳನ್ನು, ಚಾತುರ್ವರ್ಣ್ಯ ನಿಯಮದಿಂದ ನಡೆಯುತ್ತಿದ್ದ ಅನೈಕ ಕೃತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ತೋರಿಸುತ್ತವೆ ಮಾತ್ರವಲ್ಲ, ಇಲ್ಲಿ ಹೊಸ ಸಮಾಜ ವ್ಯವಸ್ಥೆಯ ಸೂತ್ರಗಳೂ ಇವೆ. ಸಮಾಜದ ಈ ಕಟು ಟೀಕೆಗಳು "ಸಾತ್ವಿಕ-ಸಂತಾಪದಿಂದ ಪ್ರೇರಿತವಾದುದು, ಎಲ್ಲರನ್ನೂ ಕುರಿತುದು. ವೈದಿಕರು-ಅವೈದಿಕರು, ಭವಿಗಳು-ಭಕ್ತರು ಯಾರೆ ಇರಲಿ ಅವರಲ್ಲಿಯ ಹುಸಿ-ಮೋಸಗಳನ್ನು ಅದು ಬಯಲಿಗೆಳೆಯುತ್ತದೆ. ಯಾವೊಂದು ವ್ಯಕ್ತಿಯ ಇಲ್ಲವೆ ಗುಂಪಿನ ದ್ವೇಷವಲ್ಲ ಅದು. ಆದರೆ ಅನ್ಯಾಯ-ವೈಷಮ್ಯಗಳಿಂದ ಕೂಡಿದ ಅಂದಿನ ಸಮಾಜವ್ಯವಸ್ಥೆಯ ಬಗ್ಗೆ ತಾತ್ಸಾರ ಅದಕ್ಕೆ ಸ್ಥಾಯಿ."

ಪ್ರಚಲಿತ ಸಮಾಜದ ಮೂಢ ನಂಬಿಕೆಗಳನ್ನು ಬಸವಣ್ಣನವರು ಕಟುವಾಗಿ ವಿರೋಧಿಸಿದರು. ಈ ವಿರೋಧ ಹೀಗೆ ವ್ಯಕ್ತಪಟ್ಟಿದೆ.

> ಲಗ್ನವೆಲ್ಲಿಯದು, ವಿಘ್ನವೆಲ್ಲಿಯದು ...
> ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ ।
> ರಾಶಿ-ಕೂಟ, ಋಣ-ಸಂಬಂಧ ಉಂಟೆಂದು ಹೇಳಿರಯ್ಯ ।
> ಚಂದ್ರಬಲ-ತಾರಾಬಲ ಉಂಟೆಂದು ಹೇಳಿರಯ್ಯ ।
> ನಾಳಿನ ದಿನಕಂದಿನ ದಿನ ಲೇಸೆಂದು ಹೇಳಿರಯ್ಯ ।
> ಕೂಡಲಸಂಗಮದೇವರ ಪೂಜಿಸಿದ ಫಲ ನಿಮ್ಮದಯ್ಯ ।

ಕಲ್ಲದೇವರು ದೇವರಲ್ಲ, ಮಣ್ಣುದೇವರು ದೇವರಲ್ಲ, ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ, ರಾಮೇಶ್ವರ-ಗೋಕರ್ಣ-ಕಾಶಿ-ಕೇದಾರ ಮೊದಲಾದ ಪುಣ್ಯ ಕ್ಷೇತ್ರಗಳಲ್ಲಿನ ದೇವರು ದೇವರಲ್ಲ. ತನ್ನ ನಾನರಿದು ತಾನಾರೆಂದು ತಿಳಿದಡೆ ತಾನೇ ದೇವ.

> ದೇವಲೋಕ-ಮರ್ತ್ಯಲೋಕವೆಂಬುದು ಬೇರಿಲ್ಲ ಕಣಿರಣ್ಣ
> ಸತ್ಯವ ನುಡಿವುದೇ ದೇವಲೋಕ
> ಮಿಥ್ಯವ ನುಡಿವುದೇ ಮರ್ತ್ಯಲೋಕ
> ಆಚಾರವೇ ಸ್ವರ್ಗ
> ಅನಾಚಾರವೇ ನರಕ
> ನೀವೇ ಪ್ರಮಾಣು ಕೂಡಲಸಂಗಮದೇವ.

—ಎಂದು ವಿವೇಚಿಸಿದರು. ಸ್ತ್ರೀಯರನ್ನು ದಾಸ್ಯದಿಂದ ವಿಮೋಚನೆಮಾಡಿ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟವರು ಬಸವಣ್ಣನವರು. ಮೋಕ್ಷಸಾಧನೆಯಲ್ಲಿಯೂ ಸಹ ಅವರಿಗೆ ಅರ್ಹ ಸ್ಥಾನವನ್ನು ಗಳಿಸಿಕೊಟ್ಟರು.

ಈ ರೀತಿಯಲ್ಲಿ ಸಮಾಜದ ಉದ್ಧಾರಕ್ಕೆ ವಚನ ಸಾಹಿತ್ಯದಲ್ಲಿ ಮಹತ್ವದ ಯತ್ನ ನಡೆದಿದೆ. ಜಾತಿ ನಿರ್ಮೂಲನ, ಅಸ್ಪೃಶ್ಯತಾ ನಿವಾರಣೆ, ಪುರುಷರಂತೆಯೇ ಮಹಿಳೆ

ಯರಿಗೆ ಮೋಕ್ಷಸಾಧನೆಯಲ್ಲಿ ಸಮನಾಧಿಕಾರ, ಮೂಢನಂಬಿಕೆಗಳ ಉಚ್ಚಾಟನೆ. ಈ ಬಗೆಯ ಪ್ರಗತಿಪರ ವಿಚಾರಗಳ ನಿಧಿಯನ್ನು ವಚನ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ವಚನ ಸಾಹಿತ್ಯ ಸಮಾಜದ ಸುಧಾರಣೆಗಳಿಗೆ ನಾಂದಿಯಾಯಿತು. ಜನರಲ್ಲಿ ಇದು ಅರಳಿಸಿದ ಆಶಾಭಾವನೆಯನ್ನು ಕುಂದಲು ಬಿಡದಂತೆ ದಾಸ ಸಾಹಿತ್ಯ ಈ ಪ್ರಗತಿ ಪರ ಧೋರಣೆಗಳನ್ನು ಪ್ರತಿಪಾದಿಸುತ್ತಾ ಬಂದಿತು. ದಾಸರಲ್ಲಿ ಅಗ್ರಗಣ್ಯರಾದ ಪುರಂದರ ದಾಸರು ಶೀಲ ಸಂಪನ್ನತೆ ಮತ್ತು ಚಾರಿತ್ರ ಶುದ್ಧಿಯ ಅಗತ್ಯವನ್ನು ಬೋಧಿಸಿದರು. ಹಿರಿಮೆಯನ್ನು ಕುಲವಾಗಲೀ, ವಿದ್ಯೆಯಾಗಲೀ ಗಳಿಸಿಕೊಡುವುದಿಲ್ಲ. ಗೌರವಕ್ಕೆ ಶೀಲ ಸಂಪತ್ತಿಯೇ ಕಾರಣ ಎಂದರು. ಹೊಲೆಯನೆಂಬುದು ಜಾತಿಯನ್ನು ಸೂಚಿಸುವ ಶಬ್ದವಲ್ಲವೆಂದೂ, ಆದು ಭ್ರಷ್ಟಾಚಾರವನ್ನು ಸೂಚಿಸುವ ಪದವೆಂದರು.

" ಹೊಲೆಯ ಹೊರಗಿಹನೆ, ಊರೊಳಗಿಲ್ಲವೆ ।
ಬಲ್ಲವರು ಪೇಳಿ, ಹರಿಭಕ್ತರಾದವರು "॥

ಎಂದು ಕೇಳಿದ್ದಾರೆ. "ಹೇಳಿದ ಶಾಸ್ತ್ರವನು ತಿಳಿಯದವ, ಆಳಾಗಿ ಅರಸಿಗೆ ಮಣಿಯದಾತ, ಇದ್ದು ದಾನ ಧರ್ಮಮಾಡದಿದ್ದವ, ಆಶೆಯಿಂದಲಿ ಬಹಳ ದೋಷ ಮಾಡುವವ, ಹುಸಿಯಾಡುವವ, ಉಂಡಮನೆಗೆರಡ ಯೋಚಿಸುವಾತ, ಗಂಡ-ಹೆಂಡಿರೊಳು ಭೇಧವಿಕ್ಕುವವ, ಅರಿತು ಆಚಾರವನು ಮಾಡದಿದ್ದವ, ಗುರುಹಿರಿಯರು ಕಂಡು ಎರಗದಾತ" ಇವರು ಹೊಲೆಯರೆಂದು ಹೇಳಿದರು. ದೇಹದ ಮಲಿನತೆ ಹಾಗೂ ವ್ಯಕ್ತಿಯ ಕೀಳ್ತನದಿಂದ ಚಿತ್ತಕೆ ಯಾವ ಸೋಂಕೂ ತಗಲುವುದಿಲ್ಲ. 'ನದಿಯು ಡೊಂಕಾದರೇನು ಉದಕಡೊಂಕೆ? ಕಬ್ಬುಡೊಂಕಾಗಿರಲು ಅದರ ರಸ ಡೊಂಕೇ ?" ಎಂದು ವಿವೇಚಿಸಿದರು.

ದಾಸಸಾಹಿತ್ಯದ ಪುನರುಕ್ತಿಯನ್ನು ಸರ್ವಜ್ಞಕವಿಯಲ್ಲಿ ಕಾಣುತ್ತೇವೆ. ಸರ್ವಜ್ಞಕವಿ ನಿಷ್ಪಕ್ಷಪಾತಿ ; ಸರಿಯೆಂದು ಕಾಣದಿದ್ದುದು ಯಾವ ಧರ್ಮದಲ್ಲಿದ್ದರೂ ಅದನ್ನು ನಿಷ್ಠುರವಾಗಿ ಖಂಡಿಸಲು ಹಿಂಜರಿಯಲಿಲ್ಲ. ಅವರಲ್ಲಿ ಕಂಡುಬರುವ ಗುಣಗಳನ್ನು ಎತ್ತಿ ತೋರಿಸಲೂ ಸಹ ಅಳುಕಲಿಲ್ಲ.

ಮಾತನಱಿದಾ ಸುತನು ರೀತಿಯಱಿದಾ ಸತಿಯು
ನೀತಿಯನ್ನಱಿದ ವಿಪ್ರನು ಜಗದೊಳು
ಜ್ಯೋತಿಯಿದ್ದಂತೆ ಸರ್ವಜ್ಞ ॥

ದೇವರನ್ನು ಮೆಚ್ಚಿಸುವುದು ಆತ್ಮಗುಣಗಳಿಂದ ಸಾಧ್ಯವೇ ಹೊರತು ಜಾತಿಯ ಅರ್ಹತೆಯಿಂದಲ್ಲವೆಂದು ತಿಳುವಳಿಕೆ ಹೇಳಿದ್ದಾನೆ.

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿಯೆನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ ॥

ಸರ್ವಜ್ಞನ ವಿಚಾರಲಹರಿ ಮಹಿಳೆಯರನ್ನೂ ಒಳಗೊಂಡಿತ್ತು. ನಾರಿಯರ ಗುಣ ಹಾಗೂ ಅವಗುಣ, ಅವರ ಸ್ಥಾನಮಾನ, ಇಹಪರಗಳಲ್ಲಿ ಅವರಿಂದ ಆಗುವ ಒಳ್ಳೆಯದು, ಕೆಟ್ಟದು, ಕಷ್ಟಸುಖ ಇವುಗಳ ಕುರಿತಾಗಿ ವಿವೇಚನೆ ಕಂಡು ಬರುತ್ತದೆ. ಬಾಳುವೆ ನಡೆಸಲು ಅವರು ಎಷ್ಟು ಮುಖ್ಯ ಎಂಬುದರ ತಿಳುವಳಿಕೆಯಿದೆ.

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆಹೊಯಿದಂತೆ ಸರ್ವಜ್ಞ ॥

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನ್ನರಿವ ಸತಿಯಾಗೆ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ॥

ಸಮಾಜದಲ್ಲಿ ಗಣಿಕೆಯರಿಗೆ ಸಲ್ಲುತ್ತಿದ್ದ ಮಾನ್ಯತೆಯನ್ನು ಸರ್ವಜ್ಞಕವಿ ಅಂಗೀಕರಿಸಲಿಲ್ಲ. ಬಹುಶಃ ಈ ಕಾಲಕ್ಕೆ ಅವರು ಕೆಲವು ಅನೈತಿಕ ನಡಾವಳಿಕೆಗೆ ತುತ್ತಾಗಿ ಆಧುನಿಕ ಕೈಗಾರಿಕಾ ಸಮಾಜದಲ್ಲಿ ಕಂಡು ಬರುವ ವೇಶ್ಯೆಯರಿಗೆ ಸರಿಸಮಾನರಾಗಿದ್ದಂತೆ ತೋರುತ್ತದೆ. ಆದ್ದರಿಂದ ಸೂಳೆಯರ ಸಹವಾಸವೇ ಯೋಗ್ಯವಲ್ಲವೆನ್ನುತ್ತಾನೆ, ಕವಿ.

ಒಂದೆಲಗ ಮೆಲೆಹೊಲ್ಲ ನೀದಕನ ನೆರೆಹೊಲ್ಲ
ತಂದೆಯನು ಜರಿವ ಮಗ ಹೊಲ್ಲ ಸೂಳೆಯ
ದಂದುಗವೆ ಹೊಲ್ಲ ಸರ್ವಜ್ಞ॥

ಕನ್ನಡ ಸಾಹಿತ್ಯ ಆರಂಭದಲ್ಲಿ ಸಮಾಜದ ನ್ಯೂನತೆಗಳತ್ತ ಗಮನ ಹರಿಸದಿದ್ದರೂ, ಸಾಮಾಜಿಕ ಚಳವಳಿಗಳು ಸಮಾಜದ ಪಿಡುಗುಗಳ ಮೇಲೆ ಸಮರಸಾರಿದಾಗ ಆ ಚಳವಳಿಗಳ ತತ್ವಗಳು ಅಥವ ಉಪದೇಶಗಳು ಸಾಹಿತ್ಯದಲ್ಲಿ ಪ್ರತಿಧ್ವನಿತವಾದವು. ಹೀಗೆ ಸಾಮಾಜಿಕ ಪರಿವರ್ತನೆಯ ವಾಹಕವಾಗಿ ಕನ್ನಡ ಸಾಹಿತ್ಯ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸುವಲ್ಲಿ ಹಿಂಜರಿಯಲಿಲ್ಲ.

ಸೀತಾರಾಮ ಜಾಗೀರ್‌ದಾರ್

ಹಲ್ಮಿಡಿಯ ಶಾಸನ—ಪುನರಾಲೋಕನ

ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಹಲ್ಮಿಡಿಶಾಸನಕ್ಕೆ ಈಗ ಒಂದು ವಿಶಿಷ್ಟಸ್ಥಾನವಿದೆ. ಏಕೆಂದರೆ ಅದು ಸದ್ಯ ಉಪಲಬ್ಧವಾಗಿರುವ ಮೊದಲ ಕನ್ನಡಶಾಸನ. ಡಾ. ಎಂ.ಎಚ್. ಕೃಷ್ಣರು MAR 1936ರಲ್ಲಿ ಪ್ರಕಟಿಸಿದಂದಿನಿಂದ ಇಂದಿನವರೆಗೆ ಅನೇಕ ವಿದ್ವಾಂಸರು ಅದನ್ನು ಕುರಿತೊ ಇಲ್ಲವೆ ಅದರಲ್ಲಿ ಬಂದಿರುವ ಶಬ್ದಗಳ ಕುರಿತೊ ಚರ್ಚೆಗಳನ್ನು ವಿಶ್ಲೇಷಣೆಗಳನ್ನು ಆಗಾಗ ಮಾಡಿದ್ದಾರೆ. ಲಿಪಿ ಶಾಸ್ತ್ರದ ದೃಷ್ಟಿಯಿಂದ ಅದನ್ನ ಪುನರಾಲೋಕಿಸಿದವರು ಎಂ.ಎಚ್. ಕೃಷ್ಣರನ್ನು ಬಿಟ್ಟರೆ ಇನ್ನಾರು ಇಲ್ಲ. ಶ್ರೀಯುತರು ಪ್ರಬುದ್ಧ ಕರ್ಣಾಟಕ ಸಂಪುಟ-೨೦ ಸಂಚಿಕೆ-೩ರಲ್ಲಿ ಪಂಕ್ತಿ ೧೫ರಲ್ಲಿ ಬಂದಿರುವ 'ಆದಾನಟಿವೊನ್ಗೆ' ಎಂಬುದನ್ನು ಬಿಟ್ಟರೆ MAR ಪಾಠದಿಂದ ಹೆಚ್ಚಿಗೆ ಏನೂ ವ್ಯತ್ಯಾಸಗಳನ್ನು ಮಾಡಿಲ್ಲ. ಶಾಸನದ ಬಗ್ಗೆ ವಿಶ್ಲೇಷಣೆ ಮಾಡುವದಕ್ಕಿಂತ ಮುಂಚೆ ಅದರ ಶುದ್ಧಪಾಠವನ್ನು ಕೊಡುವೆ (ಶಾಸನದ ಪಡಿಯಚ್ಚಿನ ಚಿತ್ರವನ್ನು ಅವಲೋಕಿಸಿ) :

1. ಜಯತಿಪರಿಷ್ವಙ್ಗ ಶಾರ್ಙ್ಗ ಮ್ಯಾ[1]ನತಿರಚ್ಯುತಃ
   ದಾನವಾಕ್ಷ್ಣೋಯುಗಾನ್ತಾಗ್ನಿಃ ಶಿಷ್ಟಾನಾನ್ತು ಸುದರ್ಶನಃ
2. ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ [ನಾ] ಅರಿ ಕ
3. ಕುಸ್ಥಭಟ್ಟೋರನಾಳೆ ನರಿದಾವಿ [ಳೆ] ನಾಡುಳ್ ಮೃಗೇಶನಾ
4. ಗೇನ್ದ್ರಾಭೀಳಭ್ಭಟಹರಪ್ಪೋರ್ ಶ್ರೀಮೃಗೇಶನಾಗಾಹ್ವಯ
5. ರಿರ್ವ್ವರಾ ಬಟರಿಕುಲಾಮಲವ್ಯೋಮತಾಶಾಧಿನಾಥನ್ನಳಪ

---

1. ಡಾ. ಎಸ್. ಶ್ರೀಕಂಠಶಾಸ್ತ್ರಿಗಳು 'ಶಾರ್ಙ್ಗಮಾನತಿ' ಎಂದು ಓದಿದ್ದಾರೆ : Sources of Karnataka History, p 20.' 'ಮಾ' ಅಕ್ಷರಕ್ಕೆ 'ಯ' ಒತ್ತು ಇರುವದರಿಂದ 'ಮಾನತಿ' ಎಂಬುದು ಸರಿಯಲ್ಲ. ಹೀಗೆಯೆ ಡಾ॥ ಎಂ. ಎಚ್. ಕೃಷ್ಣರ 'ವ್ಯಾನತಿ' 'ಅರಸನ್ಗೆ' ಮತ್ತು ಆಟಿವೊನ್ಗೆ'' ಕೂಡ ಸರಿಯಲ್ಲ.

6. ಗಣಪಶುಪತಿಯಾ[2]ದಕ್ಷಿಣಪಥಬಹುಶತಹವನಾ[3]
7. ಹವದು[ಳ್]ಪಶುಪ್ರದಾನ ಶೌರ್ಯ್ಯೋದ್ಯಮಭರಿತೋ [ನ್ವಾನ] ಪ
8. ಶುಪತಿಯೆನ್ದು ಪೊಗಟಿ[3]ಪ್ಪಟ್ಟ[4]ಣ ಪಶುಪತಿ
9. ನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲ[5]ಯ
10. ಸುತನ್ಗೆ ಸೇನ್ದ್ರಕ ಬಣೋಭಯದೇಶದಾ ವೀರಪುರುಷ ಸಮಕ್ಷ
11. ದೆ ಕೇಕಯಪಲ್ಲವರಂ ಕಾದೆಱಿದು ಪೆತ್ತಜಯನಾ ವಿಜ
12. ಅರಸಙ್ಗೆ ಬಾಳ್ಗಟ್ಟು ಪಲ್ಮಿಡಿಉಂ ಮೂಟಿವಳ್ಳಿಉಂ ಕೊ
13. ಟ್ಟೋರ್ ಬಟಾರಿಕುಲದೋನಾಳ್ವ[6]ಕದಮ್ಬನ್ಕಳ್ದೋನ್ ಮಹಾಪಾತಕನ್

---

2. 'ಮಾ' ಎಂದು ಎಂ. ಎಚ್. ಕೃಷ್ಣ ಓದಿದ್ದಾರೆ MAR 1936. ಶ್ರೀಕಂಠಶಾಸ್ತ್ರಿಗಳು 'ಯಾ' ಎಂದು ಓದಿದ್ದಾರೆ. ಶಾಸ್ತ್ರಿಗಳ ಓದುವಿಕೆ ಲಿಪಿಗನುಗುಣವಾಗಿದೆ, 'ಮಾ' ಎಂದರೆ ಅರ್ಥವೇ ಆಗುವುದಿಲ್ಲ.
3. 'ಶತವಹನ' ಎಂಬುದು 'ಶತಹವನ' ಆಗಿದೆ. ಅಕ್ಷರಬರೆಯುವಲ್ಲಿ ವರ್ಣಪಲ್ಲಟಗೊಂಡಿದೆ. 'ಬಹುಶತಹವನ' ಎಂದಾಗ ಮುಂದಿನ 'ಆಹವದುಳ್' ಎಂಬುದಕ್ಕೆ 'ಯಾರಯುದ್ಧ' ಎಂಬುದಕ್ಕೆ ಉತ್ತರವೆ ಸಿಕ್ಕುವುದಿಲ್ಲ. ಅಕ್ಷರಸ್ಥಾನವ್ಯತ್ಯಯ ಉಂಟಾಗಿದೆ ಇಲ್ಲಿ (Metathesis); ಬರೆಯುವಾಗ ಇದು ಸಾಧಾರಣವಾಗಿ ನಡೆಯುತ್ತದೆ—ಕನ್ನಡ ಗ್ರಂಥ ಸಂಪಾದನೆ (ಪ್ರೊ. ಡಿ.ಎಲ್.ಎನ್) ಪು. 121 (1970)
4. 'ಪೊಗಟಿ[3]ಪ್ಪೊಟ್ಟಣ' ಎಂದು ಡಾ॥ ಎಂ. ಎಚ್. ಕೃಷ್ಣ ಓದಿದ್ದಾರೆ. ಅದನ್ನೆ ಮುಂದಿನ ಎಲ್ಲರೂ ಸ್ವೀಕರಿಸಿದ್ದಾರೆ. ಆದರೆ 'ಪೊಟ್ಟಣ' ಎಂಬಲ್ಲಿ 'ಪೊ' ಈ ಅಕ್ಷರವನ್ನು ಹಿಂದಿನ 'ಪ್ಪೊ' ಅಕ್ಷರದ ಜೊತೆಗೆ ಹೋಲಿಸಿದರೆ ಹೊಂದುವುದಿಲ್ಲ. ತಲೆಕಟ್ಟು ಎರಡೂ ಅಕ್ಷರಗಳಲ್ಲಿ ಒಂದೇ ಆಗಿಲ್ಲ. ಇಲ್ಲಿರುವುದು 'ಪ' ಅಕ್ಷರ. 'ಪಟ್ಟಣ' ಅಥವಾ 'ಪತ್ತನ' ಇದು ಮಹಾಭಾರತದಷ್ಟು ಪ್ರಾಚೀನ. ಈ ಶಬ್ದ ಇಲ್ಲಿಯೂ ಶುದ್ಧರೂಪದಲ್ಲೇ ಇದೆ; ಕಾರಣ 'ಪೊಟ್ಟಣ' ಎಂಬುದು ಇತ್ತೀಚೆಗೆ ಓದುವವರಿಂದ ಹುಟ್ಟಿಕೊಂಡ ಅಬದ್ಧರೂಪ.
5. 'ಲ' ಅಕ್ಷರವನ್ನು ಪಂಕ್ತಿಯ ಕೆಳಗೆ ಬರೆದಿದೆ. ಎಂದರೆ ಮೊದಲು 'ಪ್ರೇಮಾಯ' ಎಂದಷ್ಟೆ ಕಂಡರಿಸಿದೆ. ಅನಂತರ 'ಲ' ಅಕ್ಷರವನ್ನು ಸೇರಿಸಿದ್ದಾರೆ.
6. 'ಬಟಾರಿ ಕುಲದೋನಾಳ್ವಕದಮ್ಬನ್' ಎಂಬುದನ್ನು. 'ಬಟಾರಿಕುಲದೊನಳಕದಮ್ಬನ್' ಎಂದು ಡಾ॥ ಎಂ.ಎಚ್. ಕೃಷ್ಣ ಓದಿದ್ದಾರೆ. ಅಳಕದಮ್ಬನ್ ಎಂಬ ಒಬ್ಬ ವ್ಯಕ್ತಿಯ ಅಸ್ತಿತ್ವ ಇಲ್ಲಿ ಏಕೆ ಬಂದಿತೊ? ದತ್ತಿ ಪಡೆದವರೂ ಕೊಟ್ಟವರೂ ಮೂವರೇ ವ್ಯಕ್ತಿಗಳು : ಮೃಗೇಶ, ನಾಗ (ಇರ್ವ್ವರುಂ ಸಬ್ಬಙ್ಗದರ್) ಮತ್ತು ವಿಜಾರಸ. ಇವರ ಅನಂತರ ಇವರು ಪಡೆದ ಕೊಟ್ಟ ಮಾನ್ಯಗಳನ್ನು ಮುಂದಿನ ಆಳುವ ರಾಜರಾದ ಬಟರಿಕುಲದವರಾಗಲಿ ಅಥವಾ ಕದಂಬ ಕುಲದವರಾಗಲಿ ಕಳೆಯಬಾರದೆಂಬುದು ಶಾಸನಕಾರರ ಆಶಯ. ದಿಢೀರನೆ ಅವತರಿಸಿದ ಈ 'ಅಳಕದಂಬನ್' ಎಂಬ ವ್ಯಕ್ತಿ ವಾಸ್ತವದಲ್ಲಿ ಇದ್ದಿಲ್ಲ. ಕೊಟ್ಟದತ್ತಿಯನ್ನು 'ಅಳಕದಂಬನ್' ಮಾತ್ರ ಏಕೆ ಕಳೆದ? ಶಾಸನಗಳಲ್ಲಿ ಬರುವ ಶಾಪಾಶಯ ವಚನಗಳನ್ನು ಪರಿಶೀಲಿಸಿದರೆ 'ಧರ್ಮ' ಎಂಬುದು ರಾಜರಲ್ಲಿ ಹಳಬರಿಗೂ ಹೊಸಬರಿಗೂ ಮಧ್ಯ ಸಂಬಂಧ ಕಲ್ಪಿಸುವ ಸೇತು "ಸಾಮಾನ್ಯೋ ಯಂ ಧರ್ಮ ಸೇತುಃನೃಪಾಣಾಂ। ಕಾಲೇಕಾಲೇಪಾಲನೀಯೋ" ಎಂಬುದನ್ನು ಇನಿತು ಗಮನಕ್ಕೆ ತಂದುಕೊಂಡರೆ ಸಾಕು; 'ಅಳಕದಮ್ಬನ್' ಅಳಿಸಿಹೋಗುತ್ತದೆ.

14. ಇರ್ವ್ವರುಂ ಸಟ್ಬಜ್ಗದರ್[7] ವಿಚಾರಸರುಂ ಪಲ್ಮಿಡಿಗೆ ಕುಱು

15. ವ್ಬಿಡಿವಿಟ್ಟಾರ್ ಅದಾನಳಿವೊಜ್[3]ಗೆ ಮಹಾಪಾತಕವ್ ಸ್ವಸ್ತಿ

ಇದೇ ಕಲ್ಲಿನ ಎಡಪಕ್ಕದಲ್ಲಿ ಬರೆದಿರುವುದು

16. ಭಟ್ಟರ್ಗ್ಗೀಗಟ್[3]ದ್ದಿ ಒಡ್ಡಲಿಆ ಪತ್ತೊನ್ದಿ ವಿಟ್ಟಾರಕರ

ಈ ಹದಿನಾರು ಪಂಕ್ತಿಗಳೂ ಒಂದೂ ಘಟಕವಾಗಿವೆ (unit)ಇಲ್ಲಿ. ಮೂವರು ವ್ಯಕ್ತಿಗಳು (ವೃಗೇಶ, ನಾಗ ಹಾಗೂ ವಿಜ ಅರಸ) ತಾವು ಮಾಡಿದ ಅಸಮ ಸಾಹಸದ ಕೆಲಸಕ್ಕೆ ಬಟಂಕುಲದ ಅಳಪಗಣಪಶುಪತಿ ಎಂಬ (ಮಾಂಡಲಿಕ) ದೊರೆಯಿಂದ ಮಾನ್ಯಗಳನ್ನು ಪಡೆದಿದ್ದಾರೆ. ವೃಗೇಶ ಹಾಗೂ ನಾಗ ಇವರು ತಮ್ಮ ಒಡೆಯನುಹಲಶತವಹನ (ಬಹುಶತವಹನ) ರಾಜರೊಂದಿಗೆ ದಕ್ಷಿಣಾಪಥದಲ್ಲಿ ಮಾಡಿದ ಯುದ್ಧದಲ್ಲಿ ಶೌರ್ಯ್ಯವನ್ನು ಮೆರೆದರು; ಹಾಗೆಯೆ ವಿಜ ಅರಸನು ಅದೇ ದೊರೆಗೆ ಕೇಕಯಪಲ್ಲವರೊಂದಿಗೆ ಮಾಡಿದ ಯುದ್ಧದಲ್ಲಿ ಜಯಗಳಿಸಿ ಕೊಟ್ಟನು. ವೃಗೇಶ ಹಾಗೂ ನಾಗ ನರಿದಾವಿಳೆನಾಡಿನ 'ಕುಱುವ್ಬಿಡಿ' ಪಡೆದಿದ್ದರು. ವಿಜ ಅರಸನು ಬಾಳ್ಗಟ್ಚಿನ ಮಾನ್ಯವಾಗಿ ಪಲ್ಮಿಡಿ ಹಾಗೂ ಮೂೞಿವಳ್ಳಿ ಗ್ರಾಮಗಳನ್ನು ದತ್ತಿಪಡೆದಿದ್ದನು. ಈ ಮೂವರು ಅಧಿಕಾರಿಗಳೂ ಸೇರಿ ಪಲ್ಮಿಡಿಗೆ 'ಕುಱುವ್ಬಿಡಿ' ಬಿಟ್ಟರು. 'ಕುಱುವ್ಬಿಡಿ' ಎಂದರೆ ಏನು ಎಂಬ ಪ್ರಶ್ನೆ ಏಳುವುದು ಸಹಜ.

ಕುಱುಮ್ಬಿಡಿ>ಕೂವ್ಬಿಡಿ>ಕುಱುದೆರೆ—ಈ ಶಬ್ದದ ಅರ್ಥವು ನಮಗೆ ಗಂಗರ ಮಾಂಡಲಿಕರಾದ ಹೈಹಯ ವಂಶದ ಮಣಲೇರನ ವಂಶದವರ ಶಾಸನಗಳನ್ನು ಅಧ್ಯಯನ ಮಾಡಿದರೆ ಇನಿತು ಸ್ಪಷ್ಟಚಿತ್ರವು ಸಿಕ್ಕುತ್ತದೆ. ಏಕೆಂದರೆ ಇವರು ಗಂಗರ ಅಧೀನದಲ್ಲಿದ್ದು ಈ ಆದಾಯವನ್ನು ವಂಶಪಾರಂಪರ್ಯವಾಗಿ ಅನುಭೋಗಿಸುತ್ತಿದ್ದರು. ತಲಕಾಡಿನ ಒಂದು ಶಾಸನದಿಂದ ಈ ರಾಜರು ಕಿಟಲೆನಾಡ 'ಕೂಮ್ಬಿಡಿ' ಎಂಬುದನ್ನು[8] ಪಡೆಯುತ್ತಿದ್ದರೆ ಅಥವಾ ಆಳುತ್ತಿದ್ದರೆ. ಅದೇ ನಾಡಿನ ತಿಪ್ಪೂರು ಗ್ರಾಮದ ಒಂದು ಶಾಸನದಲ್ಲಿ ಇವರು ಕನಕಗಿರಿಯ ಬಸದಿಗೆ 'ಕುಱುದೆಜ3'[9] ಬಿಟ್ಟ ಉಲ್ಲೇಖ ಬರುತ್ತದೆ. ಮಾಂಡಲಿಕರು ಸಾಮಾನ್ಯವಾಗಿ ತಾವು ಆದಾಯವಾಗಿ ಅನುಭೋಗಿಸುತ್ತಿದ್ದುದನ್ನು ದೇವಾಲಯಗಳಿಗೆ, ಬಸದಿಗಳಿಗೆ, ಬಿಟ್ಟುಕೊಡುತ್ತಿದ್ದರು. ಅರ್ಥಾತ್ ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಬರುವುದನ್ನು ಬಿಟ್ಟುಕೊಡುತ್ತಿದ್ದರು; ಎಂದರೆ ತಮ್ಮ ಆದಾಯದ ಮೂಲಗಳನ್ನು ದಾನದತ್ತಿಯಾಗಿ ನೀಡುತ್ತಿದ್ದರೆ ವಿನಃ ಮತ್ತೊಂದನ್ನಲ್ಲ. ತಮಗೆ ಸಂಬಂಧಪಡದ ಸಂಪನ್ಮೂಲಗಳನ್ನು ಕೊಡುವುದಕ್ಕೆ

7. 'ರ್' ಅಕ್ಷರವನ್ನೂ ಪಂಕ್ತಿಯ ಕೆಳಗೆ ಅನಂತರದಲ್ಲಿ ಕೆತ್ತಿದೆ.

8. ಎಪಿ. ಕ. ಸಂಪುಟ–5 (1976) ತಿನ. 145, ಪು. 554

9. ಎಪಿ. ಕ. ಸಂಪುಟ–7 (1979) ಮದ್ದೂರು–100, ಪು. 312

ಅವರಿಗೆ ಅಧಿಕಾರವೂ ಇದ್ದಿಲ್ಲ. ಇದೇ ಮಣಲೇರನ ವಂಶದಲ್ಲಿ ಹುಟ್ಟಿದ ಜಯಕೇಶಿ ಎಂಬ ದೊರೆ ತನ್ನ ಲಕ್ಷ್ಮೇಶ್ವರ ಶಾಸನದಲ್ಲಿ ಅಲ್ಲಿನ ಪೆರ್ಮಾಡಿಯ ಬಸದಿಗೆ ಕಿಱುದೆಱೆಗಳನ್ನು ಬಿಟ್ಟಿರುವುದಾಗಿ ತಿಳಿಸಿದ್ದಾನೆ. ಈ ಶಾಸನದಲ್ಲಿ 'ಕಿಱುದೆಱೆಗಳು' ಯಾವುವು ಎಂಬುದನ್ನು ಸ್ಪಷ್ಟವಾಗಿ ವಿವರಿಸಿದೆ.[10] ಭಾರಿ ಕರಗಳು (heavy taxes) ಮತ್ತು ಕಿರುದೆರೆಗಳು (petty taxes) ಆಗಿನ ಕಾಲದಲ್ಲಿ ಜನತೆ ಸರ್ಕಾರಕ್ಕೆ ಕೊಡಬೇಕಾತ್ತು. ಆ ಶಾಸನದ ಪ್ರಕಾರ ಕಿರುದೆರೆಗಳು ಹೀಗಿವೆ :-

ಅಲ್ಲಿಯ ಮನ್ನೆಯ ನಿಬನ್ಧದ ಕಿಱುದೆಱೆಗಳಾವುವೆನ್ದಡೆ—

1. ಮನೆವಣಂ = ಮನೆಗಳ ಮೇಲೆಕೊಡಬೇಕಾಗಿದ್ದ ತೆರಿಗೆ
2. ಪಿರಿಯುರವಣಂ = ದೊಡ್ಡದೊಡ್ಡ ಜೂಜುಗಳ ಮೇಲಿನ ತರಿಗೆ
3. ಧನಬಳಂ = ಧನಹಾಗೂ ಬಡ್ಡಿ ವ್ಯವಹಾರದ ಮೇಲಿನ ತೆರಿಗೆ
4. ಕಾಳಗೊಲ್ಚು = ಅಳತೆಗಳ ಮೇಲಿನ ತೆರಿಗೆ
5. ಮೇಂಟೆಗಣ್ತ್ಯಗ = ರಾಶಿಯ ಮೇಲೆ ಕೊಡಬೇಕಾದ ತೆರಿಗೆ
6. ಅಂಗಡಿಯ ತಿಂಗಳಿನ ಬೇಳೆ = ಸಣ್ಣಸಣ್ಣ ಅಂಗಡಿಗಳವರು ಕೊಡಬೇಕಾಗಿದ್ದ ತಿಂಗಳು ತಿಂಗಳದ ತೆರಿಗೆ.
7. ಪೊಳಲಮನ್ನೆಯದಾನಿಕೆ = ಪಟ್ಟಣಗಳನ್ನು ಉಂಬಳಿಯಾಗಿ ಪಡೆದವರು ಕೊಡಬೇಕಾಗಿದ್ದ ತೆರಿಗೆ
8. ದಾಯದ್ರವ್ಯ = ಜ್ಞಾತಿಗಳು ಆಸ್ತಿಯನ್ನು ತಮ್ಮ ಹೆಸರುಗಳಿಗೆ ವರ್ಗಾಯಿಸಕೊಂಡಾಗ ಕೊಡಬೇಕಾಗಿದ್ದ ತೆರಿಗೆ.

—'ಕಿಱು' ಮತ್ತು 'ಕುಱು' ಇವು 'ಸಣ್ಣ' ಎಂಬ ಅರ್ಥದ ಒಂದೇಶಬ್ದದ ಎರಡು ರೂಪಗಳು; ನೋಡಿ :

ಕಡಿದು ನಿಡಿದೆಂಬ ನಡುವೆಂ
ಬ ಡಕಾರಂ ಟತ್ವಮಾಯ್ತು ಕಿಱಿದಕ್ಕೆ ಕುಱಿಂ
ಬೆಡೆಯಲ್ಲಿ ತಕಾರಂ ಸ್ವರ
ಮಡಸೆ ಪರಕ್ಕುತ್ವಮುಸ್ವರಂ ನಿಲೆಪರದೊಳ್॥[11]

ಕಿಱುದೆಱೆ | ಕುಱುದೆಱೆ | ಕುಱುವ್ಬಿಡಿ (ಕುಱುಂ + ಪಿಡಿ) > ಕೂವ್ಬಿಡಿ–ಇವೆಲ್ಲವೂ ಸಣ್ಣತೆರಿಗೆಗಳನ್ನು ಸೂಚಿಸುತ್ತವೆ. ಅಂತೆಯೆ "ಕುಱುವ್ಬಿಡಿವಿಟ್ಟಾರ್" ಎಂಬಲ್ಲಿ ಈ ಮೂವರು ಅಧಿಕಾರಿಗಳು ಆ ಕಿರುಕುಳ ಅಥವಾ ಸಣ್ಣ ತೆರಿಗೆಗಳನ್ನು ಮನ್ನಾ ಮಾಡಿದರು ಎಂದರ್ಥ. ಇನ್ನು 'ಪತ್ತೊನ್ದಿ' ಅಥವಾ 'ದಶಬಂಧ' ಎಂಬುದು ಕೂಡ ಪ್ರಭುತ್ವದ ತೆರಿಗೆ ; $\frac{1}{10}$ ಎಂದು ಅದರರ್ಥ (ಬೆಳೆದಬೆಳೆಯ $\frac{1}{10}$ ಭಾಗ).

---

10. S.I.I. Vol. XX, No. 48, p. 55
11. ಶಬ್ದಮಣಿದರ್ಪಣಂ (ಸಂ. ಪ್ರೊ॥ ಡಿ.ಎಲ್.ಎನ್.) ಸೂತ್ರ–೧೯೨ ಪು. ೧೯೮ (೧೯೬೮)



ಶಾಸನದ ಚಿತ್ರ

ಶಾತವಾಹನರು ದಕ್ಷಿಣಾಪಥಪತಿಗಳಾಗಿದ್ದರು ಎಂಬುದನ್ನು ಗಮನಕ್ಕೆ ತಂದು ಕೊಂಡರೆ[12] ಆಳುಪಗಣಪಶುಪತಿಯ 'ದಕ್ಷಿಣಾಪಥ ಬಹುಶತವಹನ' ಯುದ್ಧದಲ್ಲಿ ಎಂಬ ಮಾತೂ ಚಾರಿತ್ರಿಕ ವಿಮರ್ಶೆಯಲ್ಲಿ ಬಹಳ ಮಹತ್ವದ್ದಾಗಿದೆ. ಏಕೆಂದರೆ ಆಳುಪ ಗಣಪಶುಪತಿ ದಕ್ಷಿಣಾ ಪಥದಲ್ಲಿ ಯಾರೊಂದಿಗೆ ಯುದ್ಧಮಾಡಿದನೆಂಬುದು ಇದುವರೆಗೆ ಸ್ಪಷ್ಟವಾಗಿದ್ದಿಲ್ಲ. 'ಬಹುಶತಹವನ' ಎಂದರೆ ಎಷ್ಟುನೂರುಯಜ್ಞಗಳು? ಈ ಒಂದು ನುಡಿಗಟ್ಟೂ ಇನಿತು ವಿಚಾರವಿಮರ್ಶೆಗೆ ಒಳಗಾಗಬೇಕು. ಇಂದ್ರನಿಗೇ 'ಶತಮುಖ' ಎಂಬ ಬಿರುದಿದೆ ; ಅವನೂ ಬಹು ಶತಹವನನಲ್ಲ ! ಎಂದಮೇಲೆ ಈ ಒಂದು ವಿಷಯವನ್ನು ನಿಕಷಕ್ಕೆ ಒಡ್ಡಿದರೆ 'ಬಹಳ ನೂರಾರು ಯಜ್ಞಗಳು ಎಂಬ ಯುದ್ಧದಲ್ಲಿ' ಎಂಬತಹ ವಿವರಣೆ ಸಮರ್ಪಕವಾಗಿಲ್ಲವೆಂದು ನಿಶ್ಚಿತವಾಗುತ್ತದೆ. ಬಹಳ ಮಂದಿ ಶಾತವಹನ ರಾಜರು ಎಂದು ಸ್ವೀಕರಿಸಿದರೆ ಹೆಚ್ಚು ಸಮರ್ಪಕ, ಸತಾರ್ಕಿಕ, ಉತ್ತರ ದೊರೆಯುತ್ತದೆ. ಒಂದೊಂದು ರಾಜಮನೆತನಗಳಲ್ಲೂ ಹಲವು ಶಾಖೆಗಳಿದ್ದುವು. ಐಹೊಳೆಯಲ್ಲಿರುವ ಇಮ್ಮಡಿ ಪುಲಿಕೇಶಿಯಕಾಲದ ಶಾಶನದಲ್ಲಿಯ 'ಕದಂಬಕ', ಹಲವು ಚಾಳುಕ್ಯ ಮನೆತನಗಳು, ರಾಷ್ಟ್ರಕೂಟರ ಹಲವು ಶಾಖೆಗಳು ಇತ್ಯಾದಿಗಳನ್ನು ಕಿಂಚಿದ್ ಜ್ಞಾಪಿಸಿಕೊಂಡರೆ ಸಾಕು. ಇಂದಿನ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ಇತ್ಯಾದಿಗಳನ್ನೊಳಗೊಂಡ ದಕ್ಷಿಣಾಪಥಕ್ಕೆ ಒಡೆಯರಾದ ಸಾತ ವಾಹನರು ಹಲವು ಶಾಖೆಗಳನ್ನು ಹೊಂದಿದ್ದರೆಂಬುದು ಸುವದಿತ ಸಂಗತಿ.[12] ಹಲ್ಮಿಡಿ ಶಾಸನ ಪ್ರಾಸಂಗಿಕವಾಗಿ ಎರಡು ಯುದ್ಧಗಳನ್ನು ದಾಖಲಿಸಿದೆ :

(1) ಒಂದನೆಯದು ಸಾತವಾಹನರದು ಮತ್ತೊಂದು (2) ಕೇಕಯಪಲ್ಲವರದು.*

12. Successors of Sātavāhanas (Dr. D.C. Sircar) p.218

*ಈ ಶಾಸನವನ್ನು ಪುನರಾಲೋಕಿಸುವಲ್ಲಿ ನೆರವುನೀಡಿದ ಡಾ. ಕೆ. ವಿ. ರಮೇಶ, ಶ್ರೀ ಎಂ. ಎಸ್. ಕಟ್ಟಿ, ಡಾ. ಎ. ವಿ. ನರಸಿಂಹಮೂರ್ತಿ, ಡಾ. ಬಿ. ಕೆ. ಗುರುರಾಜ ರಾವ್ ಹಾಗೂ ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಇವರುಗಳಿಗೆ ಋಣಿಯಾಗಿದ್ದೇನೆ.

ಹಕ್ಕುಗಳನ್ನು ಪ್ರತಿಪಾದಿಸುವವರು ಹೊಣೆಗಾರಿಕೆಯಲ್ಲೂ ಪಾಲುಗಾರರಾಗಿರಬೇಕಾಗುತ್ತದೆ. ಕರ್ತವ್ಯ ಹಾಗೂ ಹೊಣೆಗಾರಿಕೆಗಳನ್ನು ಒಪ್ಪಿಕೊಂಡರೆ, ಖಂಡಿತವಾಗಿಯೂ, ಹಕ್ಕುಗಳು ತನ್ನಿಂದ ತಾನೇ ಉದಿಸಿ ಬರುತ್ತವೆ.

ವ್ಯಕ್ತಿ ಹಾಗೂ ರಾಷ್ಟ್ರಗಳ ಹಕ್ಕುಗಳನ್ನು ಕುರಿತು ನಾವು ಮಾತನಾಡುತ್ತೇವೆ. ಆಗ ಎಲ್ಲ ಹಕ್ಕುಗಳೂ ತಮ್ಮಲ್ಲಿ ಒಂದೊಂದು ಹೊಣೆಗಾರಿಕೆಯನ್ನು ಒಳಗೊಂಡಿರುತ್ತವೆ, ಎಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು. ಹಕ್ಕುಗಳಿಗೆ ಮಾತ್ರ ಅತಿಯಾದ ಮಹತ್ವವನ್ನು ಕೊಟ್ಟು ನಾವು ಹೊಣೆಗಾರಿಕೆಯನ್ನು ಅಲಕ್ಷಿಸಿ ಬಿಡುತ್ತಿದ್ದೇವೆ. ಹೊಣೆಗಾರಿಕೆಗಳನ್ನು ವಹಿಸಿಕೊಂಡಲ್ಲಿ ಹಕ್ಕುಗಳು ಸಹಜವಾಗಿಯೇ ಹರಿದು ಬರುತ್ತವೆ.

—ನೆಹರು

ಜಾಣ್ಮೆಯ ಬೆಲೆ ಮಾಣಿಕ್ಯಕ್ಕಿಂತ ಮಿಗಿಲು.

—ಬೈಬಲ್

ನಾವು ಪ್ರೀತಿಸಿದಾಗ ಈ ಪ್ರಪಂಚದಲ್ಲಿ ಬದುಕಿರುತ್ತೇವೆ.

—ರವೀಂದ್ರನಾಥ ಟಾಗೂರ್

ಡಾ|| ಆರ್. ಇಂದಿರಾ ಮತ್ತು
ಎಂ. ಬಿ. ಸೋಮಣ್ಣ

ಕಡ್ಡಾಯ ಪ್ರಾಥಮಿಕ ಶಿಕ್ಷಣದ ಗುರಿಗಳು ಮತ್ತು ಸಾಧನೆಗಳು—ಒಂದು ವಿವೇಚನೆ

ಭಾರತದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಮಾತು ನಿನ್ನೆ ಮೊನ್ನೆಯದಲ್ಲ. ವೈದಿಕ ಯುಗದಲ್ಲಿ ಕೆಲವು ವರ್ಗಗಳಿಗೆ ಶಿಕ್ಷಣವನ್ನು ಉದ್ದೇಶಪೂರ್ವಕವಾಗಿಯೇ ಅಲಕ್ಷಿಸಲಾಗಿತ್ತು. ಬೌದ್ಧರ ಕಾಲದಲ್ಲಿ ವಿದ್ಯಾಭ್ಯಾಸವನ್ನು ಎಲ್ಲರೂ ಪಡೆಯಬಹುದಾಗಿತ್ತಾದರೂ ಅದು ಸಾಮಾನ್ಯ ಜನತೆಯನ್ನು ಮುಟ್ಟಲಿಲ್ಲ. ಮುಂದೆ ಮುಸ್ಲಿಂರ ಕಾಲದಲ್ಲಿ ಶಿಕ್ಷಣವು ಉಚಿತವಾಗಿತ್ತಾದರೂ ಅದು ಕಡ್ಡಾಯವಾಗಿರಲಿಲ್ಲ. ಬ್ರಿಟೀಷರ ಕಾಲದಲ್ಲೇ ಕಡ್ಡಾಯ ಶಿಕ್ಷಣಕ್ಕೆ ಚೇತನ ಬಂದಿತೆನ್ನಬಹುದು.

ಈಸ್ಟ್ ಇಂಡಿಯಾ ಕಂಪನಿಯು 1813ರಲ್ಲಿ ಭಾರತದಲ್ಲಿ ಶಿಕ್ಷಣಕ್ಕಾಗಿ ಪ್ರತಿ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಲು ನಿರ್ಧರಿಸಿತು. 1838ರಲ್ಲಿ ವಿಲಿಯಂ-ಆಡಮ್ಸ್‌ನು ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಹಲವಾರು ಸಲಹೆಗಳನ್ನು ನೀಡಿದನು. ಇದಾದನಂತರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದರ ಮೇಲೊಂದರಂತೆ ಹಲವಾರು ಆಯೋಗಗಳು ನೇಮಿಸಲ್ಪಟ್ಟವು. 1854ರ ವುಡ್ಸ್ ಆಯೋಗ, 1882 ಹಂಟರ್ ಆಯೋಗ ಮತ್ತು 1904ರಲ್ಲಿ ಲಾರ್ಡ್‌ಕರ್ಜನ್ ನೀಡಿದ ಸಲಹೆಗಳು ಪ್ರಾಥಮಿಕ ಶಿಕ್ಷಣದ ವಿಸ್ತರಣೆಗೆ ವಿಶೇಷವಾಗಿ ಕಾರಣವಾದಂಥವು. 1904ರಲ್ಲಿ ಲಾರ್ಡ್‌ಕರ್ಜನ್‌ನು ನೀಡಿದ ಸಲಹೆಗಳು ಜಾರಿಗೆ ಬರುವುದಕ್ಕೆ ಮುಂಚೆಯೇ ಭಾರತದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ಮೊಟ್ಟಮೊದಲ ಯಶಸ್ವಿ ಪ್ರಯೋಗ ನಡೆಸಿದ ಕೀರ್ತಿ ಬರೋಡಾ ಸಂಸ್ಥಾನದ ಮಹಾರಾಜರಾಗಿದ್ದ ಸಯ್ಯಾಜಿರಾವ್‌ಗಾಯಕ್‌ವಾಡ್‌ರಿಗೆ ಸಲ್ಲುತ್ತದೆ. ಅವರು 1892ರಲ್ಲಿ ಮಹಾರಾಷ್ಟ್ರದ ಒಂದು ತಾಲ್ಲೂಕಿನಲ್ಲಿ ಈ ಕಡ್ಡಾಯ ಶಿಕ್ಷಣದ ಪ್ರಯೋಗ ನಡೆಸಿ ನಂತರ 1906ರಲ್ಲಿ ಅದನ್ನು ತಮ್ಮ ರಾಜ್ಯಾದ್ಯಂತ ಜಾರಿಗೆ ತಂದರು.

ಗೋಪಾಲಕೃಷ್ಣ ಗೋಖಲೆಯವರು 1911ರಲ್ಲಿ ಇಂಪೀರಿಯಲ್ ಶಾಸನ ಸಭೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದು ಮಸೂದೆಯನ್ನು ಮಂಡಿಸಿದರು. ಆದರೆ ಆ ಮಸೂದೆ 38-13 ಮತಗಳಿಂದ ತಿರಸ್ಕರಿಸಲ್ಪಟ್ಟಿತು. ತಮ್ಮ ವಾದಗಳನ್ನು ಮುಗಿಸುತ್ತಾ ಈ ಮುಂದಿನ ಮಾತುಗಳನ್ನು ಗೋಖಲೆಯವರು ನುಡಿದರು: "ಮೈಲಾರ್ಡ್ ಹಗಲು ಮುಗಿಯುವುದರೊಳಗಾಗಿ ನನ್ನ ಮಸೂದೆ ತಿರಸ್ಕರಿಸಲ್ಪಡುತ್ತೆ ಎಂಬುದನ್ನು ನಾನು ಬಲ್ಲೆ, ನಾನೇನು ದೂರುವುದಿಲ್ಲ........ ನಾನು ಹತಾಶನೂ ಆಗುವುದಿಲ್ಲ........ನಾನು ಯಾವಾಗಲು ತಿಳಿಯುತ್ತೇನೆ ಮತ್ತು ಆಗಾಗ ಹೇಳಿದ್ದೇನೆ; ಏನೆಂದರೆ, ಭಾರತದಲ್ಲಿ ಈಗಿನ ತಲೆಮಾರಿಗೆ ಸೇರಿದ ನಾವು ನಮ್ಮ ದೇಶಕ್ಕೆ ಸೇವೆಯನ್ನು ನಮ್ಮ ವೈಫಲ್ಯಗಳಿಂದ ಮಾತ್ರವೇ ಮಾಡಲು ಸಾಧ್ಯ" ಗೋಖಲೆಯವರಿಗೆ ಈ ಹಂತದಲ್ಲಿ ಸೋಲು ಉಂಟಾಯಿತಾದರೂ ಅವರು ಬಿತ್ತಿದ ಬೀಜ ಬೇಗ ಬೆಳೆದು ಫಲ ನೀಡಿತು. ಇದರಿಂದ ಸ್ಫೂರ್ತಿ ಪಡೆದ ಸ್ವತಂತ್ರ ಭಾರತ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿತು.

ಸ್ವಾತಂತ್ರ್ಯನಂತರ : ಸ್ವತಂತ್ರ ಭಾರತವು ಸಾರ್ವತ್ರಿಕ ಕಡ್ಡಾಯ ಹಾಗೂ ಉಚಿತ ಶಿಕ್ಷಣವನ್ನು ಜಾರಿಗೆ ತರಲು ಆರಂಭದಿಂದಲೇ ಉತ್ಸುಕತೆ ತೋರಿದೆ. ಈ ಉದ್ದೇಶವನ್ನು ಪ್ರತಿಬಿಂಬಿಸುವ ರಾಜ್ಯಾಂಗ ಘಟನೆಯ 45ನೇ ವಿಧಿಯಲ್ಲಿ ''ಈ ಸಂವಿಧಾನವು ಜಾರಿಗೆ ಬಂದ ಹತ್ತು ವರ್ಷಗಳೊಳಗಾಗಿ ಎಲ್ಲಾ ಮಕ್ಕಳಿಗೂ 14 ವರ್ಷ ವಯಸ್ಸಾಗುವವರೆಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನೊದಗಿಸಲು ರಾಷ್ಟ್ರವು ಯತ್ನಿಸುತ್ತದೆ'' ಎಂಬುದನ್ನು ಸ್ಪಷ್ಟಪಡಿಸಿದೆ. ಹೀಗೆ ಸಂವಿಧಾನದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ನೀಡಿರುವ ಮಹತ್ವದಿಂದಾಗಿ ಪಂಚವಾರ್ಷಿಕ ಯೋಜನಾವಧಿಗಳಲ್ಲಿ ಪ್ರಾಥಮಿಕ ಶಿಕ್ಷಣಕಾರ್ಯಗಳಿಗೆ ಸಾಕಷ್ಟು ಗಮನವನ್ನು ಕೊಡಲಾಗಿದೆ.

ಸ್ವತಂತ್ರ ಭಾರತವು ಈ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು (6-14 ವರ್ಷ ವಯೋಮಾನದ ಮಕ್ಕಳು) ಯಶಸ್ವಿಯಾಗಿಸಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಅವುಗಳೆಂದರೆ (1) ಸಾರ್ವತ್ರಿಕ ಸೌಲಭ್ಯ. (2) ಸಾರ್ವತ್ರಿಕ ದಾಖಲಾತಿ. (3) ಸಾರ್ವತ್ರಿಕ ದಾಖಲಾತಿ ಉಳಿಸಿಕೊಂಡು ಬರುವುದು.

ಸಾರ್ವತ್ರಿಕ ಸೌಲಭ್ಯವೆಂದರೆ ಪ್ರತಿ ಹತ್ತು ಮಂದಿ ಮಕ್ಕಳಲ್ಲಿ ಒಂಬತ್ತು ಮಂದಿಗೆ ನಡೆದು ತಲುಪುವಷ್ಟು ದೂರದಲ್ಲಿ ಶಾಲೆಯನ್ನು ತೆರೆಯುವುದು. ಸಾರ್ವತ್ರಿಕ ದಾಖಲಾತಿ ಎಂದರೆ ಒಮ್ಮೆ ಶಾಲಾ ಸೌಲಭ್ಯವನ್ನು ಒದಗಿಸಿದ ಮೇಲೆ ಸುತ್ತ ಮುತ್ತಲಿನ ಎಲ್ಲಾ ಮಕ್ಕಳು ಅದಕ್ಕೆ ಸೇರಬೇಕು. 6-14 ವಯೋಮಾನದ ಪ್ರತಿಯೊಂದು ಮಗುವೂ ಶಾಲೆಗೆ ಹೋಗಬೇಕು. ಪೋಷಕರನ್ನು ಈ ಮೇರೆಗೆ ಒತ್ತಾಯಿಸುವುದೂ ಈ ಕಾರ್ಯಕ್ರಮದ ಒಂದು ಅಂಶವಾಗಿದೆ. ಒಂದು ಮಗು ಶಾಲೆಗೆ ಸೇರಿದರಷ್ಟೆ ಸಾಲದು, ಪ್ರಾಥಮಿಕ ಹಂತವಾದ ಕಿರಿಯ ಮತ್ತು ಹಿರಿಯ

ಪ್ರಾಥಮಿಕ ಶಾಲಾ ಹಂತ ಮುಗಿಯುವರೆಗೂ ಶಾಲೆಯಲ್ಲಿಯೇ ಉಳಿಯಬೇಕು. ಇದನ್ನೇ ದಾಖಲಾತಿ ಉಳಿಸಿಕೊಂಡು ಬರುವುದು ಎನ್ನುವುದು. ಹೀಗೆ ಆದಾಗ ಮಾತ್ರ ಕಡ್ಡಾಯ ಶಿಕ್ಷಣದ ಉದ್ದೇಶ ಸಫಲವಾದಂತಾಗುತ್ತದೆ.

ಭಾರತದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವು ಯಶಸ್ವಿಯಾಗಲು ವಿದ್ಯಾರ್ಥಿಗಳಿಗೆ ಅನೇಕ ಸೌಲಭ್ಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಪ್ರಮುಖವಾದವು–ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಉಪಹಾರ ವ್ಯವಸ್ಥೆ, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡಿಕೆ ಮತ್ತು ಉಚಿತ ಬಟ್ಟೆ ಮತ್ತು ಉಚಿತ ಪಠ್ಯಪುಸ್ತಕಗಳ ವಿತರಣೆ.

ಈ ಯೋಜನೆಗಳ ನೆರವಿನಿಂದ ವಿದ್ಯಾರ್ಥಿಗಳ, ಅಂದರೆ 6–14 ವರ್ಷ ವಯೋಮಾನದ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವಲ್ಲಿ ಭಾರತ ಸರ್ಕಾರವು ಸ್ವತಂತ್ರಾನಂತರ ಹೆಚ್ಚಿನ ಉತ್ಸುಕತೆಯನ್ನು ತೋರಿದೆ. ಇದಲ್ಲದೆ ಪ್ರಾಥಮಿಕ ಶಾಲೆಗಳ ಸಂಖ್ಯೆ, ಉಪಾಧ್ಯಾಯರುಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಕೂಡ ಗಣನೀಯವಾಗಿ ಹೆಚ್ಚಿದೆ. ಈ ಅಂಶಗಳನ್ನು ಒಂದು, ಎರಡು ಮತ್ತು ಮೂರನೇ ಕೋಷ್ಟಕಗಳಿಂದ ತಿಳಿಯಬಹುದಾಗಿದೆ.

ಈ ಕೋಷ್ಟಕಗಳಲ್ಲಿ ಪ್ರಸ್ತುತಪಡಿಸಿರುವ ಅಂಕಿ–ಅಂಶಗಳನ್ನು ಪರಿಶೀಲಿಸಿದಾಗ ಪ್ರಾಥಮಿಕ ಶಿಕ್ಷಣದಲ್ಲಿ ಗಮನಾರ್ಹ ಪ್ರಗತಿ ಉಂಟಾಗಿರುವುದನ್ನು ನಾವು ಗಮನಿಸಬಹುದೇನೋ ನಿಜ. ಆದಾಗ್ಯೂ ಕೂಡ ಪ್ರಾಥಮಿಕ ಶಿಕ್ಷಣದ ದಾಖಲಾತಿ ಮತ್ತು ಹಾಜರಾತಿ ಎರಡೂ ನಿರೀಕ್ಷಿತ ಮಟ್ಟವನ್ನು ತಲುಪಿಲ್ಲ. ಈ ಪರಿಸ್ಥಿತಿ ಪ್ರಾಥಮಿಕ ಶಿಕ್ಷಣದಲ್ಲಿ ಇಂದೂ ಇರುವುದಕ್ಕೆ ಕಾರಣಗಳನ್ನೂ, ಪ್ರಸಕ್ತ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕಾದ ಪರಿಹಾರೋಪಾಯಗಳನ್ನೂ ಅಧ್ಯಯನ ಮಾಡುವುದು ಅತ್ಯಾವಶ್ಯವಷ್ಟೆ ಅಲ್ಲ, ಮಹತ್ವವೂ ಹೌದು. ಅಂಕಿ–ಅಂಶಗಳು ಅನೇಕ ಬಾರಿ ನೈಜಚಿತ್ರಣವನ್ನು ನೀಡಲು ಅಸಮರ್ಥವಾಗುತ್ತವೆ. ದಾಖಲಾತಿಯ ಪ್ರಮಾಣಕ್ಕೂ ಹಾಜರಾತಿಯ ಪ್ರಮಾಣಕ್ಕೂ ನಡುವೆ ಅಂತರ ಬಹಳಷ್ಟಿದೆ. ಇಷ್ಟೊಂದು ಹಣ, ಶ್ರಮ ವೆಚ್ಚವಾಗುತ್ತಿದ್ದರೂ ನಿರೀಕ್ಷಿಸಿದ ಪ್ರತಿಫಲ ಸಿಗದಿರುವುದು ನಮ್ಮ ಯೋಜನೆಗಳ ವೈಫಲ್ಯಕ್ಕೆ ಕನ್ನಡಿ ಹಿಡಿದಂತಿದೆ. ಇದರಿಂದ ಪ್ರಾಥಮಿಕ ಶಿಕ್ಷಕರಿಂದ ದಾಖಲಾತಿಯ ಪ್ರಮಾಣ ಕಡಿಮೆ ಇರುವುದಕ್ಕೆ, ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ತೀರಾ ಕೆಳಮಟ್ಟದಲ್ಲಿ ಇರುವುದಕ್ಕೆ ಅನೇಕ ಕಾರಣಗಳನ್ನು ನೀಡಬಹುದಾಗಿದೆ. ಇವುಗಳನ್ನು ಪ್ರಮುಖವಾಗಿ, ಸಾಮಾಜಿಕ, ಆರ್ಥಿಕ, ಆಡಳಿತ ಸಂಬಂಧ ಮತ್ತು ಆಕಸ್ಮಿಕ ಎಂದು ವಿಂಗಡಿಸಬಹುದು. ಇದಲ್ಲದೆ ಪೋಷಕರ ಅನಕ್ಷರತೆ, ಸಂಪ್ರದಾಯ, ಮೌಢ್ಯ ಮುಂತಾದವುಗಳು ಕೂಡ ಅನೇಕ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅಡ್ಡಿಬರುತ್ತವೆ. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಶಾಲೆಗೆ ಸೇರುವ ಮಕ್ಕಳಲ್ಲಿ ಹೆಚ್ಚು ಮಕ್ಕಳು 5ನೇ ತರಗತಿ ತಲುಪುವುದರೊಳಗೆ

ಕೋಷ್ಟಕ ಒಂದು : ಪ್ರಾಥಮಿಕ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಅಂಕಿ-ಅಂಶಗಳು

	1950–51	1960–61	1968–69	1978–79	1982–83	1983–84	1985–86
1. ಶಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 1–5 (ಲಕ್ಷಗಳಲ್ಲಿ)	191.5	349.9	543.7	689.6	770.4	811.0	839.0
2. ಒಟ್ಟು ಜನಸಂಖ್ಯೆಯಲ್ಲಿ 6–11 ವರ್ಷ ವಯೋಮಾನದ ಮಕ್ಕಳು (ಶೇಕಡಾವಾರು)	42.6%	62.4%	78.1%	81.6%	87.2%	91.82%	94.1%
3. ಶಾಲೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 6–8ನೇ ತರಗತಿ (ಲಕ್ಷಗಳಲ್ಲಿ)	31.2	67.0	125.4	181.8	222.1	245.9	257.0
4. ಒಟ್ಟು ಜನಸಂಖ್ಯೆಯಲ್ಲಿ 11–14 ವರ್ಷ ವಯೋಮಾನದ ಮಕ್ಕಳು (ಶೇಕಡಾವಾರು)	12.7%	22.5%	33.5%	38.0%	43.9%	48.42%	49.8%

ಕೋಷ್ಟಕ ಎರಡು : ಶಾಲೆಗಳ ಬಗ್ಗೆ ಅಂಕಿ ಅಂಶಗಳು

	1950–51	1960–61	1968–69	1978–79	1982–83	1983–84	1984–85
1. ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ	2,09,671	3,30,399	4,00,621	4,72,519	5,03,741	5,09,143	5,19,741
2. ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ	7,288	17,257	33,487	46,874	52,279	55,235	58,834

ಕೋಷ್ಟಕ ಮೂರು : ಉಪಾದ್ಯಾಯರುಗಳ ಸಂಖ್ಯೆಯ ಬಗ್ಗೆ ಅಂಕಿ-ಅಂಶ

	1950–51	1960–61	1968–69	1978–79	1982–83	1983–84	1984–85
1. ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಕರ ಸಂಖ್ಯೆ	5,37,918	7,41,515	10,05,282	12,96,639	13,89,356	13,91,912	14,58,140
2. ತರಬೇತಿ ಹೊಂದಿದ ಶಿಕ್ಷಕರು ಶೇಕಡಾ ವಾರುಗಳಲ್ಲಿ	58.8%	64.1%	76.9%	87.1%	86.9%	82.2%	88.7%
3. ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಕರ ಸಂಖ್ಯೆ	85,496	3,45,288	5,95,733	8,25,146	8,56,389	8,78,562	9,05,207
4. ತರಬೇತಿ ಹೊಂದಿರುವ ಶಿಕ್ಷಕರು ಶೇಕಡಾ ವಾರುಗಳಲ್ಲಿ	53.3%	66.5%	81.0%	87.4%	89.5%	90.6%	90.6%

ಪ್ರಾಥಮಿಕ ಶಿಕ್ಷಣಕ್ಕಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ವ್ಯಯಮಾಡಿದ ಹಣದ ವಿವರಣೆಯನ್ನು ಕೂಡ ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ಸಂಖ್ಯೆ ನಾಲ್ಕು : ಯೋಜಿತ ಶೈಕ್ಷಣಿಕ ವೆಚ್ಚ (1950–51 ರಿಂದ 1983–84 ಮಿಲಿಯ ರೂ.ಗಳಲ್ಲಿ)

	ಪ್ರಥಮ ಮೂರು ಯೋಜನೆಗಳು 1950–51 ರಿಂದ 1965–66	ಮೂರು ವಾರ್ಷಿಕ ಯೋಜನೆಗಳು 1966–67 ರಿಂದ 1968–69	ನಾಲ್ಕನೇ ಯೋಜನೆ 1969-70 ರಿಂದ 1973–74	ಐದನೇ ಯೋಜನೆ 1974–75 ರಿಂದ 1977-78	ಆರನೇ ಯೋಜನೆ 1978-79 ರಿಂದ 1982-83
ಪ್ರಾಥಮಿಕ ಶಿಕ್ಷಣ (ಶಿಕ್ಷಕರ ಶಿಕ್ಷಣವೂ ಸೇರಿದಂತೆ)	3,810 (38)	740 (23)	2,390 (30)	3,170 (35)	9,000 (ಹಂಗಾಮಿ) (46)

ಶಾಲೆ ಬಿಡುತ್ತಾರೆ. ಇನ್ನೂ ಹೆಚ್ಚಿನ ಮಕ್ಕಳು 8ನೇ ತರಗತಿ ತಲುಪುವುದರೊಳಗೆ ಶಾಲೆ ಬಿಡುತ್ತಾರೆ.

ನಮ್ಮ ದೇಶದಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ತಿಳಿದುಕೊಳ್ಳಲು ಒಂದು ಗ್ರಾಮದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಯಿತು. ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಕುಪ್ಯ ಎಂಬ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣದ ದಾಖಲಾತಿ-ಹಾಜರಾತಿ ಬಗ್ಗೆ ಸಂಗ್ರಹಿಸಲಾದ ಮಾಹಿತಿಯನ್ನು ಈ ಕೆಳಗೆ ಪ್ರಸ್ತುತ ಪಡಿಸಲಾಗಿದೆ. ಈ ಗ್ರಾಮದಲ್ಲಿ ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದೆ. ಈ ಗ್ರಾಮದ ಒಟ್ಟು ಜನಸಂಖ್ಯೆ 2,301, ಅದರಲ್ಲಿ ಗಂಡಸರ ಸಂಖ್ಯೆ 1,169 ಮತ್ತು ಹೆಂಗಸರ ಸಂಖ್ಯೆ 1,132. ಇದರಲ್ಲಿ 1988-89ನೇ ಸಾಲಿನಲ್ಲಿ 6-14 ವಯೋಮಾನದ ಮಕ್ಕಳ ಸಂಖ್ಯೆ 444. ಇದರಲ್ಲಿ ಬಾಲಕರು 219 ಮತ್ತು ಬಾಲಕಿಯರು 225. 6-14 ವಯೋಮಾನದ ಮಕ್ಕಳಲ್ಲಿ ಶಾಲೆಗೆ ದಾಖಲಾದ ಒಟ್ಟು ಮಕ್ಕಳ ಸಂಖ್ಯೆ 229 ಮಾತ್ರ. ಇದರಲ್ಲಿ ಬಾಲಕರು 131 ಮತ್ತು ಬಾಲಕಿಯರು 98. ಶಾಲೆಗೆ ದಾಖಲಾಗಿ, ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ 167 ಮಾತ್ರವಾಗಿದ್ದು ಇದರಲ್ಲಿ ಬಾಲಕರ ಸಂಖ್ಯೆ 110 ಮತ್ತು ಬಾಲಕಿಯರ ಸಂಖ್ಯೆ 57. ಈ ಹಳ್ಳಿಯಲ್ಲಿರುವ 444 ಮಕ್ಕಳಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟು ಮಕ್ಕಳು ದಾಖಲೇ ಆಗಿಲ್ಲ ದಾಖಲಾಗಿರುವ 229 ಮಕ್ಕಳಲ್ಲೂ 62 ಮಕ್ಕಳು ಶಾಲೆಗೆ ಹಾಜರಾಗುತ್ತಿಲ್ಲ. ಇನ್ನು ಒಂದರಿಂದ ಏಳರವರೆಗೆ ತರಗತಿಗಳಿರುವ ಈ ಗ್ರಾಮದ ಶಾಲೆಯ ಬಗ್ಗೆ ಹೇಳಬೇಕೆಂದರೆ ಈ ಶಾಲೆಯಲ್ಲಿ ಇರುವ ಕೊಠಡಿಗಳ ಸಂಖ್ಯೆ ಕೇವಲ 4. ಇಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಸಂಖ್ಯೆ 2.

ಈ ಹಳ್ಳಿಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವಾಗಲಿ ಆಟದ ಮೈದಾನವಾಗಲಿ, ಮಧ್ಯಾಹ್ನದ ಉಪಾಹಾರದ ವ್ಯವಸ್ಥೆಯಾಗಲಿ ಇಲ್ಲ. ಮಧ್ಯಾಹ್ನದ ಉಪಾಹಾರ ಇಲ್ಲದಿರುವುದಕ್ಕೆ ಉಪಾಧ್ಯಾಯರುಗಳು ನೀಡಿದ ಕಾರಣಗಳು:— (1) ಸಾಗಣಿಕೆ ತೊಂದರೆ (2) ಸರ್ಕಾರವು ನೀಡುವ ಸಾದಿಲ್ವಾರು ವೆಚ್ಚ ಸಾಲದಿರುವಿಕೆ (3) ಸಿಬ್ಬಂದಿಯ ತೊಂದರೆ. 1988-89ನೇ ಸಾಲಿನಲ್ಲಿಯೇ 62 ಮಕ್ಕಳು ಶಾಲೆಗೆ ಹಾಜರಾಗುವುದಿಲ್ಲ ಎಂದರೆ ಇದರ ಹಿಂದೆ ಎಷ್ಟೋ ಮಕ್ಕಳು ಶಾಲೆಯನ್ನು ಬಿಟ್ಟಿರುತ್ತಾರೆ. ಇದಕ್ಕೆ ಉದಾಹರಣೆಯಾಗಿ ಈ ಮುಂದೆ ನೀಡುವ ಅಂಕಿ ಅಂಶಗಳು ಅದೇ ಹಳ್ಳಿಯ ಶಾಲೆಯಲ್ಲಿ ದೊರೆತ ಮಾಹಿತಿಯನ್ನು ಆಧರಿಸಿವೆ.

ಕೋಷ್ಟಕ ಸಂಖ್ಯೆ ಐದು : ವಿದ್ಯಾರ್ಥಿಗಳಲ್ಲಿ ಉಂಟಾದ ಅಪವ್ಯಯ

	ಹುಡುಗರು		ಹುಡುಗಿಯರು		ಒಟ್ಟು	
	ದಾಖಲಾತಿ	ಹಾಜರಾತಿ	ದಾಖಲಾತಿ	ಹಾಜರಾತಿ	ದಾಖಲಾತಿ	ಹಾಜರಾತಿ
1	2		3		4	
(1) 1988–89ನೇ ಸಾಲಿನಲ್ಲಿ 7ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	11	11	5	5	16	16
1982–83ನೇ ಸಾಲಿನಲ್ಲಿ ಇದೇ ವಿದ್ಯಾರ್ಥಿಗಳು 1ನೇ ತರಗತಿಯಲ್ಲಿದ್ದಾಗ	20	17	31	20	51	37
(2) 1988–89ನೇ ಸಾಲಿನಲ್ಲಿ 6ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	9	9	4	4	13	13
1983–84ರಲ್ಲಿ ಇದೇ ವಿದ್ಯಾರ್ಥಿಗಳು 1ನೇ ತರಗತಿಯಲ್ಲಿದ್ದಾಗ	27	19	28	14	55	33
(3) 1988–89ನೇ ಸಾಲಿನಲ್ಲಿ 5ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	9	9	5	5	14	14
1984–85ನೇ ಸಾಲಿನಲ್ಲಿ ಇದೇ ವಿದ್ಯಾರ್ಥಿಗಳು 1ನೇ ತರಗತಿಯಲ್ಲಿದ್ದಾಗ	32	23	31	19	63	42
(4) 1988–89ನೇ ಸಾಲಿನಲ್ಲಿ 4ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	16	14	7	7	23	21
1985–86ನೇ ಸಾಲಿನಲ್ಲಿ ಇದೇ ವಿದ್ಯಾರ್ಥಿಗಳು 1ನೇ ತರಗತಿಯಲ್ಲಿದ್ದಾಗ	32	21	31	18	63	39

1	2		3		4	
(5) 1988-89ನೇ ಸಾಲಿನಲ್ಲಿ 3ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	24	14	10	5	34	19
1986-87ನೇ ಸಾಲಿನಲ್ಲಿ ಇದೇ ವಿದ್ಯಾರ್ಥಿಗಳು 1ನೇ ತರಗತಿಯಲ್ಲಿದ್ದಾಗ	37	20	33	13	70	33
(6) 1988-89ನೇ ಸಾಲಿನಲ್ಲಿ 2ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	28	18	19	14	41	32
1987-88ನೇ ಸಾಲಿನಲ್ಲಿ ಇದೇ ವಿದ್ಯಾರ್ಥಿಗಳು 1ನೇ ತರಗತಿಯಲ್ಲಿದ್ದಾಗ	37	20	35	21	72	41
(7) 1988-89ನೇ ಸಾಲಿನಲ್ಲಿ 1ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	34	25	36	24	70	49

ಈ ಮೇಲಿನ ಕೋಷ್ಟಕದಿಂದ ತಿಳಿಯುವುದೇನೆಂದರೆ ಹಾಲಿ 1988-89ನೇ ಸಾಲಿನಲ್ಲಿ ಇರುವ 1ರಿಂದ 7ನೇ ತರಗತಿಯ ಮಕ್ಕಳು 1ನೇ ತರಗತಿಗೆ ಸೇರಿದ ವರ್ಷದಿಂದ 2, 3, 4, 5, 6, 7ನೇ ತರಗತಿಗೆ ಬರುವವರೆಗೆ ಅಪವ್ಯಯ ವಾಗಿದ್ದಾರೆ. ಅದರಲ್ಲೂ ಹುಡುಗಿಯರು ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗಿ, ಕಡಿಮೆ ಪ್ರಮಾಣದಲ್ಲಿ ಹಾಜರಿ ಆಗುತ್ತಿದ್ದಾರೆ.

ಈ ಮೇಲಿನ ಅಪವ್ಯಯಕ್ಕೆ ಕಾರಣಗಳೇನೆಂದು ತಿಳಿಯಲು ಹಳ್ಳಿಯ ಸುಮಾರು 30 ಕುಟುಂಬಗಳನ್ನು ಮಾದರಿಯನ್ನಾಗಿ ಆಯ್ಕೆಮಾಡಿ ಪೋಷಕರಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಕುಟುಂಬಗಳಿಂದ ದೊರೆತ ಮಾಹಿತಿಯಿಂದ ತಿಳಿದು ಬಂದುದೇನೆಂದರೆ, ಆರ್ಥಿಕ ತೊಂದರೆ, ಸಾಮಾಜಿಕ ತೊಂದರೆ ಮತ್ತು ಆಡಳಿತಾತ್ಮಕ ಕಾರಣಗಳು ಅಪವ್ಯಯಕ್ಕೆ ಪ್ರಮುಖ ಕಾರಣಗಳಾಗಿವೆ. ಇದರ ಜೊತೆಗೆ ಈ ಹಳ್ಳಿಯು ವ್ಯವಸಾಯ ಪ್ರಧಾನ ಹಳ್ಳಿಯಾಗಿರುವುದರಿಂದ ಪೋಷಕರು ತಮ್ಮ ಗಂಡು ಮಕ್ಕಳನ್ನು ಜೇಸಾಯ, ದನಕರುಗಳನ್ನು ನೋಡಿಕೊಳ್ಳುವುದು ಮುಂತಾದ ಕೆಲಸಗಳಲ್ಲಿ ತೊಡಗಿಸುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುವ ಪೋಷಕರು ತಮ್ಮ ಮಕ್ಕಳು 10-11 ವರ್ಷ ವಯೋಮಿತಿಗೆ ಬರುತ್ತಿದ್ದಂತೆ ಕೂಲಿಕೆಲಸಕ್ಕೆ ಕಳುಹಿಸಿಬಿಡುತ್ತಾರೆ. ಹೆಣ್ಣುಮಕ್ಕಳ ವಿಷಯದಲ್ಲಾದರೋ ನಾನಾ ಅಂಶಗಳು ಅಪವ್ಯಯಕ್ಕೆ ಕಾರಣ

ವಾಗುತ್ತವೆ. ಮನೆಗೆಲಸದಲ್ಲಿ ನೆರವು ನೀಡಲು ಮತ್ತು ಸಣ್ಣ ಮಕ್ಕಳ ಪಾಲನೆ ಗೋಸ್ಕರ ಹೆಣ್ಣು ಮಕ್ಕಳನ್ನು ಶಾಲೆಯಿಂದ ಬಿಡಿಸಲಾಗುತ್ತದೆ. ಇಷ್ಟೆ ಅಲ್ಲದೆ ಅವರಿಗೆ 11-12 ವರ್ಷಗಳಾಗುತ್ತಿದ್ದಂತೆ ವಯಸ್ಕರಾಗುವುದರಿಂದ ಅವರನ್ನು ಶಾಲೆಯಿಂದ ಬಿಡಿಸುತ್ತಾರೆ. ಇದರ ಜೊತೆಗೆ ಮೂಢನಂಬಿಕೆಗಳು ಹಾಗೂ ಸಂಪ್ರದಾಯಬದ್ಧತೆ ಕೂಡ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರಮುಖ ಅಡ್ಡಿಗಳಾಗಿರುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಪೋಷಕರ ವಿದ್ಯಾಭ್ಯಾಸದ ಮಟ್ಟ ಕಡಿಮೆ ಇರುವುದರಿಂದ ಅನೇಕ ಪೋಷಕರು ಸ್ವತಃ ಅನಕ್ಷರಸ್ಥರಾಗಿರುವುದರಿಂದ ಅವರ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿಯೂ ಅನಾಸಕ್ತರಾಗಿರುತ್ತಾರೆ. ಜೊತೆಗೆ ಕುಲಕಸಬುಗಳಾದ ಮರಗೆಲಸ, ಬಟ್ಟೆ ತೊಳೆಯುವುದು, ಕಬ್ಬಿಣದ ಕೆಲಸ, ಕ್ಷೌರಿಕ ಕೆಲಸ, ಮಡಿಕೆ ಕೆಲಸ, ಬಿದಿರಿನ ಕೆಲಸ ಇವುಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಬಳಸಿಕೊಳ್ಳುವುದರಿಂದ ಪ್ರಾಥಮಿಕ ಹಂತದಲ್ಲೆ ಬಹಳಷ್ಟು ಅಪವ್ಯಯ ಉಂಟಾಗುತ್ತದೆ.

ಈ ಅಪವ್ಯಯಕ್ಕೆ ಆಯ್ಕೆಮಾಡಿದ ಕುಟುಂಬಗಳಲ್ಲಿನ ಒಟ್ಟು ಮಕ್ಕಳ ಸಂಖ್ಯೆ 62. ಅದರಲ್ಲಿ ಹುಡುಗರ ಸಂಖ್ಯೆ 33 ಹಾಗೂ ಹುಡುಗಿಯರ ಸಂಖ್ಯೆ 29. ಇದರಲ್ಲಿ ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆ ಕೇವಲ 28. ಇದರಲ್ಲಿ ಹುಡುಗರು 20 ಹಾಗೂ ಹುಡುಗಿಯರು 8. ಮಾಹಿತಿಯನ್ನು ಸಂಗ್ರಹಿಸಿದ 30 ಕುಟುಂಬ ಗಳಲ್ಲಿಯೂ ಪೋಷಕರ ವಿದ್ಯಾಮಟ್ಟ ತೀರಾ ಕಡಿಮೆ ಇದ್ದುದು ಕಂಡು ಬಂದಿತು. 19 ಕುಟುಂಬಗಳಲ್ಲಿ ತಂದೆ-ತಾಯಿಗಳಿಬ್ಬರೂ ಸಂಪೂರ್ಣವಾಗಿ ಅವಿದ್ಯಾವಂತರು. 10 ಕುಟುಂಬಗಳಲ್ಲಿ ಪುರುಷರು ಮಾತ್ರ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪಡೆದಿದ್ದಾರೆ. ಒಂದೇ ಒಂದು ಕುಟುಂಬದಲ್ಲಿ ಪೋಷಕರು ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಇದು ಇಡೀ ಗ್ರಾಮದ ವಿದ್ಯಾಭ್ಯಾಸದ ಮಟ್ಟಕ್ಕೆ ಒಂದು ಕನ್ನಡಿ ಹಿಡಿದಂತಿದೆ.

ಈ ಮೇಲೆ ವಿವರಿಸಿದ ಅಂಶಗಳಿಂದ ನಮ್ಮ ಸ್ವತಂತ್ರ ಭಾರತದಲ್ಲಿ ಎಷ್ಟರ ಮಟ್ಟಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗಿದೆ ಎಂಬುದನ್ನು ತಿಳಿಯ ಬಹುದಾಗಿದೆ. ಹಾಗೊಂದು ವೇಳೆ ಪ್ರಾಥಮಿಕ ಕಡ್ಡಾಯ ಶಿಕ್ಷಣ ಯಶಸ್ವಿಯಾಗಿದೆ ಎಂದರೆ ನಗರ ಪ್ರದೇಶದ ಮಕ್ಕಳ ವಿಷಯದಲ್ಲಿ ಮಾತ್ರ. ನಗರಗಳಲ್ಲಿಯೂ ಕೂಡ ಕೊಳಚೆ ಪ್ರದೇಶದ ಮಕ್ಕಳು ಹಾಗೂ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಶಿಕ್ಷಣದಿಂದ ಬಹುಮಟ್ಟಿಗೆ ವಂಚಿತರಾಗಿದ್ದಾರೆ.

ಈ ಮೇಲೆ ತಿಳಿಸಿದಂತೆ ಭಾರತದಲ್ಲಿ ಪ್ರಾಥಮಿಕ ಹಂತದಲ್ಲಿ ಅಪವ್ಯಯದ ಪ್ರಮಾಣ ದಿನದಿನಕ್ಕೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಾಗಿದೆ ಈ ಅಪವ್ಯಯವನ್ನು ತಡೆಗಟ್ಟಬೇಕಾದರೆ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಯಶಸ್ವಿ ಯಾಗಬೇಕಾದರೆ ಶೀಘ್ರದಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಸುಧಾರಣೆ ಗಳಾಗಬೇಕು.

(1) ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಇರಬೇಕು. ಅದರಲ್ಲೂ ಪ್ರಾಥಮಿಕ ಶಿಕ್ಷಣಕ್ಕಾಗಿ ಹೆಚ್ಚಿನ ರೀತಿಯಲ್ಲಿ ಇರಬೇಕು. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಶಿಕ್ಷಣ ಕ್ಷೇತ್ರಕ್ಕೆ ಮಾಡಿದ ಶೈಕ್ಷಣಿಕ ವೆಚ್ಚ, ಒಟ್ಟು ಯೋಜನಾವೆಚ್ಚದ ಶೇಕಡಾ 2.8. ಆದ್ದರಿಂದ ಶಿಕ್ಷಣಕ್ಕಾಗಿ ಹೆಚ್ಚಿನ ಗಮನ ನೀಡುವುದು ಅತ್ಯಾವಶ್ಯವಾಗಿದೆ.

(2) ಪ್ರತಿಯೊಂದು ಮಗುವಿನ ಮನೆಯಿಂದ ಕಾಲ್ನಡಿಗೆಯಲ್ಲಿ ಹೋಗಬಹುದಾದಷ್ಟು ಸಮೀಪದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಾಪನೆಯಾಗಬೇಕು. ಮಾಧ್ಯಮಿಕ ಶಾಲಾ ಘಟ್ಟದಲ್ಲಿ ಆಗಬೇಕಾದ ಕೆಲಸ ಇನ್ನೂ ಸಾಕಷ್ಟಿದೆ. ಪ್ರತಿ ಮಗುವಿನ ಮನೆಯ ಸಮೀಪದಲ್ಲಿ ಪ್ರಾಥಮಿಕ ಶಾಲೆಯನ್ನು (ತರಗತಿ 1ರಿಂದ 7) ತೆರೆಯುವ ಪ್ರಯತ್ನಗಳಾಗಲೇ ಬೇಕು.

(3) ಶಿಕ್ಷಕರ ಸ್ಥಾನಮಾನಗಳಲ್ಲಿ ಸುಧಾರಣೆಯಾಗಬೇಕು. ಮುಖ್ಯವಾಗಿ ಪ್ರಾಥಮಿಕ ಶಿಕ್ಷಣ ಶಾಲಾ ಹಂತದ ಎಲ್ಲಾ ಶಿಕ್ಷಕರ ವೇತನ ವೃದ್ಧಿಯಾಗಬೇಕು. ಶಿಕ್ಷಕರಿಗಾಗಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿ ಅವರು ತಮ್ಮ ಕೆಲಸದಲ್ಲಿ ಹೆಚ್ಚು ಆಸಕ್ತಿ ವಹಿಸುವಂತೆ ಮಾಡಬೇಕು.

(4) ಪ್ರಾಥಮಿಕ ಶಿಕ್ಷಣದಲ್ಲಿ ಹುಡುಗಿಯರು ಮತ್ತು ದುರ್ಬಲ ವರ್ಗದವರಿಗಾಗಿ ಶಿಕ್ಷಣ ಪ್ರಸಾರ ಕಾರ್ಯಕ್ರಮಗಳನ್ನು ವಿಸ್ತರಿಸಬೇಕು.

(5) ನೆರೆಹೊರೆಯ ಶಾಲೆ ವ್ಯವಸ್ಥೆಯನ್ನು ಪ್ರಾಥಮಿಕ ಹಂತದಲ್ಲಿ ಸಾರ್ವತ್ರೀಕರಣಗೊಳಿಸಬೇಕು. ಪ್ರಾಥಮಿಕ ಶಿಕ್ಷಣವನ್ನು ಕೂಡಲೇ ಉಚಿತವಾಗಿ ಕೊಡಬೇಕು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಪುಸ್ತಕಗಳು, ಸಮವಸ್ತ್ರಗಳನ್ನು ಪುಕ್ಕಟೆಯಾಗಿ ಒದಗಿಸಬೇಕು. ಮಧ್ಯಾಹ್ನದ ಉಪಾಹಾರ ವ್ಯವಸ್ಥೆಯನ್ನು ಪ್ರತಿಯೊಂದು ಶಾಲೆಯಲ್ಲಿಯೂ ಸಹ ಕಡ್ಡಾಯಗೊಳಿಸಬೇಕಾಗಿದೆ. ಇದಕ್ಕೆ ತಗಲುವ ಸಾದಿಲ್ವಾರು ವೆಚ್ಚದ ಪ್ರಮಾಣವನ್ನು ಹೆಚ್ಚಿಸಬೇಕು. ಇದರಿಂದ ಅಪವ್ಯಯ ಮತ್ತು ಸ್ಥಗಿತತೆಯ ಕಡಿತಕ್ಕೆ ತೀವ್ರತರವಾದ ಕಾರ್ಯಕ್ರಮ ರೂಪಿಸಿದಂತಾಗುತ್ತದೆ. ಇದರ ಜೊತೆಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗಲು ಸಹಾಯಕವಾಗುತ್ತದೆ.

(6) ಶೈಕ್ಷಣಿಕ ಆಡಳಿತ ಸುಧಾರಣೆಗೆ ಒತ್ತು ನೀಡಬೇಕು. ಮುಖ್ಯವಾಗಿ ಆಗಬೇಕಾದ ಸುಧಾರಣೆಗಳೆಂದರೆ ಶಿಕ್ಷಣದ ಯೋಜನೆ, ಆಡಳಿತ ಅಭಿವೃದ್ಧಿ, ಶಾಲಾ ಸಮುಚ್ಚಯ ಪದ್ಧತಿ, ಶಾಲಾ ಮೇಲ್ವಿಚಾರಣೆಯ ಆಧುನೀಕರಣ ಹಾಗೂ ಶೈಕ್ಷಣಿಕ ಸಂಸ್ಥೆಗಳ ಸುಧಾರಣೆ. ಈ ದೃಷ್ಟಿಯಿಂದ ಪ್ರತಿ ಜಿಲ್ಲೆಯನ್ನು ಮುಖ್ಯ ಘಟಕವಾಗಿ ಪರಿಭಾವಿಸಬೇಕು.

(7) ಶೇಕಡಾ 30ರಷ್ಟು ಮಕ್ಕಳು—ಇವರು ಹೆಚ್ಚಾಗಿ ತೀರಾ ಕೆಳವರ್ಗಗಳಿಗೆ ಸೇರಿದವರು, ಎಂದೂ ಶಾಲೆಗಳನ್ನು ಪ್ರವೇಶಿಸುವುದಿಲ್ಲ. ಅವರು ಬಡವರಾಗಿ ಹುಟ್ಟಿ, ಬಡವರಾಗಿಯೇ ಉಳಿಯುತ್ತಾರೆ ಮತ್ತು ಔಪಚಾರಿಕ ಶಿಕ್ಷಣ ವ್ಯವಸ್ಥೆ ಇವರನ್ನು

ಮೀರಿ ನಡೆಯುತ್ತದೆ. ಇದರಿಂದ ನೊಂದಾವಣೆಯಾಗದೆ ಇರುವ ವಿದ್ಯಾರ್ಥಿಗಳಲ್ಲಿ ಹುಡುಗಿಯರು, ಕೃಷಿ-ಕಾರ್ಮಿಕರ ಮಕ್ಕಳು, ಪರಿಶಿಷ್ಟ ಜಾತಿ ಮತ್ತು ವರ್ಗದವರು ಮುಂತಾದ ದುರ್ಬಲ ವರ್ಗದವರಿಗೆ ವಿಶೇಷ ಗಮನ ಸಲ್ಲಬೇಕು. ಹೆಣ್ಣು ಮಕ್ಕಳ ವಿಶೇಷ ಬೇಡಿಕೆಗಾಗಿ, ಶಿಶುವಿಹಾರ, ಪೂರ್ವಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳನ್ನೊಳಗೊಂಡ ಸಮಗ್ರ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯ. ಗುಡ್ಡಗಾಡು ಪ್ರದೇಶದ ಜನರ ಕಡುಬಡತನ, ದುರ್ಗಮ ಪ್ರದೇಶಗಳು ಮತ್ತು ಅಭಿವೃದ್ಧಿ ಹೊಂದಿರದ ಆಡುನುಡಿ ಮುಂತಾದ ಸಮಸ್ಯೆಗಳ ಪರಿಹಾರದ ಕಡೆ ಗಮನ ಹರಿಸಬೇಕು.

(8) ಪ್ರಾಕೃತಿಕ, ಐತಿಹಾಸಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕಾರಣಗಳಿಂದಾಗಿ ದೇಶದ ವಿವಿಧ ಭಾಗಗಳಲ್ಲಿ ಅಭಿವೃದ್ಧಿಯ ಮಟ್ಟ ಒಂದೇ ಬಗೆಯಾಗಿಲ್ಲ. ಹಾಗೆಯೇ ಒಂದೇ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಪ್ರಗತಿಯಲ್ಲೂ ವ್ಯತ್ಯಾಸವಿದೆ. ಸಮಾನತೆಯೇ ಗುರಿಯಾಗಿರುವ ಕಡ್ಡಾಯ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾಂತೀಯ ವ್ಯತ್ಯಾಸಗಳಿಗೆ ವಿಶೇಷ ಮಹತ್ವವಿದೆ. ಶಾಲೆಗೆ ಹಾಜರಾಗದ ಮಕ್ಕಳಿರುವ ಪ್ರದೇಶದಲ್ಲಿ ಹೆಚ್ಚು ಹಣವನ್ನು ವ್ಯಯಮಾಡಬೇಕಾಗಿದೆ. ಇಂತಹ ಪ್ರದೇಶಗಳು ಕೆಲವು ಹಿಂದುಳಿದ ರಾಜ್ಯಗಳಲ್ಲೇ ಹೆಚ್ಚು ಕೇಂದ್ರಿಕೃತವಾಗುತ್ತಿವೆ. ಸದ್ಯದ ಯೋಜನಾ ವ್ಯವಸ್ಥೆಯಲ್ಲಿ ಶಾಲೆಗೆ ಹಾಜರಾಗದ ಮಕ್ಕಳ ಸಂಖ್ಯೆ ಹೆಚ್ಚಾಗಿರುವ ರಾಜ್ಯಗಳಿಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಕಡಿಮೆ ಹಣ ಸಂದಾಯವಾಗುತ್ತಿದೆ. ಕೇಂದ್ರಗಳಿಂದ ರಾಜ್ಯಗಳಿಗೆ ಮತ್ತು ರಾಜ್ಯಗಳಿಂದ ಜಿಲ್ಲೆಗಳಿಗೆ ಸಮಾನತೆಯ ನೆಲೆಯಲ್ಲಿ ಅನುದಾನಗಳನ್ನು ಒದಗಿಸುವುದರ ಮೂಲಕ ಪ್ರಾಥಮಿಕ ಶಾಲಾಹಂತದಲ್ಲಿ ಈ ಮೂಲಭೂತ ಅಸಮಾನತೆಯನ್ನು ನಿವಾರಿಸಬಹುದಾಗಿದೆ.

ಈ ಮೇಲೆ ಹೇಳಿದ ಕಾರ್ಯಕ್ರಮಗಳಲ್ಲಿ ಒಂದು ಮಹತ್ತರವಾದ ಗುಣಾತ್ಮಕ ಅಂಶವಿದೆ. ಅಂದರೆ ಮಕ್ಕಳನ್ನು ಶಾಲೆಗೆ ಆಕರ್ಷಿಸಿ ಶಿಕ್ಷಣ ಮುಂದುವರಿಸುವ ಪ್ರಾಥಮಿಕ ಶಾಲೆಗಳ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ. ಹೀಗಾಗಬೇಕಾದರೆ (ಪರಿಸರ ಮತ್ತು ಸಮಾಜಕ್ಕೆ ಸಂಬಂಧಿಸಿರಬೇಕು) ಬೋಧನಾ ವಿಧಾನ, ಮೌಲ್ಯಮಾಪನ ತಂತ್ರ, ಸಲಕರಣೆಗಳ ಬಳಕೆ, ಅಧ್ಯಾಪಕರ ತಯಾರಿ ಮುಂತಾದ ಕ್ಷೇತ್ರದ ಮಹತ್ವದ ಬದಲಾವಣೆಯಾಗಬೇಕು

ಈಗಾಗಲೇ ನಾವು ಅಳವಡಿಸಿರುವ ವಿಧಾನಗಳಿಂದ ಈ ಕಾರ್ಯಕ್ರಮಕ್ಕೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಿಲ್ಲ. ಆದ್ದರಿಂದ ತಲಾವಾರು ವೆಚ್ಚವನ್ನು ಕಡಿಮೆ ಮಾಡಲು ಬೇಕಾದ ದಾರಿಗಳನ್ನು ಕಂಡುಕೊಳ್ಳಬೇಕು. ಒಟ್ಟಾರೆ ಕಡುಬಡತನ ಮತ್ತು ನಿರ್ಗತಿಕತನದ ವಿರುದ್ಧ ಸಮರ ಹೂಡದೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗಲು ಸಾಧ್ಯವಿಲ್ಲದ್ದಾಗಿದೆ.

ಗ್ರಂಥಋಣ

1. Kurrin John ; *Elementary Education in India.* New Delhi : Vikas Publishing House Pvt. Ltd., 1983.

2. Naik J. P. and Syed Nurullah. *A Student's History of Education in India*, Bombay : MacMillan Company of India, Pvt. Ltd., 1964.

3. *India* 1986. *A Reference Annual* ; Published by the Director Publications Division, Ministry of Information and Broad Casting : Government of India : Patila House, New Delhi, 1987.

4. ಮಹಾಬಲೇಶ್ವರರಾವ್, ಶಿಕ್ಷಣ ಆಯೋಗ : ಪೂರ್ವೋತ್ತರ, ಐಬಿಎಚ್ ಪ್ರಕಾಶನ ಗಾಂಧಿನಗರ ; ಬೆಂಗಳೂರು, 1987.

ಸೋಲು ಗೆಲುವಿನಷ್ಟೇ ಮಹತ್ವಪೂರ್ಣವಾದದ್ದು. ಯಾವ ಮಹತ್ಕಾರ್ಯವಾದರೂ, ಅದು ವ್ಯಕ್ತಿಸಂಬಂಧವಿಲ್ಲದೆ ನಡೆಯುತ್ತದೆ.

—ಸ್ವಾಮಿ ವಿವೇಕಾನಂದ

ಮೊದಲು ಭಾರತೀಯರಾಗಿ ನೀವು ಪೂರ್ವಜರ ಪಿತ್ರಾರ್ಜಿತ ಆಸ್ತಿಯನ್ನು ಪಡೆದುಕೊಳ್ಳಿ. ಆರ್ಯ ವಿಚಾರಗಳನ್ನು ಶಿಸ್ತನ್ನು ಸ್ವಭಾವವನ್ನು ಆರ್ಯ ಜೀವನವನ್ನು ಮರಳಿ ಪಡೆಯಿರಿ. ಕೇವಲ ವೈಚಾರಿಕವಾಗಿ ಭಾವನಾತ್ಮಕವಾಗಿ ಮಾತ್ರವಲ್ಲ, ಅವುಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ.

—ಅರವಿಂದರು

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಪ್ರಾಣಿಗಳ ಶೋಷಣೆ

೧

ಪ್ರಕೃತಿಯ ಸೃಷ್ಟಿಯಲ್ಲಿ ಜೀವರಾಶಿಯೂ ಜೀವರಾಶಿಗಳಲ್ಲಿ ಮಾನವ ಜೀವಿಯೂ ಸೃಷ್ಟಿವಿಶೇಷಗಳೆಂದು ನಾವು ತಿಳಿಯುತ್ತೇವೆ. ಹೀಗೆ ತಿಳಿಯಲು ಮುಖ್ಯ ಕಾರಣ ಪರಿಸ್ಫುಟವಾದ ಜೀವಶಕ್ತಿ. ಮಾನವ ಜೀವಿಯಂತೂ ಬುದ್ಧಿಶಕ್ತಿ ಭಾವನಾಶಕ್ತಿಗಳಿಂದ ಉಳಿದ ಜೀವರಾಶಿಗಳ ಮೇಲೆ ತನ್ನ ಪ್ರಭುತ್ವವನ್ನು ಸಾಧಿಸಿದ್ದಾನೆ; ತನ್ನ ಹಿರಿಮೆಯನ್ನು ಸ್ಥಾಪಿಸಿದ್ದಾನೆ. ಈ ಶಕ್ತಿಗಳನ್ನು ಉಚಿತ ರೀತಿಯಿಂದ ಬಳಸಿದಾಗ ಅವನು ದಿಟವಾಗಿ ಮಾನವ, ಬಳಸುವುದರಲ್ಲಿ ಎಡವಿದರೆ ದಾನವ ಎನ್ನುವುದೂ ನಮಗೆ ತಿಳಿದಿದೆ. ಪ್ರಕೃತಿಯ ಜೈವಿಕ ಸೃಷ್ಟಿಯನ್ನು ಸಮತ್ವ ಸಹಾನುಭೂತಿಗಳಿಂದ ತಿಳಿದು ನಡಸಿಕೊಂಡರೆ ಮಾನವ, ಕ್ರೂರವಾಗಿ ತುಚ್ಛವಾಗಿ ತಿಳಿದು ನಡಸಿಕೊಂಡರೆ ದಾನವ ಎನ್ನುವುದು ಇದರ ಅರ್ಥ. ಒಂದು ಶ್ಲಾಘ್ಯಪ್ರಯತ್ನ, ಇನ್ನೊಂದು ನೀಚಪ್ರಯತ್ನ.

ಸಮಸ್ತ ಜೀವರಾಶಿಗೂ ಪ್ರಕೃತಿ ಪ್ರಸವಗೃಹ, ತೂಗುದೊಟ್ಟಿಲು. ಹಾಗೆಯೇ ಅದು ವಿಕಾಸದ ಮೆಟ್ಟಿಲುಗಳನ್ನು ಕಟ್ಟಿರುವ ಕುಶಲ ಶಿಲ್ಪಿಯೂ ಹೌದು. ಜೀವಿಗಳ ಪರಸ್ಪರ ಸಹಜ ಸ್ವಾಭಾವಿಕ ಧರ್ಮಗಳನ್ನು ಮನ್ನಿಸುವುದರಿಂದ, ಸಹಕಾರ ಸಹಬಾಳ್ವೆಗಳಿಂದ ಸಮತೋಲನ ಸಾಧ್ಯ, ವಿಕಾಸವೂ ಉನ್ನತಿಯೂ ಸಾಧ್ಯ. ಹೀಗಿರುವಾಗ ತಾನೊಬ್ಬನೇ ಅತಿಶಯಸೃಷ್ಟಿಯೆಂದು ಮಾನವ ಏಕೆ ಗರ್ವಪಡಬೇಕು ? ಹಾಗೆ ನೋಡಿದರೆ, ಅವನೊಬ್ಬ ಮಹಾಶೋಷಕ. ತನ್ನ ಸುಖಕ್ಕಾಗಿ, ತನ್ನ ಸಂತೋಷಕ್ಕಾಗಿ ಮಣ್ಣಿನ ಕಣದಿಂದ ಹಿಡಿದು ತನ್ನಂತಹ ಮಾನವ ಜೀವಿಯವರೆಗೆ ಎಲ್ಲವನ್ನೂ ಎಲ್ಲರನ್ನೂ ಅವನು ಶೋಷಿಸುತ್ತಲೇ ಇರುತ್ತಾನೆ. ಇದು ಮನುಷ್ಯಕುಲ ಹುಟ್ಟಿದಂದಿನಿಂದ ಇದೆ; ತಕ್ಕ ವಿವೇಚನೆ ಸಂಯಮಗಳಿಲ್ಲದಿದ್ದರೆ ಈ ಶೋಷಣೆಯ ಅಗ್ನಿಯಲ್ಲಿ ತಾನೇ ಆಹುತಿಯಾಗುವುದರಲ್ಲಿ ಆಶ್ಚರ್ಯವೇನಿಲ್ಲ.

ತನ್ನನ್ನು ಸೃಷ್ಟಿದೇಗುಲದ ಕಲಶವೆಂದು ಕರೆದುಕೊಳ್ಳುವ ಈ ಮನುಷ್ಯನಿಗೆ ಪ್ರಾಣಿ ಪ್ರಪಂಚದ ವಿಷಯದಲ್ಲಿ ಎಂತಹ ತುಚ್ಛಭಾವನೆಯಿದೆ ? ನಾಯಿಬುದ್ಧಿ, ಎಮ್ಮೆ ಚರ್ಮ, ಕತ್ತೆ ವಯಸ್ಸು, ನರಿ ಯುಕ್ತಿ, ಕಾಗೆ ಸಂಗೀತ, ಮೊಸಳೆ ಕಣ್ಣೀರು,

ಗಾರ್ದಭ ಗಾಯನ, ಬೆಕ್ಕಿನ ಕಣ್ಣು, ಕತ್ತೆ ಹೊರೆ, ಆನೆ ಹೆಜ್ಜೆ, ಆಮೆ ನಡಿಗೆ, ಹಾವಿನ ದ್ವೇಷ, ಗಿಣಿ ಪಾಠ, ಕೋತಿ ಚೇಷ್ಟೆ, ಕಪಿಮುಷ್ಟಿ, ಬಕಧ್ಯಾನ, ಕೋಳಿಕಾಲು, ಕುದುರೆನಿದ್ರೆ, ಹದ್ದಿನಕಣ್ಣು, ಕೋಲೆಬಸವ, ಕತ್ತೆಮರಿ ಇಂತಹ ಎಷ್ಟೋ ಮಾತುಗಳ ಮೂಲಕ ಪ್ರಾಣಿಗಳ ದೋಷ ದೌರ್ಬಲ್ಯಗಳನ್ನು ಅವನು ಎತ್ತಿ ಅವಹೇಳನ ಮಾಡಿದ್ದಾನೆ. ಹೀಗೆ ಅವಹೇಳನ ಮಾಡಲು ಅವನಿಗಿರುವ ಅಧಿಕಾರ ವೇನು? ಆಯಾ ಪ್ರಾಣಿಗಳ ಚೇಷ್ಟೆ ಅವುಗಳ ಸಹಜ ಚಟುವಟಿಕೆಗಳ ಭಾಗ, ಶಕ್ತಿ ವಿಶೇಷದ ಪ್ರಕಟನೆ, ದೌರ್ಬಲ್ಯದ ಫಲ. ಇಂತಹವು ಮನುಷ್ಯನಲ್ಲಿ ಇಲ್ಲವೇ? ಹಾಗೆ ನೋಡಿದರೆ, ಇನ್ನೂ ಹೆಚ್ಚಾಗಿಯೇ ಇವೆ. ಆಯಾ ಪ್ರಾಣಿಗಳು ಮಾಡಬಹುದಾದ ಅಪಾಯಗಳಿಗಿಂತ, ಉಪಾಯಗಳಿಗಿಂತ ಹೆಚ್ಚು ಅವನು ಮಾಡಬಲ್ಲ. ವಾಸ್ತವವಾಗಿ ತನ್ನ ಅಲ್ಪತೆ ನೀಚತೆಗಳನ್ನು, ಕ್ರೌರ್ಯ ದೌರ್ಬಲ್ಯಗಳನ್ನು ಅವುಗಳಿಗೆ ಆರೋಪಿಸಿ ಅವನು ಅವುಗಳಿಗೆ ಅನ್ಯಾಯ ಬಗೆದಿದ್ದಾನೆ. ಆ ಮೂಕ ಪ್ರಾಣಿಗಳು ಆತನಿಗೆ ಪ್ರತಿ ಹೇಳಲಾರವು, ತಮ್ಮ ಪ್ರತಿಭಟನೆ ವ್ಯಕ್ತಮಾಡಲಾರವು. ತಮ್ಮ ಪ್ರಪಂಚದಲ್ಲಿ ತಮ್ಮವೇ ಜೀವನದ, ವ್ಯವಸ್ಥೆಯ ವಿಧಿ ವಿಧಾನಗಳಿಗೆ ಅನುಗುಣವಾಗಿ ಅವು ಬದುಕುತ್ತವೆ ತಮಗೆ ತಾವೇ ಅವು ಇವನ ತಂಟೆಗೆ ಬರುವುದಿಲ್ಲ. ಪ್ರತಿಯಾಗಿ ಮನುಷ್ಯ ತಾನು ಬಲಿಷ್ಠನೆಂದು, ಯುಕ್ತಿವಂತನೆಂದು ತೋರಿಸಿಕೊಳ್ಳಲು ಅವನ್ನು ಹಿಡಿಯುತ್ತಾನೆ, ಹೊಡೆಯುತ್ತಾನೆ, ಕುಣಿಸುತ್ತಾನೆ, ಕಾಳಿಗ ಆಡಿಸುತ್ತಾನೆ. ಟಗರು, ಹುಂಜ, ಲಾವನ ಹಕ್ಕಿಗಳು ಪರಸ್ಪರವಾಗಿ ಕಾದಾಡಿ ರಕ್ತಸಿಕ್ತವಾಗಿ ಸಾಯುವಂತೆ ಮಾಡುವುದರಲ್ಲಿ ಅವನಿಗೆ ಸಂತೋಷವಿದೆ. ಮದವೇರಿದ ಆನೆಗಳೂ ಕೆರಳಿದ ಗೂಳಿಗಳೂ ಭಯಂಕರವಾಗಿ ಹೋರಾಡಿ ಸೋಲುವುದನ್ನೂ ಸಾಯುವುದನ್ನೂ ನೋಡಿ ನಲಿಯುತ್ತಾನೆ. ಅಪಾಯಕಾರಿಯಾದ ಸಿಂಹದ ಬೇಟೆಗಳನ್ನೂ ಕೆಸರುಗದ್ದೆಯ ಕೋಣನ ಓಟಗಳನ್ನೂ ಕ್ರೀಡೆಗಳೆಂದು ನಡಸಿ ಹರ್ಷಿಸುತ್ತಾನೆ. ವಿವಿಧ ಭಂಗಿಗಳಲ್ಲಿ ನಿಲ್ಲುವ, ಕೂರುವ, ಓಡುವ, ಕುಣಿಯುವ ಪ್ರಾಣಿಚಮತ್ಕಾರಗಳಿಂದ ಸರ್ಕಸ್ ಕಂಪನಿಗಳನ್ನು ಕಟ್ಟುತ್ತಾನೆ. ಜೀವಹಿಂಸೆಯೇ ಅವನಿಗೆ ಮನೋರಂಜನೆ! ಜೊತೆಗೆ ಅವನ ಊಟದ ತಳಿಗೆಯನ್ನು ತುಂಬುವುದಕ್ಕೆ ಪ್ರತಿದಿನವೂ ಪ್ರತಿಕ್ಷಣವೂ ಅವೆಷ್ಟು ನಿಸ್ಸಹಾಯಕ ಮೂಕ ಮುಗ್ಧ ಪ್ರಾಣಿಗಳು ಪ್ರಪಂಚದಾದ್ಯಂತ ಬಲಿಯಾಗುತ್ತಿವೆಯೋ ಏನೋ!

ಮನುಷ್ಯನು ತನಗಾಗಿ, ತನ್ನ ಸುಖಕ್ಕಾಗಿ ಪ್ರಾಣಿಗಳನ್ನು ಬಳಸಿಕೊಳ್ಳುವ ವಿಧಾನಗಳು ಲೆಕ್ಕವಿಲ್ಲದಷ್ಟಿವೆ. ಉಳುಮೆಗೆ, ಹೇರು ಹೊರೆಗಳಿಗೆ, ಸಾರಿಗೆ ಸಂಚಾರಗಳಿಗೆ, ವಿನೋದ ವಿಹಾರಗಳಿಗೆ, ಮನ್ನಣೆ ಮೆರವಣಿಗೆಗಳಿಗೆ, ಗಾಣಕ್ಕೆ, ಗಾಳಕ್ಕೆ, ವೈದ್ಯಕ್ಕೆ, ಖಾದ್ಯಕ್ಕೆ ಎಂದು ಹೀಗೆ ಎಣಿಸುತ್ತ ಹೋಗಬಹುದು. ಇದು ನಿಜವಾಗಿ ಶೋಷಣೆ. ಇದನ್ನು ಅವನು ಪೋಷಣೆಯೆನ್ನಲು ಹೇಸುವುದಿಲ್ಲ. ವೈಜ್ಞಾನಿಕ ವೈದ್ಯಕೀಯ ಪ್ರಯೋಗ ಪರೀಕ್ಷೆಗಳಿಗೆ ಅವನು ಪ್ರಾಣಿಗಳನ್ನು ಗುರಿಮಾಡುವುದೂ ಲೋಕಹಿತದ ದೃಷ್ಟಿಯಿಂದಲೇ! ಪ್ರಾಣಿ ಪ್ರಪಂಚದ ವೈಚಿತ್ರ್ಯಗಳನ್ನು ಗುರುತಿಸಿದ

ಮನುಷ್ಯ, ತನ್ನ ಶೋಧನೆಗಳ ದುರ್ಲಾಭವನ್ನು ಪಡೆದು ತಾನು ಪುಷ್ಟನಾದ, ಬಲಿಷ್ಠನಾದ ; ಪ್ರಾಣಿಗಳು ಮಾತ್ರ ಬಡವಾದುವು, ಬಲಿಯಾದುವು. ಬಹುಶಃ ಪ್ರಾಣಿಗಳ ಬಹು ದೊಡ್ಡ ಶತ್ರು, ಸಹಜ ವೈರದ, ಮತ್ತೊಂದು ಪ್ರಾಣಿಯಲ್ಲ, ಅನಿಮಿತ್ತ ವೈರದ ವಿಕೃತಚಿತ್ತದ ಮಾನವನೇ !

೨

ಸ್ವಾತಂತ್ರ್ಯೋತ್ಸವ

ವಿಶ್ವದ ಒಂದಲ್ಲ ಒಂದು ಮೂಲೆಯಲ್ಲಿ, ಪ್ರತಿಕ್ಷಣವೂ ಏನಾದರೂ ಪ್ರಮಾದ, ಆಕಸ್ಮಿಕ, ಅಪಾಯ ಒದಗುತ್ತಲೇ ಇರುತ್ತದೆ. ಅದು ಒಂದು ಚಿಕ್ಕ ಜಗಳ ಆಗಬಹುದು, ದೊಡ್ಡ ಕಾಳಗ ಆಗಬಹುದು; ಕೆನ್ನೆಗೆ ಹೊಡೆದ ಪೆಟ್ಟಾಗಬಹುದು, ಸಾಮೂಹಿಕ ಕೊಲೆಯಾಗಬಹುದು. ಈಗ ಅನ್ಯಾಯ, ಅನಾಚಾರ, ಹಿಂಸೆ, ಅತ್ಯಾಚಾರ ಇವು ಸಾಮಾನ್ಯ ಸಂಗತಿಗಳು. ಸುಳ್ಳು, ಕಳ್ಳತನ, ವಂಚನೆ, ಶೋಷಣೆ, ಅತಿಕ್ರಮಣ, ಅಪಹರಣ, ಸುಲಿಗೆ, ದರೋಡೆ ಎಂಬವು ಈಗ ದೈನಂದಿನ ವಿದ್ಯಮಾನಗಳು. ಈ ಪಟ್ಟಿಗೆ ಕೊನೆಮೊದಲಿಲ್ಲ. ನಮ್ಮ ಸ್ಮೃತಿಗಳು ಬೆಂಕಿಯಿಡುವವನು, ವಿಷಹಾಕುವವನು, ಕೊಲೆ ಮಾಡುವವನು, ಹಣ ದೋಚುವವನು, ಭೂಮಿ ಅಥವಾ ಸ್ತ್ರೀಯನ್ನು ಅಪಹರಿಸುವವನು, ಹೆಂಡತಿಯನ್ನು ಕದ್ದೊಯ್ಯುವವನು ನೀಚವ್ಯಕ್ತಿಗಳೆಂದು ಹೇಳಿವೆ. ಈಗ ನೀಚತನವೂ ಅದರ ಕಾರ್ಯವಿಧಾನಗಳೂ ಬಹುವಾಗಿ ಹೆಚ್ಚಿವೆ. ಇದು ಕಡುಕಿನ ಪ್ರಗತಿ. ಪುರಾಣ ಕಾಲದ ರಾಕ್ಷಸರು ಈಗ ಮಾನವ ಸ್ವರೂಪದಲ್ಲಿಯೇ ಕಾರ್ಯಪ್ರವೃತ್ತರಾಗಿದ್ದಾರೆ. ಹಿಂದೆ ಕ್ರೂರಿಗಳಾದ ಅರಸರ, ಪಾಳೆಯಗಾರರ, ಸರ್ವಾಧಿಕಾರಿಗಳ ದ್ವೇಷ ರೋಷಗಳ ಫಲವಾಗಿ ವ್ಯವಸ್ಥೆ ನಿಷ್ಠುರವಾಗಿತ್ತು, ಜನಸಾಮಾನ್ಯ ದಾಸ್ಯದ ಹಿಡಿತದಲ್ಲಿ ನರಳುತ್ತಿದ್ದಿತು. ಒಳ ಹೊರಗಿನ ಶತ್ರುಗಳಿಂದ ಕ್ಷೋಭೆ ಹೆಚ್ಚಿ, ದೇಶರಕ್ಷಣೆ ಆತ್ಮರಕ್ಷಣೆಗೆ ಉಗ್ರವಾದ ಹಿಂಸಾತ್ಮಕ ವಿಧಾನಗಳು ಅನಿವಾರ್ಯವೆನ್ನುವಂತಾಗಿದ್ದುವು. ಬಹುದೂರದ ಪ್ರಾಚೀನ ಇತಿಹಾಸ ಕಾಲಕ್ಕಿಂತ ಮಧ್ಯಕಾಲೀನ ವಿಶ್ವದ ಸ್ಥಿತಿಗತಿಗಳು ರಾಜಸತ್ತೆ, ಜಮೀನ್ದಾರಿ ದಬ್ಬಾಳಿಕೆ, ಭೋಗೋನ್ಮಾದದ ಬದುಕಿನಿಂದ ಜನ ಸಾಮಾನ್ಯರಿಗೆ ದುರ್ಭರವಾಗಿತ್ತು ಎನ್ನಬೇಕು.

ಈಗ ಪರಿಸ್ಥಿತಿ ಬದಲಾಗಿದೆ ಎನ್ನುತ್ತಾರೆ. ಈ ಕಾಲ ವಿಶ್ವದಾದ್ಯಂತ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ತಂಗಾಳಿಗೆ ಮೈಯೊಡ್ಡಿ ಜನ ಸುಖಿಸುತ್ತಿರುವ ಕಾಲ ಎನ್ನುತ್ತಾರೆ. ವೈಚಾರಿಕ ವೈಜ್ಞಾನಿಕ ಪ್ರಗತಿಯಿಂದ ಹೊಸ ಭಾವನೆಗಳೂ ಭರವಸೆಗಳೂ ಬೆಳೆಯುತ್ತಿರುವ ಈ ಕಾಲದಲ್ಲಿ ಬದುಕು ಸುಧಾರಿಸಿದೆಯೇ, ಸಮೃದ್ಧಿ ಸುಭಿಕ್ಷೆಗಳು ನೆಲಸಿವೆಯೇ? ಪರಸ್ಪರ ಸಹಕಾರ ಸಹ

ಬಾಳ್ವೆಗಳು ಸಾಧ್ಯವಾಗಿದೆಯೇ? ರಾಜಕೀಯಾದಿ ಸ್ವಾತಂತ್ರ್ಯ ತರಬೇಕಾದ ನೆಮ್ಮದಿ ಸುಭಿಕ್ಷೆಗಳನ್ನು ತಾರದೆ, ಅಶಾಂತಿ ಹಿಂಸೆಗಳನ್ನೇ ಏಕೆ ತರುತ್ತಿವೆ? ಶಾಂತಿಯ ತಲೆಯ ಮೇಲೆ ಕಾಳಗದ ಕತ್ತಿ ಸದಾ ತೂಗುತ್ತಿರುವುದು ಏಕೆ? ಅಣುಸಂಗ್ರಾಮ ಮೂಲಕವಾದ ಭೀಕರ ವಿಶ್ವನಾಶದ ಹೆಡೆನೆರಳಲ್ಲಿ ಸಮಸ್ತ ವಿಶ್ವವೂ ಕಪ್ಪೆಯಂತೆ ಹೆದರಿ ಹದುಗಿಕೊಂಡಿರುವುದೇಕೆ?

ನಮ್ಮ ಪರಿಸ್ಥಿತಿಯನ್ನೇ ಗಮನಿಸೋಣ. ಪರರ ದಾಸ್ಯದಿಂದ ಸಮುದಾಯ ಬಿಡುಗಡೆಗೆ ಬಂದಿದೆ. ಆರ್ಥಿಕವಾಗಿ ಪರಾವಲಂಬನೆ ತಗ್ಗಿದೆ. ವ್ಯಕ್ತಿಗಳ ನಡುವಣ ಮೇಲು ಕೀಳುಗಳ ಭಾವನೆ ತೊಡೆದುಹೋಗುವ ಹಾದಿಯಲ್ಲಿದೆ. ಆದರೆ ನಾವು ಪಡೆದಿರುವ ಸ್ವಾತಂತ್ರ್ಯ ನಮ್ಮ ಸ್ವಾರ್ಥದ ಹಾಗೂ ಭೋಗಭಾಗ್ಯಗಳ ಪೂರೈಕೆಗೆಂದು ನಮಗೆ ಸಿಕ್ಕಿರುವ ರಹದಾರಿ ಎಂದು ಬಹುಶಃ ನಾವು ತಿಳಿದಿದ್ದೇವೆ. ನಮಗೆ, ನಮ್ಮ ಮಕ್ಕಳಿಗೆ, ಕುಟುಂಬದವರಿಗೆ, ಜಾತಿಯವರಿಗೆ, ಪಕ್ಷದವರಿಗೆ, ಪ್ರಾಂತದವರಿಗೆ ಅನುಭವಿಸಲಿರುವ ಹಕ್ಕುದಾರಿಕೆಯ ಆಸ್ತಿ ಎಂದು ನಮ್ಮಲ್ಲಿ ಕೆಲವರು ತಿಳಿದಿದ್ದೇವೆ. ಸ್ವಾತಂತ್ರ್ಯದ ಫಲ ಪ್ರಯೋಜನಗಳು ಸರ್ವರ ಹಕ್ಕು, ಸರ್ವರೂ ಅದಕ್ಕೆ ಬಾಧ್ಯರು ಎನ್ನುವುದನ್ನು ಮರೆತಿದ್ದೇವೆ. ಸಾಮಾನ್ಯ ಪ್ರಜಾನೀತಿ ಹಾಗೂ ಜೀವನಮೌಲ್ಯಗಳನ್ನು ಗಾಳಿಗೆ ತೂರಿ ಆತ್ಮಘಾತ ಪರಘಾತಗಳನ್ನು ಆಹ್ವಾನಿಸುತ್ತಿದ್ದೇವೆ. ಪರಸ್ಪರರು ಸದ್ಭಾವನೆಗಳನ್ನು ಬೆಳೆಸಿಕೊಳ್ಳುವುದು, ಅರ್ಹತೆಯನ್ನು ಗುರುತಿಸಿ ಗೌರವಿಸುವುದು, ಸಾಧನೆ ಸಂಪತ್ತುಗಳನ್ನು ಸ್ವಂತ ಪರಿಶ್ರಮದಿಂದ ಪಡೆದುಕೊಳ್ಳುವುದು, ಆಹಾರ ವಿಹಾರಗಳಲ್ಲಿ ಆಚಾರ ವಿಚಾರಗಳಲ್ಲಿ ಸಾತ್ತ್ವಿಕತೆ ಮತ್ತು ಸಂಯಮಗಳನ್ನು ಸಾಧಿಸುವುದು, ಶೋಷಣೆ ದೂಷಣೆಗಳಿಗೆ ಯಾರನ್ನೂ ಒಳಗುಮಾಡದಿರುವುದು, ನಾವು ಒಳಗಾಗದಿರುವುದು ಹಾಗೂ ವಿದ್ಯೆಯ ಬಲದಿಂದ ಆತ್ಮವಿಶ್ವಾಸವನ್ನೂ ಆತ್ಮಾವಲಂಬನೆಯನ್ನೂ ಗಳಿಸುವುದು ಇವೆಲ್ಲ ಸಾಮಾನ್ಯ ಪ್ರಜಾನೀತಿಯ ಅವಶ್ಯ ಲಕ್ಷಣಗಳಾಗಿವೆ. ಈ ಲಕ್ಷಣಗಳಿಗೆ ಪ್ರೇರಣೆ ದೊರೆಯುವಂತೆ ಮಾಡುವುದೇ ಶಾಶ್ವತವಾದ ಜೀವನ ಮೌಲ್ಯಗಳ ಕಾರ್ಯ ಪರಸ್ಪರ ಪ್ರೇಮ, ಭ್ರಾತೃತ್ವ, ಸತ್ಯ, ಅಹಿಂಸೆ, ಸೌಜನ್ಯ ಈ ಚಿರಮೌಲ್ಯಗಳಿಗೆ ಎಂದೂ ಅಪಮೌಲ್ಯವಾಗದ ಹಾಗೆ ನಾವು ನೋಡಿಕೊಳ್ಳಬೇಕು. ಪುಣ್ಯಾರ್ಜನೆಯ ಆಸಕ್ತಿ, ಪಾಪಭೀರುತ್ವ ಇವು ನಮ್ಮಲ್ಲಿ ಆಳವಾಗಿ ಬೇರೂರಿದರೆ ಮಾತ್ರ ಇದು ಸಾಧ್ಯ.

ನಾವು ಭಾಷೆ, ದೇಶ, ಜಾತಿ, ಮತಗಳ ಹೆಸರಿನಲ್ಲಿ ಸಾಮಾನ್ಯ ಪ್ರಜಾನೀತಿಗೂ ಜೀವನಮೌಲ್ಯಗಳಿಗೂ ಭಂಗಬಾರದ ಹಾಗೆ ನೋಡಿಕೊಳ್ಳಬೇಕು. ಶಾಂತಿಯ ಹೆಸರಿನಲ್ಲಿ ಯುದ್ಧದ ಸಿದ್ಧತೆ, ದೇಶಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧನೆ, ಜಾತಿವಿನಾಶದ ಹೆಸರಿನಲ್ಲಿ ಜಾತೀಯ ಸವಲತ್ತುಗಳ ಗಳಿಕೆಯ ಯತ್ನ, ಭಾಷಾಪ್ರೇಮದ ಹೆಸರಿನಲ್ಲಿ ಭಾಷಾಂಧತೆ ಎಂಬ ಈ ವೈಪರೀತ್ಯಗಳು ನಿಲ್ಲಬೇಕು. ನಮ್ಮ ಮಾತು ವರ್ತನೆಗಳಲ್ಲಿ

ದ್ವಂದ್ವ ತೊಲಗಿ ಸಹಾನುಭೂತಿ, ಸಹಕಾರ, ಸಹಬಾಳ್ವೆ ಇವು ಮುಪ್ಪುರಿಗೊಂಡರೆ ಮಾತ್ರ ನಮ್ಮ ಶ್ರೇಯಸ್ಸು ಸಾಧ್ಯ, ಇಲ್ಲವೆ ವಿನಾಶ ಖಚಿತ. ವಿಶ್ವದ ಇಂದಿನ ಗತಿಯಲ್ಲಿ ಇವು ಬಾಯಿಉಪಚಾರದ ಮಾತುಗಳಾಗಿವೆಯೇ ಹೊರತು, ಕರ್ತವ್ಯ ಕರ್ಮವಾಗಿಲ್ಲ ಎನ್ನುವುದು ದುಃಖದ ಸಂಗತಿ.

೩

ಸರಸ್ವತಿ

ಮಾತೃದೇವತಾಪೂಜೆ ವಿಶ್ವದ ಪುರಾತನ ಸಂಸ್ಕೃತಿಗಳಲ್ಲೆಲ್ಲ ಕಂಡುಬಂದಿದೆ. ಪ್ರಾಚೀನ ದೇವತೆ ಸರಸ್ವತಿ. ಈಕೆಯ ಪೂಜೆ ನಮ್ಮ ದೇಶದಲ್ಲಿ ಬಹು ಪ್ರಾಚೀನ ವಾದುದು. ಋಗ್ವೇದದಲ್ಲಿ ಈ ದೇವತೆಯನ್ನು ಕುರಿತ ಸ್ತೋತ್ರಗಳಿವೆ. ವಾಗ್ದೇವಿ ಯಾದ ಸರಸ್ವತಿ ತನ್ನ ಆಪ್ತ ದೇವತೆಗಳೊಂದಿಗೆ ಬಂದು ಆಕೆಗಾಗಿ ಹಾಕಿರುವ ಆಸನದಲ್ಲಿ ವಿರಾಜಿಸಲಿ ಎಂದೂ ವಾಗ್ವೈಭವಕ್ಕೂ ಬುದ್ಧಿಗೂ ಅಭಿಮಾನಿದೇವತೆ ಯಾದ ಆಕೆ 'ಸೂನೃತ'ಗಳಿಗೆ ಚೋದಯಿತ್ರಿಯೂ 'ಸುಮತಿ'ಗಳಿಗೆ ಚೇತನ ದಾಯಿನಿಯೂ ಆಗಿರುವಳೆಂದೂ ಅಲ್ಲಿ ಹೇಳಿದೆ. ಜಡವಾದ ಶಬ್ದರಾಶಿಗೆ ಅಭಿಮಾನಿ ದೇವತೆಯೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಗುರುತಿಸಿ 'ವಾಕ್' ನಾಮಧೇಯದ ಈಕೆ ಧರಾದಿಗಳಿಗಿಂತ ಉತ್ತಮ ದೇವತೆಯೆಂದು ಕೀರ್ತಿಸಿದೆ ; ಅಲ್ಲದೆ ಪ್ರಾಣದೇವತೆ ಯೊಂದಿಗೆ ಕೂಡಿ ವೀಣಾಗಾನದಿಂದ ಪರಮಾತ್ಮನನ್ನು ಸ್ತುತಿಸುವಳೆಂದಿದೆ.

ನಮಗೆ ಸುಪರಿಚಿತೆಯಾಗಿರುವ ಸರಸ್ವತಿ ಪುರಾಣಕವಿದರ್ಶಿತೆಯಾದವಳು. ಆಕೆ ಜ್ಞಾನಸ್ವರೂಪಿಣಿ, ವಿದ್ಯಾಭಿಮಾನಿ ದೇವತೆ. ಬ್ರಹ್ಮವೈವಸ್ವತ ಪುರಾಣವು ಆಕೆಯ ಸ್ವರೂಪವನ್ನು ಹೀಗೆ ವರ್ಣಿಸಿದೆ :

> ಆವಿರ್ಬಭೂವ ತತ್ಪಶ್ಚಾತ್ ಮುಖತಃ ಪರಮಾತ್ಮನಃ
> ಏಷಾ ದೇವೀ ಶುಕ್ಲವರ್ಣಾ ವೀಣಾಪುಸ್ತಕಧಾರಿಣೀ ॥
> ವಾಗಧಿಷ್ಠಾತೃದೇವೀ ಸಾ ಕವೀನಾಮಿಷ್ಟದೇವತಾ
> ಶುದ್ಧಸತ್ತ್ವಸ್ವರೂಪಾ ಚ ಶಾಂತರೂಪಾ ಸರಸ್ವತೀ ॥

ಸರಸ್ವತಿ ಬ್ರಹ್ಮನ ಮಗಳೆಂದೂ ಆತನ ಮುಖದಿಂದ ಹುಟ್ಟಿದವಳೆಂದೂ ಆಕೆಯ ಸೌಂದರ್ಯದಿಂದ ಮುಗ್ಧನಾದ ಆತನೇ ಅವಳನ್ನು ವರಿಸಿದನೆಂದೂ ನಿರೂಪಿಸುವ ಪದ್ಮಪುರಾಣದ ನಿರೂಪಣೆ, ವೇದಗಳು ಬ್ರಹ್ಮನ ಮುಖದಿಂದ ಹೊರಟವೆಂಬ, ವೇದಗಳು ಸಮಸ್ತ ವಿದ್ಯಾಪ್ರತೀಕವೆಂಬುದರಿಂದ ಆತನೇ ವೇದಪುರುಷ ನೆಂಬ, ಸಾರತತ್ವವೊಂದರ ಮಧುರ ಕಾವ್ಯಕಲ್ಪನೆಯೆಂದು ತೋರುತ್ತದೆ. ಈ

ಕಲ್ಪನೆಯೇ, ಸರ್ವಜ್ಞನಾದ ಅರ್ಹಂತನ ವಾಣಿಯೇ ಸರಸ್ವತಿಯೆಂಬ ಜೈನಧರ್ಮದ ಶ್ರದ್ಧೆಗೆ ಮೂಲವಾಗಿರಲೂಬಹುದು. "ಸರಃ ಪ್ರಸರಣಂ ಅಸ್ತಿ ಅಸ್ಯಾಃ" ಎಂಬುದಾಗಿ 'ಸರಸ್ವತಿ' ಶಬ್ದಕ್ಕೆ ಕೋಶಕಾರರು ನಿರ್ವಚನ ಮಾಡುವುದರಿಂದ, ಜ್ಞಾನ ಮತ್ತು ವಾಕ್ಕುಗಳ ಪ್ರಸರಣಕ್ಕೆ ಕಾರಣವಾದ ಪರತತ್ತ್ವವನ್ನೇ ಅದು ಸೂಚಿಸುತ್ತದೆ ಎಂದು ತಿಳಿಯಲಾಗಿದೆ.

ಇನ್ನು ಸರಸ್ವತಿಯ ಸ್ತೋತ್ರಗಳಲ್ಲಿ ಪ್ರಸಿದ್ಧವಾದ

ಯಾ ಕುಂದೇಂದು ತುಷಾರಹಾರಧವಲಾ ಯಾ ಶುಭ್ರವಸ್ತ್ರಾನ್ವಿತಾ
ಯಾ ವೀಣಾವರದಂಡಮಂಡಿತಕರಾ ಯಾ ಶ್ವೇತಪದ್ಮಾಸನಾ
ಯಾ ಬ್ರಹ್ಮಾಚ್ಯುತಶಂಕರ ಪ್ರಭೃತಿಭಿಃ ದೇವೈಸ್ಸದಾ ಪೂಜಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ॥

ಎಂಬುದರಲ್ಲಿ ಮಲ್ಲಿಗೆ ಚಂದ್ರ ಮಂಜು ಮತ್ತು ಮುತ್ತಿನ ಹಾರದಂತೆ ಬೆಳ್ಳಗಿರುವ ಆಕೆ, ಶುಭ್ರವಸ್ತ್ರಧಾರಿಣಿಯೂ ವೀಣಾಪಾಣಿಯೂ ಶ್ವೇತಪದ್ಮಾಸನಸ್ಥೆಯೂ ಆದ ಆಕೆ, ಬ್ರಹ್ಮಾಚ್ಯುತಶಂಕರಾದ್ಯರಿಂದ ಪೂಜಿತಳಾಗುವ ಆಕೆ, ನನ್ನ ಅಜ್ಞಾನವನ್ನು ತೊಲಗಿಸಲಿ ಎಂದು ಪ್ರಾರ್ಥಿಸುವಾಗ ಜ್ಞಾನ ವಿವೇಕಗಳ ಸರ್ವಾಧಿಕ್ಯವನ್ನೇ ಸಾರಿದಂತಾಗಿದೆ.

ನವರಾತ್ರಿಯ ಪೂಜಾವಿಧಿಯ ಅಂಗವಾಗಿ ಸರಸ್ವತೀಪೂಜೆಯೂ ನಡೆಯುವುದು ಪದ್ಧತಿ. ನವರಾತ್ರಿಯಲ್ಲಿ ಸಾಮಾನ್ಯವಾಗಿ ಸಪ್ತಮಿಯಂದು ಮೂಲಾನಕ್ಷತ್ರದಲ್ಲಿ ದೇವಿಯನ್ನು ಮಹಾಸರಸ್ವತೀ ರೂಪವಾಗಿ ಆವಾಹಿಸಿ ಪುಸ್ತಕಮಂಡಲದಲ್ಲಿ ಸ್ಥಾಪಿಸಿ, ಪೂರ್ವಾಷಾಢದಲ್ಲಿ ಪೂಜಿಸಿ, ಉತ್ತರಾಷಾಢದಲ್ಲಿ ನೈವೇದ್ಯವೊಪ್ಪಿಸಿ, ಶ್ರವಣದಲ್ಲಿ ಉದ್ವಾಸನೆ ಮಾಡುವುದು ಸಂಪ್ರದಾಯವಾಗಿದೆ. ನವರಾತ್ರಿಯು ಮೂರು ಉಪ ವಿಭಾಗಗಳಾಗಿ ವಿಭಜನೆಗೊಂಡು, ದೇವಿಯು ಕ್ರಮವಾಗಿ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯ ರೂಪದಲ್ಲಿ ಪೂಜೆಗೊಳ್ಳುತ್ತಾಳೆ. ದೇವಿಯು ಹೀಗೆ ಶೈವ, ವೈಷ್ಣವೀ ಮತ್ತು ಬ್ರಾಹ್ಮೀ ಶಕ್ತಿಗಳಲ್ಲಿ ವಿರಾಜಿಸುವಳೆಂದು ಇದು ಸೂಚಿಸುತ್ತದೆ. ಚಿತ್ತಶುದ್ಧಿಯನ್ನಿತ್ತು ಮೇಧಾಶಕ್ತಿಯನ್ನು ತೀಕ್ಷ್ಣಗೊಳಿಸಿ, ಮುಕ್ತಿಯ ಅನುಭವದತ್ತ ಸರಸ್ವತಿ ಕೊಂಡೊಯ್ಯಲಿ ಎನ್ನುವುದು ಈ ಪೂಜೆಯ ಆಶಯ. ಸ್ಥಾಪನೆ ಉದ್ವಾಸನಗಳ ನಡುವೆ ಪುಸ್ತಕಾಧ್ಯಯನ ಅಧ್ಯಾಪನಗಳನ್ನು ಮಾಡಬಾರದೆಂದು ಹೇಳುತ್ತಾರೆ. ಸಂಪ್ರದಾಯದ ವಿಧಿಗಳು ಏನೇ ಇದ್ದರೂ, ಲೌಕಿಕ ಪಾರಮಾರ್ಥಿಕ ಎರಡು ರೀತಿಯ ವಿದ್ಯೆಗಳಿಗೂ ಸರಸ್ವತಿಯ ಉಪಾಸನೆಯನ್ನು ಜ್ಞಾನಭಿಕ್ಷುಗಳು ತಪ್ಪದೆ ಮಾಡಬೇಕಾಗಿದೆ; ಆಕೆ ಒಲಿದಲ್ಲದೆ ಭ್ರಮೆಯು, ಮಾಯೆಯು, ಮೋಹದ, ಅಜ್ಞಾನ ಅವಿವೇಕಗಳ ಕಣ್ಪರೆ ಹರಿಯುವುದಿಲ್ಲ ಎನ್ನುವುದಂತೂ ನಿಶ್ಚಯವೇ ಇದೆ.

ಯು. ಎಸ್. ರಾಮಣ್ಣ

ಕೆಳದಿ ಭದ್ರಪ್ಪನಾಯಕನ ಕಾಸರವಳ್ಳಿ ಶಾಸನ

ನಾನು ಭೌತಿಕ ಜಾನಪದಕ್ಕೆ ಸಂಬಂಧಿಸಿದಂತೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದಾಗ ಕಾಸರವಳ್ಳಿಯಲ್ಲಿ ಅಪ್ರಕಟಿತ ಶಾಸನವೊಂದು ದೊರೆಯಿತು. ಕಾಸರವಳ್ಳಿಯು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ಸುಮಾರು 40 ಕಿ.ಮೀ. ಅಂತರದಲ್ಲಿದೆ. ಪ್ರಸ್ತುತ ತಾಮ್ರ ಶಾಸನ ಕಾಸರವಳ್ಳಿಯ ಶ್ರೀ ಕೆ. ನಾಗಪ್ಪಯ್ಯ ಎಂಬುವರ ಮನೆಯಲ್ಲಿ ದೊರೆಯಿತು. ಈಗ ಅದು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತುಸಂಗ್ರಹಾಲಯದಲ್ಲಿದೆ. ಶಾಸನದ ಉದ್ದ 12·4″, ಅಗಲ 8·6″, ತೂಕ 1·3 ಕಿ.ಗ್ರಾಂ. ಶಾಸನ ಸುಸ್ಥಿತಿಯಲ್ಲಿದೆ. ಬರಹ ಚೆನ್ನಾಗಿದೆ. ಕನ್ನಡ ಭಾಷೆಯಲ್ಲಿದೆ. ಶಾಸನದ ಕಡೆಯಲ್ಲಿ ಶ್ರೀ ಸದಾಶಿವ ಎಂಬ ಅಂಕಿತವಿದೆ.

ಶಾಸನ ಕಾಲ : ಆರಂಭದ ಮಂಗಳ ಪದ್ಯದ ತರುವಾಯ "ಜಯಾಭ್ಯುದಯ ಶಾಲಿವಾಹನ ಶಕವರುಷ ೧೫೮೪ನೆಯ ಪ್ಲವಸಂವತ್ಸರ ಮಾರ್ಗಶಿರ ಶು ೫ಲೂ" ಎಂದಿರುವುದರಿಂದ ಈ ಶಾಸನದ ಕಾಲ ಕ್ರಿ.ಶ. 16–11–1661 ಎಂದು ಖಚಿತವಾಗಿ ತಿಳಿಯುತ್ತದೆ. ಇಲ್ಲಿ ಶಾಸನಕಾರ ಶಾಲಿವಾಹನಶಕವರ್ಷ ಚಾಲ್ತಿಯಲ್ಲಿರುವುದನ್ನೆ ತೆಗೆದುಕೊಂಡಿರುವುದು ಗಮನಾರ್ಹ. ಅಂತೆಯೆ ಇದು ಭದ್ರಪ್ಪನಾಯಕನು ಅಧಿಕಾರಕ್ಕೆ ಬಂದ ತಾರುಣ್ಯದಲ್ಲಿಯೆ ಹಾಕಿಸಿದ ಶಾಸನವಾಗಿದೆ.

ಚರಿತ್ರೆ : ಕರ್ಣಾಟಕದ ಪ್ರಸಿದ್ಧ ಸಾಮಂತ ಮನೆತನಗಳಲ್ಲಿ ಕೆಳದಿಯೂ ಒಂದು. ಕ್ರಿ.ಶ. 1500ರಿಂದ 1763ರ ವರೆಗೆ ಸುಮಾರು 263 ವರ್ಷಗಳ ಕಾಲ ಆಳಿದ ಈ ಮನೆತನದ ಮೊದಲ ದೊರೆ ಚೌಡಪ್ಪನಾಯಕ. ಈತನಿಂದ ಆರಂಭವಾಗಿ ಸೋಮಶೇಖರನಾಯಕನವರೆಗೆ 18 ಮಂದಿ ರಾಜರು ಈ ಮನೆತನದಲ್ಲಿ ಆಗಿ ಹೋಗಿದ್ದಾರೆ. ಇವರು ವಿಜಯನಗರದ ಅರಸರಿಗೆ ಸಾಮಂತರಾಗಿದ್ದರು. ಕೆಳದಿಯೇ ಅಲ್ಲದೆ ಇಕ್ಕೇರಿ ಬಿದನೂರುಗಳೂ ಇವರ ರಾಜಧಾನಿಗಳಾಗಿದ್ದವು. ಪ್ರಸ್ತುತ ಶಾಸನ ಬಿದನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಭದ್ರಪ್ಪನಾಯಕನಿಗೆ ಸಂಬಂಧಿಸಿದೆ. ಭದ್ರಪ್ಪನಾಯಕನು ಕ್ರಿ.ಶ. 1662ರಲ್ಲಿ ಸಿಂಹಾಸನವೇರಿದನು. ಶಾಸನದಲ್ಲಿ

ಈತನ ತಂದೆ ಶಿವಪ್ಪನಾಯಕ, ತಾತ ಸಿದ್ಧಪ್ಪನಾಯಕ, ಮುತ್ತಾತ ಚಿಕ್ಕಸಂಕಣ್ಣ ನಾಯಕರ ಉಲ್ಲೇಖಗಳಿವೆ. ಭದ್ರಪ್ಪನಾಯಕನು ಕ್ರಿ.ಶ. 1664ರ ವರೆಗೆ ಅಂದರೆ 2 ವರ್ಷ 5 ತಿಂಗಳು 24 ದಿನ ರಾಜ್ಯವಾಳಿದನು.* "ಎಡವ ಮುರಾರಿ ಕೋಟೆ ಕೋಳಾಹಳ ವಿಶುದ್ಧ ವೈದಿಕಾದ್ವೈತಸಿದ್ಧಾಂತ ಪ್ರತಿಷ್ಠಾಪಕ" ಎಂಬಿವು ಈತನ ಬಿರುದುಗಳು. ಈತ ತನ್ನ ಅಧಿಕಾರಾವಧಿಯಲ್ಲಿ ಹೆಬ್ಬಾಳೆ ಕೋಟೆಯಲ್ಲಿ ನೆಲಸಿದ್ದ ಶತ್ರುಗಳ ಮುತ್ತಿಗೆ ತೆಗೆಸಿದನು, ಕಳಲೆ ಕಾಂತಯ್ಯನ ಸೇನೆಯನ್ನು ಹಿಮ್ಮೆಟ್ಟಿಸಿದನು, ಸೋದೆ ಅರಸರ ಗರ್ವಭಂಗ ಮಾಡಿದನು. ಬಿಜಾಪುರದ ಬಾದಷಾಹನ ಸೈನ್ಯವನ್ನು ಸಂಧಾನದ ಮೂಲಕ ಹಿಂದೆಗೆಸಿದ್ದನು ಎಂದು ಕೆಳದಿನೃಪವಿಜಯದಿಂದ ತಿಳಿದು ಬರುತ್ತದೆ.

ಭದ್ರಪ್ಪನಾಯಕ ಕೊಡುಗೈ ದಾನಿಯಾಗಿದ್ದನು. ತೀರ್ಥಹಳ್ಳಿಯ ತುಂಗಾ ತೀರದಲ್ಲಿ ಬ್ರಾಹ್ಮಣರಿಗೆ ಬಹು ದಾನಗಳನ್ನು ನೀಡಿದ್ದನು. ಭದ್ರರಾಜಪುರ, ಶಿವರಾಜ ಪುರ, ವೆಂಕಟಪುರ ಎಂಬ ಅಗ್ರಹಾರಗಳನ್ನು ತನ್ನ ಹಾಗೂ ತನ್ನ ಪೂರ್ವಿಕರ ಹೆಸರಿನಲ್ಲಿ ನಿರ್ಮಿಸಿದ್ದನು. ಅನೇಕ ಮಠಗಳನ್ನು ಕಟ್ಟಿಸಿದ್ದನು. ಮುಳಬಾಗಿಲು ಕೃಷ್ಣಾನಂದ ಮಠಕ್ಕೆ ಹೇರಳವಾದ ಭೂಮಿಯನ್ನು ದಾನವಾಗಿತ್ತನು.

ಶಾಸನ ವಿಷಯ: ಪ್ರಸ್ತುತ ಶಾಸನ ಭದ್ರಪ್ಪನಾಯಕನು ತನ್ನ ತಂದೆ ಶಿವಪ್ಪನಾಯಕನ ಪ್ರಥಮ ಪುಣ್ಯತಿಥಿಯಂದು ಬಿದರೂರಿನ ವಿಠಲದೇವ ಮತ್ತು ನೀಲಕಂಠದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಈ ದೇವಾಲಯಗಳಲ್ಲಿ ಅಮೃತ ಪಡಿ, ನಂದಾದೀವಿಗೆ, ಪಂಚಪರ್ವ ಮೊದಲಾದ ದೇವತಾಕಾರ್ಯಗಳನ್ನು ಸಾಂಗವಾಗಿ ನೆರವೇರಿಸಿಕೊಂಡು ಹೋಗುವಂತೆ ನಾಗದೇವಭಟ್ಟನ ಮಗ ವೆಂಕಟಾದ್ರಿಭಟ್ಟನಿಗೆ ದಾನ ನೀಡಿದನು. ಶಾಸನದಲ್ಲಿ ದಾನವಾಗಿ ಕೊಟ್ಟ ಭೂಮಿಯ ವಿವರಗಳಿವೆ.

ಶಾಸನ ಪಾಠ :

1 ೦॥ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ
2 ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀ
3 ಜಯಾಭ್ಯುದಯ ಶಾಲಿವಾಹನ ಶಕವರುಷ ೧೫೮೪ನೆಯ
4 ಪ್ಲವಸಂವತ್ಸರದ ಮಾರ್ಗಶಿರ ಶು ೫ಲೂ ಶ್ರೀಮದ್ಬಿದಿರೂರ ವಿ
5 ಠಲದೇವರ ದೇವತ್ತಾವೆಚ್ಚಕ್ಕೆ ಶ್ರೀಮದೆಡವಮುರಾರಿ ಕೋಟೆ ಕೋ
6 ಳಾಹಳ ವಿಶುದ್ಧ ವೈದಿಕಾದ್ವೈತಸಿದ್ಧಾಂತ ಪ್ರತಿಷ್ಠಾಪಕ ಶಿವಗು
7 ರು ಭಕ್ತಿಪರಾಯಣರಾದ ಕೆಳದಿ ಸಂಕಂಣನಾಯಕರ ಪ್ರಪೌ
8 ತ್ರರು ಸಿದ್ದಪ್ಪನಾಯಕರ ಪೌತ್ರರು ಶಿವಪ್ಪನಾಯಕರ ಪುತ್ರರಾದ
9 ಭದ್ರಪ್ಪನಾಯಕರೂ ಕೊಟ್ಟ ಧರ್ಮಶಾಸನದ ಕ್ರಮವೆಂತೆಂದರೆ ಮು

---

* ಕೆಳದಿನೃಪವಿಜಯ : ಪು. ೧೧೦

10 ಂನಿನಾಥ ಸೀಮೆಯೊಳಗಣ ಮಳಲಿ ಕಾಡಗೆರಿ ಗ್ರಾಮದ ಕಾಲುವಳ್ಳಿ। ಹಾಲ
11 ಗದ್ದೆಯಿಂದ ಸಿದ್ಧಾಯ ಗ ೧೨೮೮॥ ಬರಾಡ ಗ ೯ ॥೪॥।೦
ಭತ್ತ ಖ ೫೯।
12 ಕೆ ಗ ೮ ಹ ೪॥। ಅಂತು ಗ ೩೦॥ ೪ ಡೊಂಗಬದಿ ಭತ ಖ ೧೫
ಕೆ ಗ ೨ ಹ ೧
13 ॥ವುಭಯಂ ಗ ೩೩ ಹ॥ ಕೆ ವುತ್ತಾರ ದೇವತಾ ಉತ್ತಾರ। ಬಿದಿರೂ
14 ರ ನೀಲಕಂಠದೇವರಿಗೆ ಭತ ಖ ೧೫ ಕೆ ಗ ೨ ಹ ೧॥ ವು ಕಗ ॥೨॥ ವುಭ
15 ಯಂ ಗ ೨ ॥೪ನೇ ಶುಧ ಗ ೩೦ ಹ ೧॥ ಮೂವತ್ತು ವರಹನ್ನೂ ಹ
16 ಣವಡದ ಭೂಮೀನು ದೇವರ ಅಮ್ರುತಪಡಿ ನಂದಾದೀಪ್ತಿ
17 ಪಂಚಪರ್ವ ಮುಂತಾದ ಕಟಲೆ ಕಂದಾಚಾರಕೆ ಸಹ ಪಾ್ರ
18 ಕು ಆಶ್ವೀಜ ಶು ೧ವೂ ಸ್ಥಿರವಾರ ನಂಮ ತಂದೆಗಳಾ
19 ದಾ ಶಿವಪ್ಪನಾಯಕ ಅಯ್ಯನವರ ಪ್ರಥಮಾ
20 ಬ್ದಿಕ ಪುಂಣ್ಯಕಾಲದಲೂ ಶಿವಾರ್ಪಿತವಾಗಿ ಬಿಟ್ಟೆವಾಗಿ ಈ ಭೂ
21 ಮಿಗೆ ಸಲುವ ಚತುರ್ಗಡಿವಿವರ ಮೂಡಲು ಹಾಗಲ ಮಡಿಕೆಯ
22 ವರಪಾಲಯಿಟ್ಟಿಗನ ಹಾದಿಯೆ ಗಡಿ। ಪಡುವಲು ಹುಲಿ ಮಂ
23 ದಾಸಿನ ತೆಳಗಣ ಕಂಚಿನ ಕಲ್ಲ ಅಬ್ಬಿಯೆ ಗಡಿ ತೆಂಕಲು ಕೆ ಶು
24 ಗ ದೆಯ ಅಡಿಗಟ್ಟು ಹಾನಂಬಿ ಕುರುಣೆಮಕ್ಕಿಯೆ ಗಡಿ
[೬]
25 ಬಿಡಗಲು ಹೆರಕಟ್ಟನ ನೀರೆರಕಲು ನೆಲನಂಚುದಾರಿಯೆ ಗಡಿ ಹಾಗೆ
26 ಅಂದಗೌಡ ಹೆರಕಟ್ಟನ ಪಾಲಹೊಂಮುಡಿ ತೋಟದ ಸಂಪಿಗೆ ಮರನ
27 ಲ್ಲಿ ನೆಟ್ಟಕಲ್ಲ ಮುಂದಣ ಭೋಗಿಮರನೆ ಗಡಿ। ಯಿಂತೀ ಚತುರ್ಗಡಿ ವ
28 ಳಗಾದ ಭೂಮಿಗೆ ಸಲುವ ಸರ್ವ್ವಸ್ವಾಮ್ಯವನೂ ಪೂರ್ವಮರಿಯಾ
29 ದೆಯಲಿ ಆಗುಮಾಡಿಕೊಂಡು ಸ್ಥಾನಿಕ ನಾಗದೇವಭಟ್ಟನ ಮ
30 ಗ ವೆಂಕಟಾದ್ರಿಭಟ್ಟನ ಮುಖಾಂತ್ರ ದೇವತಾಸೇವೆ ನಡಯೆಬಾ
31 ಹ ರೀತಿಗೆ ಶಿವಾರ್ಪಿತವಾಗಿ ಬಿಟ್ಟೆವೆಂದು ಕೊಟ್ಟ ಧರ್ಮಶಾಸನ !
32 ಯಿದಕೆ ಸಾಕ್ಷಿ ಆದಿತ್ಯಚಂದ್ರಾವನಿಲೋನಲಶ್ಚದ್ಯೌರ್ಭೂ
33 ಮಿರಾಪೋ ಹ್ರುದಯಂ ಯಮಶ್ಚ ಅಹಶ್ಚ ರಾತ್ರಿಶ್ಚವುಭೇ
34 ಚ ಸಂಧ್ಯೇ ಧರ್ಮಶ್ಚಜಾನಾತಿ ನರಸ್ಯವೃತಂ। ದಾನಪಾಲನ
35 ಯೋರ್ಮಧ್ಯೇ ದಾನಾಛ್ರೇಯೋನುಪಾಲನಂ ದಾನಾತ್ಸ್ವರ್ಗ
36 ಮವಾಪ್ನೋತಿ ಪಾಲನಾದಚ್ಯುತಂ ಪದಂ। ಶ್ರೀ ಸ
37 ದಾಶಿವ*

* ಈ ಶಾಸನಪಾಠವನ್ನು ಓದುವಲ್ಲಿ ಸಹಕರಿಸಿದ ಶ್ರೀ ಸೀತಾರಾಮಜಾಗೀರದಾರ್ ಅವರಿಗೆ ನನ್ನ ಕೃತಜ್ಞತೆಗಳು.

ಅನುಭವದಿಂದ ವೇದ್ಯವಾಗುವುದೇನೆಂದರೆ ಒಬ್ಬ ಮನುಷ್ಯನನ್ನು ಮೇಲೆತ್ತಲು ಯತ್ನಿಸಿದರೆ ಅವನು ಉದ್ಧಾರವಾಗುವನೋ ಇಲ್ಲವೋ ನಮ್ಮ ಉದ್ಧಾರವಾಗುವುದು ಖಚಿತ.

—ಸ್ವಾಮಿ ವಿವೇಕಾನಂದ

ಕಾರ್ಯೋನ್ಮುಖರಾಗಿ, ಹೃತ್ಪೂರ್ವಕವಾಗಿ ಕೆಲಸವನ್ನು ಕೈಗೊಳ್ಳಿ. ಕಾಯಕವೇ ಪೂಜೆ ಎಂಬುದನ್ನು ನೆನೆಪಿಡಿ. ಕಾಯಕವೇ ಜೀವನ. ನಿಜವಾದ ಕೆಲಸದಲ್ಲೇ ಅದರ ಬಹುಮಾನವೂ ಅಡಗಿದೆ. ಕಾರ್ಯಶೀಲನಾಗಿರುವುದೇ ಮಾನವನ ಸಾಮಾನ್ಯ ಲಕ್ಷಣ.

—ಡಾ ವಿ. ರಾಮತೀರ್ಥ

ವೈ. ಸಿ. ಭಾನುಮತಿ

ಹೆತ್ತೂರು ಸುಗ್ಗಿ

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಒಂದು ಹೋಬಳಿ ಕೇಂದ್ರ. ಇಲ್ಲಿಯ ಗ್ರಾಮದೇವತೆ ದೇವೀರಮ್ಮ. ಹೆತ್ತೂರಿನ ದೇವೀರಮ್ಮ ಈ ಗ್ರಾಮಕ್ಕಲ್ಲದೆ ಸುತ್ತಲಿನ ಗ್ರಾಮಗಳಾದ ಕೊಣಬನಹಳ್ಳಿ, ಹಾಡ್ಲಹಳ್ಳಿ, ಕಿರಕಳ್ಳಿ ಮತ್ತು ಮರ್ಕಳ್ಳಿಗಳಿಗೂ ಆರಾಧ್ಯದೈವವಾಗಿದ್ದಾಳೆ. ಈ ದೇವತೆಯ ಜಾತ್ರೆ ವರ್ಷಕ್ಕೊಮ್ಮೆ ಚೈತ್ರಮಾಸದಲ್ಲಿ ನಡೆಯುತ್ತದೆ. ಇದನ್ನು ಹೊನ್ನಾರುಸುಗ್ಗಿ, ದೇವೀರಮ್ಮನವರ ಜಾತ್ರೆ, ಹೆತ್ತೂರು ಸುಗ್ಗಿ ಎಂದು ನಾನಾ ಹೆಸರುಗಳಿಂದ ಕರೆಯುವರು. ಸುಗ್ಗಿ ಎಂದರೆ ಧಾನ್ಯಗಳನ್ನು ಕೊಯ್ಯುವ ಕಾಲ ಎಂಬುದು ಹೆಚ್ಚು ಬಳಕೆಯಲ್ಲಿರುವ ಅರ್ಥ. ಆದರೆ ಇಲ್ಲಿ ಸುಗ್ಗಿ ಎಂಬ ಶಬ್ದದ ಅರ್ಥವ್ಯಾಪ್ತಿ ಹಿಗ್ಗಿದೆ. ಹಾಗೆಯೇ ಅದು ಜಾತ್ರೆ ಎನ್ನುವುದಕ್ಕೆ ಸಂವಾದಿಯಾಗಿ ಬಳಕೆಯಾಗಿರುವುದನ್ನು ಗಮನಿಸಬೇಕು. ಅಧ್ಯಯನ ದೃಷ್ಟಿಯಿಂದ ಹೆತ್ತೂರು ಸುಗ್ಗಿ ವಿಶಿಷ್ಟವಾದುದು. ಹೊನ್ನಾರು ಕಟ್ಟುವುದು, ಕೂತಿನಾಡಮ್ಮನ ಹೆಣ್ಣುಮಕ್ಕಳ ಸುಗ್ಗಿ, ದೇವೀರಮ್ಮನವರ ಜಾತ್ರೆ ಎಲ್ಲವೂ ಹೆತ್ತೂರು ಸುಗ್ಗಿಯಲ್ಲಿ ಮಿಳಿತವಾಗಿದೆ. ಆರಂಭದಲ್ಲಿ ಇದು ಹೊನ್ನಾರು ಕಟ್ಟುವ ಸಂಪ್ರದಾಯವಾಗಿ ಮಾತ್ರ ಆಚರಣೆಯಲ್ಲಿದ್ದಿತೆಂದು ತೋರುತ್ತದೆ.

ಹೊನ್ನಾರು ಕಟ್ಟುವ ಸಂಪ್ರದಾಯ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಪ್ರಚಲಿತವಿದೆ. ಬಯಲು ಸೀಮೆಯ ರೈತರು ಸಾಮಾನ್ಯವಾಗಿ ಯುಗಾದಿಯ ದಿನ ಹೊನ್ನಾರು ಕಟ್ಟುವರು. ಹಿಂದೆಲ್ಲ ರೈತರು ಯುಗಾದಿಯ ನಂತರ ಪ್ರಶಸ್ತವಾದ ದಿನವನ್ನು ಆಯ್ದುಕೊಂಡು ಹೊನ್ನಾರು ಕಟ್ಟುತ್ತಿದ್ದರು. ಯುಗಾದಿಯು ಶುಭ ದಿನವಾಗಿರುವುದರಿಂದ ಇತ್ತೀಚೆಗೆ ಹೊಸವರ್ಷದ ದಿವಸವೆ ಹೊನ್ನಾರು ಕಟ್ಟುವುದು ರೂಢಿಯಲ್ಲಿದೆ. ಉತ್ತು ಬಿತ್ತಿ ಮಾಡುವ ಕೃಷಿಕಾರ್ಯಗಳು ರೈತನ ದೈನಂದಿನ ಬದುಕಿನೊಂದಿಗೆ ಅವಿನಾಸಂಬಂಧ ಪಡೆದಿವೆ. ವರ್ಷ ವರ್ಷವೂ ಮಾಡುವ ಈ ಕೆಲಸಗಳನ್ನು ರೈತನು ಹೊಸವರ್ಷದಂದು ಪುನರಾರಂಭಿಸುವನು. ಹೀಗೆ ವ್ಯವಸಾಯದ ಕೆಲಸವನ್ನು ಆಯಾ ವರ್ಷ ಹೊಸದಾಗಿ ಆರಂಭಿಸುವ ಒಂದು ಸಂಪ್ರದಾಯವೆ ಹೊನ್ನಾರು. "ಹೊನ್ನಾರು ಎಂದರೆ ಹೊನ್ನಿನ ಅರ್ಥಾತ್ ಶುಭದ ಆರು ಎಂದರ್ಥ.

ನಿನ್ನ ಬೆಳೆ ಬಂಗಾರವಾಗಲಿ ಎಂದು ಹೊಸವರ್ಷ ಆಶೀರ್ವದಿಸುವಂತೆ ಅದನ್ನು ಸ್ವಾಗತಿಸುವನು".[1] ಹೊನ್ನಾರು ಕಟ್ಟುವ ಮುನ್ನ ಮುಂಗಾರು ಮಳೆ ಆಗಿದ್ದರೂ ಯಾವೊಬ್ಬ ರೈತನೂ ವ್ಯವಸಾಯದ ಕೆಲಸ ಮಾಡುವುದಿಲ್ಲ. ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಯುಗಾದಿಯ ದಿನ ಹೊನ್ನಾರು ಕಟ್ಟುವ ಸಂದರ್ಭದಲ್ಲಿ ದೇವಸ್ಥಾನದಲ್ಲಿ ಪೂಜೆ ಮಾಡಿಸಿ ಸಾಮೂಹಿಕವಾಗಿ ಆರುಕಟ್ಟಿ ಸಾಂಕೇತಿಕವಾಗಿ ತಮ್ಮ ತಮ್ಮ ಜಮೀನನ್ನು ಉಳುಮೆ ಮಾಡಿ ಬರುವರು ಇದಾದ ಬಳಿಕ ರೈತ ತನಗೆ ಅನುಕೂಲ ವಾದ ದಿನದಲ್ಲಿ ಬೀಜ ಬಿತ್ತಬಹುದು.

ಒಂದು ಕಾಲದಲ್ಲಿ ಹೆತ್ತೂರಿನಲ್ಲಿಯೂ ಬಯಲು ಸೀಮೆಯ ರೈತರಂತೆ ಸಾಮೂಹಿಕವಾಗಿ ಆರು ಕಟ್ಟುತ್ತಿದ್ದಿರಬಹುದು. ಜನಪದ ದೇವತೆಗಳಾದ ದೇವೀರಮ್ಮ, ಕೊತಿನಾಥಮ್ಮ, ಚಿಕ್ಕಮ್ಮ ಹೆತ್ತೂರಿಗೆ ಬಂದು ಸೇರಿದ ಬಳಿಕ ಈ ದೇವತೆಗಳನ್ನು ಕುರಿತ ಹಬ್ಬವನ್ನು ಸುಗ್ಗಿಕಾಲದಲ್ಲಿ ಅದರಲ್ಲೂ ಹೊನ್ನಾರು ಕಟ್ಟುತ್ತಿದ್ದ ಸಂದರ್ಭ ದಲ್ಲಿಯೇ ಆಚರಿಸಲು ಪ್ರಾರಂಭಿಸಿರಬಹುದು.

ದೇವೀರಮ್ಮ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಬಹಳಷ್ಟು ಮಲೆನಾಡು ಗೌಡರಿಗೆ ಆರಾಧ್ಯ ದೈವ. ಕ್ರಿ.ಶ. 1116ರ ಹೊತ್ತಿಗಾಗಲೆ ದೇವೀರಮ್ಮನ ದೇವಾಲಯಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿದ್ದವೆಂಬುದನ್ನು ಚಿಕ್ಕಮಗಳೂರು ತಾಲ್ಲೂಕಿನ 99 ಮತ್ತು 100ನೆಯ ಶಾಸನಗಳ ಸಹಾಯದಿಂದ ತಿಳಿಯಬಹುದು.[2] ಈ ಸಂಬಂಧವಾದ ದೇವೀರಮ್ಮನ ಹಬ್ಬವನ್ನು ಮೂಡಿಗೆರೆ ಮತ್ತು ಬೇಲೂರು ತಾಲ್ಲೂಕುಗಳ ಹಲವಾರು ಊರುಗಳಲ್ಲಿ ಇಂದಿಗೂ ಮಾಡುವ ರೂಢಿಯಿದೆ. ಜನಪದ ಜೀವನದಲ್ಲಿ ಹಬ್ಬವಾಗಲಿ ಅಥವಾ ಯಾವುದೇ ಸಂತೋಷದ ಸಂದರ್ಭವಾಗಲಿ ನೆಂಟರಿಷ್ಟರೆಲ್ಲ ಬಂದು ಸೇರಬೇಕು. ಹೀಗೆ ಹೆತ್ತೂರಿನಲ್ಲಿಯೂ ದೇವೀರಮ್ಮನ ಹಬ್ಬಕ್ಕೆ ಬಂಧುಮಿತ್ರರನ್ನು ಕರೆಯುತ್ತಿದ್ದಿರಬಹುದು. ಜನಕ್ಕೆ ಜನ ಹೆಚ್ಚಾದಂತೆಲ್ಲ ಈ ಸಂದರ್ಭಕ್ಕಾಗಿಯೆ ಅಂಗಡಿಮುಂಗಟ್ಟುಗಳು ಸೇರತೊಡಗಿದವು. ಕಾಲಸರಿದಂತೆ ವ್ಯಷ್ಟಿಮೂಲವಾಗಿದ್ದ ದೇವೀರಮ್ಮನ ಹಬ್ಬ ಸಮಷ್ಟಿ ರೂಪದಲ್ಲಿ ದೇವೀರಮ್ಮನ ಜಾತ್ರೆಯಾಗಿ ಹಂತಹಂತವಾಗಿ ಬೆಳೆದುಬಂದಿರಬೇಕು. ಇದು ಹೆಚ್ಚು ಮಳೆ ಬೀಳುವ ಪ್ರದೇಶವಾದ್ದರಿಂದ ಇಲ್ಲಿನ ರೈತರು ಅನುಕೂಲಕ್ಕಾಗಿ ಹೊನ್ನಾರು ಸುಗ್ಗಿ, ದೇವೀರಮ್ಮನ ಜಾತ್ರೆ ಎಲ್ಲವನ್ನೂ ಏಕಕಾಲದಲ್ಲಿ ಆಚರಿಸಲು ತೀರ್ಮಾನಿಸಿರಬಹುದು. ಹೀಗೆ ಹೆತ್ತೂರು ಸುಗ್ಗಿ ಹಲವು ಆಚರಣೆಯ ಸಂಗಮವಾಗಿದೆ. ಮುಂದೆ ಆ ಕುರಿತು ವಿವರವಾಗಿ ನೋಡಬಹುದು.

ಹೆತ್ತೂರಿನ ದೇವೀರಮ್ಮನ ಸುಗ್ಗಿ ಚೈತ್ರಮಾಸದಲ್ಲಿ ಒಂದುವಾರಕಾಲ

---

[1] ಗ್ರಾಮಜ್ಯೋತಿ: ಗ್ರಾಮಾಂತರ ವ್ಯವಸಾಯ ಚಕ್ರ : ಹ. ಕ. ರಾಜೇಗೌಡ ಪು. ೧೨೬

[2] ಎಪಿಗ್ರಾಫಿಯಾ ಕರ್ನಾಟಿಕ, ಕಡೂರು ಜಿಲ್ಲೆ

ನಡೆಯುತ್ತದೆ. ಯುಗಾದಿ ಕಳೆದ ಮೂರನೆಯ ದಿನ ಊರಿನ ಪ್ರಮುಖರು ಹಾಗೂ ನಾಡಗೌಡರು ಅಲ್ಲಿನ ಮಲ್ಲೇಶ್ವರ ದೇವರ ಅರ್ಚಕರಲ್ಲಿ ಪಂಚಾಂಗ ಶ್ರವಣದ ಮೂಲಕ ಆ ವರ್ಷದ ಫಲಾಫಲಗಳನ್ನು ವಿಚಾರಿಸುವರು. ಹಾಗೆಯೆ ಯಾವ ದಿನದಂದು ಸುಗ್ಗಿ ನಡೆಯಬೇಕು, ಚಿಕ್ಕಮ್ಮನನ್ನು ಯಾರು ಹೊರಬೇಕು ಎಂಬುದನ್ನು ತೀರ್ಮಾನಿಸುವರು. ಸಾಮಾನ್ಯವಾಗಿ ಬೇಲೂರು ರಥೋತ್ಸವ ನಡೆಯುವ ಕಾಲದಲ್ಲಿಯೆ ಹೆತ್ತೂರು ಸುಗ್ಗಿಯೂ ನಡೆಯುತ್ತದೆ. ಸುಗ್ಗಿಯ ದಿನ ನಿರ್ದಿಷ್ಟವಾದ ಕೂಡಲೆ ಹೆತ್ತೂರಿನ ಹರಿಜನರು ತಮಟೆ ಬಡಿಯುತ್ತ ಊರಿನ ದೇವಸ್ಥಾನದಲ್ಲಿ 'ಸುಗ್ಗಿಯ ಸಾರು' ಸಾರುವರು. ಅನಂತರ ಹೆತ್ತೂರು, ಕೊಣಬನಹಳ್ಳಿ, ಹಾಡ್ಲಹಳ್ಳಿ, ಕಿರಕಳ್ಳಿ ಮತ್ತು ಮರಕಳ್ಳಿ ಗ್ರಾಮಗಳ ಮನೆಮನೆಗೆ ಹೋಗಿ "ಹಸಿ ಕಡೀಬೇಡ, ಒಣಗು ಮುರೀಬೇಡ, ಒಲೆಗೆ ಹೆಂಚು ಎತ್ತಬೇಡ, ಗದ್ದೆ ಬಿತ್ತಬೇಡ, ಹೆತ್ತೂರು ದೇವೀರಮ್ಮನ ಸುಗ್ಗಿ ಸಾರೇ ಸಾರು" ಎಂದು ಹೇಳುತ್ತ ಮನೆಮನೆಗೆ ಸಾಗುವರು. ಸುಗ್ಗಿ ಸಾರಲು ಬಂದವರಿಗೆ ಅಕ್ಕಿ ಬತ್ತಗಳನ್ನು ಇನಾಮಾಗಿ ನೀಡುವರು. ಸಾಮಾನ್ಯವಾಗಿ ಸಾರು ಹಾಕುವ ದಿನ ಮಂಗಳವಾರವಾಗಿರುತ್ತದೆ. ಅಂದಿನಿಂದ ಜಾತ್ರೆ ಮುಗಿಯುವವರೆಗೆ ಯಾರೂ ಸೌದೆ ಕಡಿಯುವುದಿಲ್ಲ, ಬಿತ್ತನೆ ಮಾಡುವುದಿಲ್ಲ, ಮೆಣಸಿನಕಾಯಿ ಕುಟ್ಟುವುದಿಲ್ಲ ರೊಟ್ಟಿ ಬೇಯಿಸಲು ಒಲೆಯ ಮೇಲೆ ಹೆಂಚು ಇಡಬೇಕಾಗುವುದರಿಂದ ಈ ಜನರ ಬೆಳಗಿನ ಉಪಾಹಾರವಾದ ರೊಟ್ಟಿಯನ್ನು ಸುಗ್ಗಿ ಸಾರಿದ ಬಳಿಕ ಮಾಡುವುದಿಲ್ಲ ಮಾಂಸಾಹಾರ ಕೂಡ ನಿಷಿದ್ಧ. ಈ ಬಗ್ಗೆ ಕಟ್ಟುನಿಟ್ಟಾಗಿ ನಡೆದುಕೊಳ್ಳುವರು.

ಸುಗ್ಗಿ ಸಾರಿದ ಬಳಿಕ ಮೊದಲನೆಯ ದಿನ ಮನೆಯನ್ನು ಗುಡಿಸಿ ಸಾರಿಸಿ ಶುಚಿಗೊಳಿಸುವರು. ಹರಿಜನರು ತಮಗೆ ಇನಾಮಾಗಿ ದೊರೆತ ಅಕ್ಕಿ ಮತ್ತು ಬತ್ತದಿಂದ ತಮ್ಮ ಕುಲದೇವತೆ 'ಕಾಡ್ಲ ಒಡೆಯ'ನಿಗೆ ನೂರೊಂದು ಎಡೆ ಇಕ್ಕಿ 'ಪರಾವು' ಮಾಡುವರು. ಅಂದು ರಾತ್ರಿ ಕಾಡ್ಲ ಒಡೆಯನ ಬನದಲ್ಲಿ ದೇವರನ್ನು ಪೂಜಿಸಿದ ಬಳಿಕ ಗಂಡಸರು ಸುಗ್ಗಿ ಕುಣಿಯುವರು.

ಎರಡನೆಯ ದಿನ ಅಂದರೆ ಬುಧವಾರ ಎಲ್ಲರಿಗೂ ವಿರಾಮ. ಅಂದು ಪೂಜೆ ಪುನಸ್ಕಾರಗಳೇನೂ ಇರುವುದಿಲ್ಲ. ಮೂರನೆಯ ದಿನವಾದ ಗುರುವಾರ ಹೆತ್ತೂರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಸೇರಿ ದೇವೀರಮ್ಮನ ಹೊನ್ನಾರು ಸುಗ್ಗಿಯನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸುವರು. ದೇವೀರಮ್ಮ ಹೆತ್ತೂರು ಪಕ್ಕದ ಹಾಡ್ಲಹಳ್ಳಿ ಯಿಂದ ಬಂದವಳೆಂದು ನಂಬಿಕೆಯಿದೆ. ದೇವೀರಮ್ಮನವರ ಮುಖವಾಡ ಮತ್ತು ಆಭರಣಗಳನ್ನು ಹೆತ್ತೂರಿನ ನಾಡಗೌಡರ ಮನೆಯಲ್ಲಿಡುವುದು ತಲೆತಲಾಂತರದಿಂದ ಬಂದ ಸಂಪ್ರದಾಯ. ದೇವೀರಮ್ಮ ಮತ್ತು ಚಿಕ್ಕಮ್ಮನ ಮೂರ್ತಿಗಳನ್ನು ಈಶ್ವರ ದೇವಾಲಯದಲ್ಲಿ 'ಮಡಿ ಗುಡಾಣ'ದಲ್ಲಿ ಇಟ್ಟಿರುತ್ತಾರೆ. ಚಿಕ್ಕಮ್ಮನನ್ನು ದೇವೀರಮ್ಮನ ತಂಗಿ ಎಂದು ಹೇಳಲಾಗುವುದು. ಈ ಚಿಕ್ಕಮ್ಮ ಹೆತ್ತೂರಿನಲ್ಲಿ ಬಂದು ನೆಲಸಿದ್ದಕ್ಕೆ ಒಂದು ಕಥೆ ಇದೆ—ಅಕ್ಕನಾದ ದೇವೀರಮ್ಮ ಹಾಡ್ಲಹಳ್ಳಿಯಿಂದ ಹೆತ್ತೂರಿಗೆ

ಹೋದದ್ದನ್ನು ಕೇಳಿದ ಚಿಕ್ಕಮ್ಮನಿಗೆ ತಾನೂ ಹೆತ್ತೂರಿಗೆ ಹೋಗಬೇಕೆಂಬ ಅಪೇಕ್ಷೆಯಾಯಿತು. ಒಂದುದಿನ ಹೆತ್ತೂರಿನ ಹೆಣ್ಣುಮಗಳೊಬ್ಬಳು ಕೋಣಬನಹಳ್ಳಿಯ ಸಮೀಪದ ಗದ್ದೆಗೆ ಹುಲ್ಲು ಕೊಯ್ಯಲು ಹೋದಳು. ಆಗ 'ನಾನೂ ಬರ್ತೀನಿ ನಾನೂ ಬರ್ತೀನಿ' ಎಂದು ಕೂಗಿದಂತಾಯಿತು. ಆ ಹೆಣ್ಣುಮಗಳು ಬಾ ಎಂದಳು. ಚಿಕ್ಕಮ್ಮ ಆಕೆಯ ಹುಲ್ಲಿನ ಹೆಡಗೆಗೆ ಬಂದು ಕುಳಿತುಬಿಟ್ಟಳು. ಅನಂತರ ಆಕೆ ಚಿಕ್ಕಮ್ಮನನ್ನು ಈಶ್ವರ ದೇವಾಲಯಕ್ಕೆ ತಂದುಕೊಟ್ಟಳು. ಹೆಡಗೆಗೆ ಬಂದದ್ದರಿಂದ ಚಿಕ್ಕಮ್ಮನನ್ನು ಇಂದಿಗೂ ಹೆಡಗೆಯಲ್ಲಿಟ್ಟು ಪೂಜಿಸುವರು.

ಗುರುವಾರ ಬೆಳಗ್ಗೆ ಊರಿನ ಮಡಿವಾಳನು ನಾಡಗೌಡರ ಮನೆಗೆ ಹೋಗಿ ದೇವೀರಮ್ಮನ ಮುಖವಾಡ ಮತ್ತು ಆಭರಣವನ್ನು ಒಂದು ಕುಕ್ಕೆಯಲ್ಲಿಟ್ಟು ಕೊಂಡು ತಲೆಯ ಮೇಲೆ ಹೊತ್ತು ಈಶ್ವರ ದೇವಾಲಯಕ್ಕೆ ತರುತ್ತಾನೆ. ಗುಡಾಣದಿಂದ ದೇವೀರಮ್ಮನ ಪ್ರತಿಮೆ ತೆಗೆದು ಅದಕ್ಕೆ ಮುಖವಾಡ ಹಾಕಿ ಆಭರಣಗಳನ್ನು ತೊಡಿಸುವರು. ಅನಂತರ 'ಕುರ್ಜೆ'ಯಲ್ಲಿ[1] ದೇವೀರಮ್ಮನನ್ನು ಕೂರಿಸಿ ಶೃಂಗರಿಸುವರು. ದೈವಗಣಗಲ ಹೂವು ದೇವೀರಮ್ಮನಿಗೆ ಪ್ರಿಯವಾದುದು ಆದುದರಿಂದ ಅಂದು ದೈವಗಣಗಲ ಹೂವಿನಿಂದ ವಿಶೇಷವಾಗಿ ಅಲಂಕರಿಸುವರು. ಬ್ರಾಹ್ಮಣ ಅರ್ಚಕ ದೇವೀರಮ್ಮನನ್ನು ಪೂಜಿಸುವನು. ಸಂಜೆಯ ವೇಳೆಗೆ ಜನರೆಲ್ಲ ದೇವಸ್ಥಾನದ ಆವರಣದಲ್ಲಿ ಸೇರುವರು. ಅರ್ಚಕನು ದೇವರ ಕುರ್ಜಿಯನ್ನು ತಲೆಯ ಮೇಲೆ ಹೊತ್ತುಕೊಳ್ಳುವನು. ಕುರ್ಜಿಯ ಎರಡೂ ಕಡೆಯ ಅಡ್ಡೆಯನ್ನು ಗೌಡರು ಹಿಡಿದುಕೊಳ್ಳುವರು. ಹೀಗೆ ಓಲಗ ಸಮೇತ ದೇವೀರಮ್ಮನನ್ನು ಸುಗ್ಗಿಕಟ್ಟೆಗೆ ತರುತ್ತಾರೆ. ದೇವೀರಮ್ಮನ ಜೊತೆ ಚಿಕ್ಕಮ್ಮನನ್ನು ಹೊಸದಾಗಿ ಹೆಣೆಸಿದ ಹೆಡಿಗೆಯಲ್ಲಿ ಕೊಂಡೊಯ್ಯುವರು. ಚಿಕ್ಕಮ್ಮನನ್ನು ಹೊರುವವರು ಸಾಮಾನ್ಯವಾಗಿ ಗೌಡಜನಾಂಗದವರೆ ಆಗಿರುತ್ತಾರೆ. ಅಂದು ಚಿಕ್ಕಮ್ಮನನ್ನು ಹೊರುವವರು ಉಪವಾಸವಿರಬೇಕು. ದೇವರುಗಳನ್ನು ಸುಗ್ಗಿಕಟ್ಟೆಗೆ ತೆಗೆದುಕೊಂಡು ಹೋಗುವಾಗ ಈಶ್ವರ ದೇವಾಲಯದ ಪ್ರದಕ್ಷಿಣೆ ಮಾಡಿಸಲಾಗುವುದು. ಚಿಕ್ಕಮ್ಮನನ್ನು ಹೊತ್ತವರಿಗೆ ಈಶ್ವರ ದೇವಾಲಯಕ್ಕೆ ಸುತ್ತು ಬರುವುದರೊಳಗೆ 'ಗಣ' ಬರುತ್ತದೆ. ಸಕಲ ವಾದ್ಯಗಳೊಡನೆ ದೇವರುಗಳು ಹೊರಡುವವು. ಕ್ಷೌರಿಕರು ಎರಡು ದಾಳಗಳನ್ನು ಹಿಡಿದುಕೊಂಡು ಬಹುಮುಂದೆ ಇರುತ್ತಾರೆ. ದೇವರ ಮುಂಭಾಗದಲ್ಲಿ ಕೆಂಡದ ಧೂಪದಾರತಿ ಹಿಡಿದು ಸಾಂಬ್ರಾಣಿ ಹಾಕುತ್ತ ಮಡಿವಾಳ ಸಾಗುವನು. ಊರಿನ ಬೋವಿ ದೇವರ ಹಿಂದೆ ಛತ್ರಿ ಹಿಡಿಯುವನು.

ಸುಗ್ಗಿಕಟ್ಟೆಯ ಸುತ್ತ ಜನ ಕುಳಿತುಕೊಳ್ಳಲು ಚಪ್ಪರ ಹಾಕಿರುತ್ತಾರೆ. ಕಟ್ಟೆಯ ಮೇಲೆ ಎರಡು ಕಲ್ಲು ಕಂಬಗಳಿಗೆ ಅಡ್ಡಗಟ್ಟು ಕಟ್ಟಿ ಉಯ್ಯಾಲೆ ಸಿದ್ಧಪಡಿಸಿರುತ್ತಾರೆ. ಇವೆಲ್ಲ ಊರೊಟ್ಟಿನ ಕೆಲಸಗಳು. ದೇವರುಗಳು ಸುಗ್ಗಿಕಟ್ಟೆಯನ್ನು

1 ದೇವರನ್ನು ಕೂರಿಸುವ ಪೀಠ, ಕುರುಜು ಎನ್ನುವ ರೂಪವೂ ಇದೆ.

ತಲುಪಿದ ಕೂಡಲೆ ದೇವೀರಮ್ಮನನ್ನು ಉಯ್ಯಾಲೆಯ ಮೇಲೆ ಕೂರಿಸಲಾಗುವುದು. ಚಿಕ್ಕಮ್ಮನನ್ನು ಉಯ್ಯಾಲೆಯ ಸಮೀಪ ಕೆಳಗಡೆ ಇಡುವರು ದೇವೀರಮ್ಮ ಉಯ್ಯಾಲೆಯ ಮೇಲೆ ಕುಳಿತಾಗ ಮೊದಲು ನಾಡಗೌಡರ ಮನೆಯ ತೆಂಗಿನಕಾಯನ್ನು ದೇವರಿಗೆ ಒಡೆಯಲಾಗುವುದು. ಅನಂತರ ಪಟೇಲರ ಮನೆಯ ಹಣ್ಣುಕಾಯಿಗಳನ್ನು ಅರ್ಪಿಸುವರು. ಆಮೇಲೆ ಊರಿನವರೆಲ್ಲ ಹಣ್ಣುಕಾಯಿ ಮಾಡಿಸುವರು. ದೇವೀರಮ್ಮನಿಗೆ ಹರಕೆ ಹೊತ್ತವರು ಬೆಳ್ಳಿಸತ್ತಿಗೆ, ಸೀರೆ ಮೊದಲಾದುವನ್ನು ಸುಗ್ಗಿಕಾಲದಲ್ಲಿ ಸಲ್ಲಿಸುವರು ಇದೆಲ್ಲ ಮುಗಿಯುವ ವೇಳೆಗೆ ರಾತ್ರಿಯಾಗುತ್ತದೆ. ಅಷ್ಟರಲ್ಲಿ ಗಂಡಸರು ಸುಗ್ಗಿ ಕುಣಿತಕ್ಕೆ ಸಿದ್ಧರಾಗುವರು. 'ಸುಗ್ಗಿಕತ್ತಿ' ಎಂದು ಈ ಕುಣಿತಕ್ಕಾಗಿಯೆ ವಿಶಿಷ್ಟವಾದ ಕತ್ತಿಯನ್ನು ಬಳಸುವರು. ವಾದ್ಯಘೋಷಗಳ ನಡುವೆ ಊರಿನ ಗಂಡಸರು ಸುಗ್ಗಿಕತ್ತಿ ಹಿಡಿದು ದೇವೀರಮ್ಮನ ಸಮ್ಮುಖದಲ್ಲಿ ಕುಣಿಯುತ್ತಾರೆ. ಇದು ಇಲ್ಲಿನ ಜನರ ಶೌರ್ಯಸಾಹಸಗಳ ಸಂಕೇತವಾಗಿದೆ. ಅಂತೆಯೆ ಇದು ಆದಿವಾಸಿ ಜನಾಂಗದ ಪಳೆಯುಳಿಕೆಯಾಗಿಯೂ ಕಂಡುಬರುತ್ತದೆ.

ಸುಗ್ಗಿಕತ್ತಿ ಕುಣಿತ ಬೆಳಗಿನ ನಾಲ್ಕು ಗಂಟೆಯವರೆಗೂ ನಡೆಯುತ್ತಿರುತ್ತದೆ. ಅನಂತರ ದೇವೀರಮ್ಮ ಮತ್ತು ಚಿಕ್ಕಮ್ಮ ದೇವತೆಗಳನ್ನು ಸುಗ್ಗಿಕಟ್ಟೆಯಿಂದ ಸಮೀಪದಲ್ಲೆ ಇರುವ ಕಾಳಮ್ಮನ ಬನಕ್ಕೆ ಕೊಂಡೊಯ್ಯುತ್ತಾರೆ. ಅಲ್ಲಿ ಆಯಕಟ್ಟಿನ ಸ್ಥಳದಲ್ಲಿ ದೇವರನ್ನು ಕೂರಿಸಿ ಹೊನ್ನಾರು ವಿಧಿಗಳನ್ನು ಮಾಡುವರು. ಮರಕಳ್ಳಿಯ ಬಡಗಿ ಪುಟ್ಟದಾದ ನೇಗಿಲು, ನೊಗ ಮತ್ತು ಕೂರಿಗೆಗಳನ್ನು ಮಾಡಿ ಅಲ್ಲಿಗೆ ತಂದಿರುತ್ತಾನೆ. ಈ ಉಪಕರಣಗಳನ್ನು ಬಳಸಿ ಊರಿನ ಗೌಡರು ಮೂಡುಗಡೆಗೆ ಎದುರಾಗಿ ನಿಂತು ದೇವತೆಗಳ ಸಮ್ಮುಖದಲ್ಲಿ ಬೀಜ ಬಿತ್ತುವರು. ಬೀಜ ಬಿತ್ತುವಾಗ ಗೌಡ ಜನಾಂಗದ ಗಂಡಸರು ಹೊನ್ನಾರು ಬಿತ್ತುವ ಹಾಡನ್ನು ಹೇಳುವರು :

ಮೂಡು ಮುಂದಾಗಿ ಹೂಡ್ಯಾವೆ ಹೊನ್ನಾರು
ಹೂಡುತಲೆ ಕಂಡೆವಿದ ನಾವು
ಬಡಗು ಮುಂದಾಗಿ ನಡೆದಾವೆ ಹೊನ್ನಾರು
ನಡೆಯುತಲೆ ಕಂಡೆವಿದ ನಾವು
ದ್ಯಾವಮ್ಮನ ಬೆಡಗಿನ ಮಲ್ಲಿಗೆ ರವಿಕೆಯ
ಅಕ್ಕಿ ಕುರುಗಾಡ ಬತ್ತ ಕುರುಗಾಡ
ಹೊಕ್ಕೋಳು ಹೊನ್ನಿನ ಕುರುಗಾಡ ದ್ಯಾವಮ್ಮನ
ಚೊಚ್ಚಲು ಮಗನ ಮದುವಿಗೆ
ಬೇಳೆಕುರುಗಾಡ ಬೆಲ್ಲ ಕುರುಗಾಡ
ನಾಗೋಳು ಹೊನ್ನಿನ ಕುರುಗಾಡ
ದ್ಯಾವಮ್ಮನ ಮಹದಾಮಗನ ಮದುವಿಗೆ
ಪಾರ್ವತಿ ದ್ಯಾವಮ್ಮನ ದಾರೆಕಡಗವನಿಕ್ಕಿ
ಹೋಗಿ ಕೂರಿಗೆ ಹೊಡೆದಾರೆ ಈ ಊರು
ಎಪ್ಪತ್ತು ಬೆಳೆವ ಬಯಲಾಗೆ

ನೀರೆ ದ್ಯಾವಮ್ಮನ ತಟ್ಟೆ ಕೊಪ್ಪವನಿಕ್ಕಿ
ಹೋಗಿ ಮೆಟ್ಟಿ ಕೂರಿಗೆ ಹೊಡೆದಾರೆ
ಈ ಊರಂ ಎಂಬತ್ತು ಬೆಳೆವ ಬಯಲಾಗೆ

ಪಾರ್ವತಿ ದ್ಯಾವಮ್ಮನ ಓಲೆಯ ಕಿವಿಮೇಲೆ
ಗಾಲಿಯ ಹೊಡಿದಾನೆ ಎಳೆನಾಗ ದ್ಯಾವಮ್ಮನ
ಓಲೆಯು ಕಿವಿಗೆ ಬಿಸಲೊಂದು

ನೀರೆ ದ್ಯಾವಮ್ಮನ ಕೊಪ್ಪಿನ ಕಿವಿ ಮೇಲೆ
ತೆಕ್ಕೆಯ ಹೊಡಿದಾನೆ ಎಳೆನಾಗ ದ್ಯಾವಮ್ಮನ
ಕೊಪ್ಪಿನ ಕಿವಿಗೆ ಬಿಸಲೊಂದು

ಪಾರ್ವತಿ ದ್ಯಾವಮ್ಮನ ಪಟ್ಟೆಯು ಒಗೆವರೆ
ನೀರಿಲ್ಲವೆಂದ ಮಡಿವಾಳ ಈ ಊರು
ಕಟ್ಟೆಯ ಕೆಳಗೆ ಶಿವಗಂಗೆ

ನೀರೆ ದ್ಯಾವಮ್ಮನ ಪಟ್ಟೆಯು ಒಗೆವರೆ
ತುಪ್ಪಿಲ್ಲವೆಂದ ಮಡಿವಾಳ ಈ ಊರು
ಕಟ್ಟೆಯು ಕೆಳಗೆ ಶಿವಗಂಗೆ

ಬಾವೀಲಿ ಒಂದು ಬಟ್ಟನೆ ಕಲ್ಲಲ್ಲಿ
ಬುಟ್ಟನು ಕೂವಾರೆ ಬಿಸಿಲಲ್ಲಿ ದ್ಯಾವಮ್ಮನ
ಜಲ್ಲಿ ದ್ಯಾವಂಗ ಒಗೆವರೆ

ಹಳ್ಳದಲೊಂದು ತೆಳ್ಳನೆ ಕಲ್ಲಲ್ಲಿ
ಚುಳ್ಳನು ಕಾವಾರೆ ಬಿಸಿಲಲ್ಲಿ ದ್ಯಾವಮ್ಮನ
ಜಲ್ಲಿ ದ್ಯಾವಂಗ ಒಗೆವರೆ

ಬೆಟ್ಟದ ಮೇಲೊಂದು ಇಟ್ಟಂಗಿಗಿಡ ಹುಟ್ಟಿ
ಹುಟ್ಟುತಲೆ ಕಾಯಿ ಫಲವಾದವು ಈ ಊರ
ಹುಟ್ಟಿದ ಮಕ್ಕಳಿಗೆ ಕಲಿಕಾಲ

ಕಲ್ಲರೆ ಮೇಲೊಂದು ಮರನಲ್ಲಿ ಗಿಡಹುಟ್ಟಿ
ಹುಟ್ಟುತಲೆ ಕಾಯಿ ಫಲವಾದವು ಈ ಊರ
ಹುಟ್ಟಿದ ಮಕ್ಕಳಿಗೆ ಕಲಿಕಾಲ

ಹೆತ್ತೂರು ದ್ಯಾವಮ್ಮ ಸತ್ಯವಂತೆ ಕಾಣೆ
ಸತ್ತಿಗೆ ಬಂದಲ್ಲದೆ ಹೊರಡಳು ಬೇಲೂರ
ವೀಳ್ಯವ ಬಂದಲ್ಲದೆ ಎಲೆ ಮೆಲ್ಲರು

ಈ ಊರು ದ್ಯಾವಮ್ಮ ಭಾಗ್ಯವಂತೆ ಕಾಣೆ
ದಾಳು ಬಂದಲ್ಲದೆ ಹೊರಡಳು ಬೇಲೂರು
ಕರ್ಪೂರ ಬಂದಲ್ಲದೆ ಎಲೆ ಮೆಲ್ಲರು

ಸತ್ತಿಗೆ ಸಾವಿರ ಮುತ್ತಿನ ಕೊಡೆ ಮುನ್ನೂರು
ಮುತ್ತು ದ್ಯಾವಮ್ಮಗೆ ಬಿಸಲೊಂದು
ಮುತ್ತು ಚೆಲ್ಲರೆ ಮುಗಿಲಿಗೆ

ಮೇಲಿನ ಹಾಡಿನಲ್ಲಿ ಬರುವ 'ಬೇಲೂರ ವೀಳ್ಯವ ಬಂದಲ್ಲದೆ ಎಲೆ ಮೆಲ್ಲರು' ಎಂಬ

ಉಲ್ಲೇಖದಿಂದ ಇದು ರಾಜಮಾನ್ಯ ದೇವತೆಯಾಗಿತ್ತೆಂದು ಊಹಿಸಬಹುದು. ಈ ಹಾಡು ಹೇಳುವಾಗ ಬೇರೆ ವಾದ್ಯಗಳನ್ನೆಲ್ಲ ನಿಲ್ಲಿಸಿ ಒಂಟಿಕಹಳೆಯನ್ನು ಮಾತ್ರ ಹಿನ್ನೆಲೆಯಾಗಿ ಬಳಸುವರು. ಇದಕ್ಕೆ ಸೋಬಾನೆಕಾಳೆ ಎನ್ನುತ್ತಾರೆ. ಹೀಗೆ ಬೀಜ ಬಿತ್ತುವ ಕಾರ್ಯಕ್ಕೆ ದೈವದ ಆಶೀರ್ವಾದವನ್ನು ಪಡೆಯುವರು. ಹೊನ್ನಾರು ಸೋಬಾನ ಮುಗಿದ ಮೇಲೆ ಕಾಳಮ್ಮನ ಬನದ ಅಜುಬಾಜಿನ ಜಮೀನಿನವರು ದೇವೀರಮ್ಮನಿಗೆ ತೆಂಗಿನಕಾಯಿ ಒಡೆಸುವರು. ಅಷ್ಟರಲ್ಲಿ ಬೆಳಗಾಗುವುದು. ದೇವರುಗಳನ್ನು ಪುನಃ ವಾದ್ಯದಲ್ಲಿ ಈಶ್ವರ ದೇವಾಲಯಕ್ಕೆ ತಂದು ಪೂಜಿಸುವರು. ಅನಂತರ ನಾಡಗೌಡರ ಮನೆಗೆ ತೆಗೆದುಕೊಂಡು ಹೋಗುವರು. ಅಲ್ಲಿ ಪ್ರತ್ಯೇಕವಾದ ಕೊಠಡಿಯಲ್ಲಿ ಕರಿಯ ಕಂಬಳಿಗದ್ದುಗೆ ಹಾಕಿ ದೇವೀರಮ್ಮನನ್ನು ಕೂರಿಸುವರು. ಹಣ್ಣುಕಾಯಿಗಳನ್ನು ಅರ್ಪಿಸಿ ಪೂಜಿಸುವರು. ಮಂಗಳವಾರದ ವರೆಗೆ ದೇವರನ್ನು ನಾಡಗೌಡರ ಮನೆಯಲ್ಲಿಯೆ ಇಟ್ಟಿರುತ್ತಾರೆ. ರಾತ್ರಿಯೆಲ್ಲ ಸುಗ್ಗಿಕುಣಿದು ದೇವತೆಯ ಸೇವೆಮಾಡಿದ ಜನರಿಗೆ ಶುಕ್ರವಾರ ಶನಿವಾರ ಎರಡು ದಿನವೂ ಯಾವುದೇ ಕಾರ್ಯಕ್ರಮ ಇರುವುದಿಲ್ಲ.

ಭಾನುವಾರ ದೇವಸ್ಥಾನದ ಆವರಣದಲ್ಲಿ 'ಮರಿಸಾರು' ಎಂದು ಮತ್ತೊಮ್ಮೆ ಸಾರುಹಾಕುವರು. ಸೋಮವಾರ 'ಮಲ್ಲುಸುಗ್ಗಿ'. ಅಂದು ದೇವೀರಮ್ಮ ಮತ್ತು ಚಿಕ್ಕಮ್ಮನ ಮೂರ್ತಿಗಳನ್ನು ಸುಗ್ಗಿಕಟ್ಟೆಗೆ ತರುವುದಿಲ್ಲ. ಮಡಿವಾಳನು ಒಣಗಿದ ಬಾಳೆಎಲೆಯಲ್ಲಿ ಎರಡು ಪಂಜು ಕಟ್ಟುವನು. ಈ ಪಂಜಿಗೆ 'ಮಲ್ಲುಪಂಜು' ಎನ್ನುವರು ಸಕಲ ವಾದ್ಯ ಮರ್ಯಾದೆಯೊಡನೆ ಮಲ್ಲುಪಂಜನ್ನು ಸುಗ್ಗಿಕಟ್ಟೆಗೆ ತೆಗೆದುಕೊಂಡು ಹೋಗುವರು. ಅಲ್ಲಿ ಮಡಿವಾಳ ಮಲ್ಲುಪಂಜಿಗೆ ಬೆಂಕಿ ಹೊತ್ತಿಸುವನು. ಗೌಡರುಗಳು ಮಲ್ಲುಪಂಜನ್ನು ಹಿಡಿದು ಕುಣಿಯುವರು. ಇದೇ ಮಲ್ಲುಸುಗ್ಗಿ. ಹೀಗೆ ಒಂದೆರಡು ಗಂಟೆ ಕಾಲ ಸುಗ್ಗಿಕುಣಿದು ಮನೆಗೆ ಹಿಂತಿರುಗುವರು.

ಕೂತಿನಾಡಮ್ಮನಿಗೆ ಸಂಬಂಧಿಸಿದ, ಹೆಣ್ಣು ಮಕ್ಕಳು ಮಾತ್ರ ಭಾಗವಹಿಸುವ, 'ಹೆಣ್ಣು ಮಕ್ಕಳ ಸುಗ್ಗಿ' ಮಂಗಳವಾರ ನಡೆಯುವುದು. ಹೆಣ್ಣುಮಕ್ಕಳಿಗೇ ವಿಶಿಷ್ಟವಾದ ಸುಗ್ಗಿ ಕರ್ನಾಟಕದಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಕೂತಿನಾಡಮ್ಮ ಕೊಡಗಿನ ಕೂತಿ ಗ್ರಾಮದಿಂದ ಬಂದ ದೇವತೆ. ಹೊನ್ನಾರು ಸುಗ್ಗಿಯ ಸಂದರ್ಭದಲ್ಲಿ ದೇವೀರಮ್ಮನಿಗೆ ಹೊನ್ನಾರುಹಾಡು ಹಾಡುತ್ತಿದ್ದುದನ್ನು ಕೇಳಿ ಇಂಥ ವೈಭವವನ್ನು ತಾನೂ ಪಡೆಯಬೇಕೆಂದು ಕೂತಿನಾಡಮ್ಮನಿಗೆ ಆಸೆಯಾಯಿತು. ಸೋಬಾನೆ ಕಾಳೆಯ ನಾದವನ್ನೆ ಹಿಡಿದು ಕೂತಿನಾಡು ಬಿಟ್ಟು ಹೊರಟು ಬಂದಳು. ಕಿರಕಳ್ಳಿಯನ್ನು ದಾಟಿ ಮುಂದೆ ಬರುವಷ್ಟರಲ್ಲಿ ಸೋಬಾನೆ ಕಾಳೆ ಮತ್ತು ಹೊನ್ನಾರು ಹಾಡು ಸ್ತಬ್ಧವಾಯಿತು. ಕೂತಿನಾಡಮ್ಮ ಅಲ್ಲಿಯೇ ನೆಲಸಿದಳು. ಈಕೆ ನಿಂತ ತಾಣಕ್ಕೆ 'ದೈವ ಬಂದ ಉಡುವೆ' ಎಂದು ಕರೆಯುವರು. ಕೂತಿನಾಡಮ್ಮನ ಸುಗ್ಗಿ ಕೂಡ ದೇವೀರಮ್ಮನ ಜಾತ್ರೆಯ ಕಾಲದಲ್ಲೆ ನಡೆಯುತ್ತದೆ.

ಕೂತಿನಾಡಮ್ಮನ ಸುಗ್ಗಿಯಲ್ಲಿ ಕಿರಕಳ್ಳಿ ಮತ್ತು ಹೆತ್ತೂರ ಗ್ರಾಮಸ್ಥರದೆ ಪ್ರಧಾನ

ಪಾತ್ರ. ಮಂಗಳವಾರ ಸೂರ್ಯೋದಯವಾದ ಕೂಡಲೆ ಕಿರಕಳ್ಳಿ ಮತ್ತು ಹೆತ್ತೂರು ಗ್ರಾಮದ ಗಂಡಸರು ದೈವಬಂದ ಬನಕ್ಕೆ ಹೋಗಿ ಆ ಜಾಗವನ್ನೆಲ್ಲ ಗುದ್ದಲಿಯಿಂದ ಹೆರೆದು ಚೊಕ್ಕಟಗೊಳಿಸುವರು ಅನಂತರ ಆ ಚಂಗಿ ಮರದ ಬುಡದಲ್ಲಿ ಕೂತಿನಾಡಮ್ಮನನ್ನು ಆವಾಹಿಸಿದ ಕಲ್ಲಿನ ಸುತ್ತ ಲಕ್ಕೆಯ ಸೊಪ್ಪಿನಿಂದ ಚಪ್ಪರ ನಿರ್ಮಿಸುವರು. ದೈವಬಂದ ಉಡುವೆಯಲ್ಲಿ ಕಳಶಾಕಾರದ ಮಣ್ಣಿನ ಉಂಡೆಗಳು ಚದುರಿದಂತೆ ಹರಡಿವೆ. ಇವು ದೇವತೆಯ ಮಹಿಮೆಯಿಂದ ವರ್ಷವರ್ಷವೂ ಮೂಡಿದ್ದೆಂದು ಜನರ ಭಾವನೆ. ಕೂತಿನಾಡಮ್ಮನಿಗೆ ಚಪ್ಪರ ಹಾಕುವ ಕೆಲಸ ಬೆಳಗಿನ 8-9 ಗಂಟೆಗೆಲ್ಲ ಮುಗಿಯಬೇಕು. ಏಕೆಂದರೆ ಅನಂತರ ಗಂಡಸರು ದೈವಬಂದ ಉಡುವೆಗೆ ಹೋಗುವಂತಿಲ್ಲ ಮೀರಿಹೋದರೆ ಅಂಥವರು ಕಲ್ಲಾಗುತ್ತಾರೆಂಬ ನಂಬಿಕೆ ಜನಜನಿತವಾಗಿದೆ. ಹಿಂದೆ ಒಬ್ಬ ಭಿಲ್ಲರವನು ಹೆಣ್ಣುಮಕ್ಕಳ ಸುಗ್ಗಿಯನ್ನು ನೋಡಿ ಕಲ್ಲಾದನೆಂದು ಕಥೆಯಿದೆ. ಈ ಹಿನ್ನೆಲೆಯಲ್ಲಿ ಇಂದಿಗೂ ಕೂತಿನಾಡಮ್ಮನ ಚಪ್ಪರವಾದ ಬಳಿಕ ಚಪ್ಪರ ಕೆಲಸದಲ್ಲಿ ಭಾಗವಹಿಸಿದ ಹೆತ್ತೂರಿನ ಗ್ರಾಮಸ್ಥರಲ್ಲಿ ಹಿರಿಯನನ್ನು ಅಲ್ಲಿಯೇ ಇರುವ ಯಜಮಾನ ಕಲ್ಲಿನ ಮೇಲೆ ಕರಿಯ ಕಂಬಳಿ ಗದ್ದುಗೆ ಹಾಕಿ ಕೂರಿಸಿ ಭಿಲ್ಲರವನು ಬಗಿನೆ ಕಳ್ಳನ್ನು ಕುಡಿಯಲು ನೀಡುತ್ತಾನೆ. ಅನಂತರ ಇತರ ಗಂಡಸರಿಗೂ ಬಗಿನೆ ಕಳ್ಳಿನ ಸತ್ಕಾರವಾಗುತ್ತದೆ. ಇದಾದ ಬಳಿಕ ಗಂಡಸರು ಯಾರೂ ಕೂತಿನಾಡಮ್ಮನ ತಾಣಕ್ಕೆ ಹೋಗುವಂತಿಲ್ಲ. ಹೀಗೆ ಪುರುಷರನ್ನು ಹೆಣ್ಣುಮಕ್ಕಳ ಸುಗ್ಗಿಗೆ ನಿಷೇಧಿಸಿರುವ ಹಿನ್ನೆಲೆಯಲ್ಲಿ ಬಲವಾದ ಕಾರಣವಿರಬೇಕೆನಿಸುತ್ತದೆ. ಪುರುಷನೊಬ್ಬನಿಂದ ಅಹಿತಕರಘಟನೆ ನಡೆದು ಮುಂದೆ ಹೆಣ್ಣುಮಕ್ಕಳ ರಕ್ಷಣೆಯ ದೃಷ್ಟಿಯಿಂದ ಈ ಪದ್ಧತಿ ಜಾರಿಯಲ್ಲಿರಬೇಕು.

ಕೂತಿನಾಡಮ್ಮನ ಪೂಜೆ ಇತ್ಯಾದಿಗಳೆಲ್ಲ ಕಿರಕಳ್ಳಿ ಪಟೇಲರ ಕುಟುಂಬದ ವಿಧವೆಯ ನೇತೃತ್ವದಲ್ಲಿ ನಡೆಯುತ್ತವೆ ಅಂದು ಬೆಳಗ್ಗೆ ಗಂಡಸರೆಲ್ಲ ಹೊರಟುಹೋದ ಮೇಲೆ ಪಟೇಲರ ಮನೆಯಿಂದ ಮೊದಲು ಹಣ್ಣುಕಾಯಿಗಳನ್ನು ದೇವತೆಗೆ ಅರ್ಪಿಸಲಾಗುವುದು. ಚಪ್ಪರವಾದ ಕೂಡಲೆ ಗಂಡಸರು ಮಸಿಗುಂಡುಗಳನ್ನು ಹುಡಿಸಿ ಸೂಚನೆ ನೀಡುವರು. ಕೆಲವು ಭಕ್ತರು ದೇವತೆಗೆ ಮಸಿಗುಂಡುಗಳನ್ನು ಹುಡಿಸುವುದಾಗಿ ಹರಕೆ ಮಾಡಿಕೊಳ್ಳುವುದೂ ಉಂಟು ಈ ಶಬ್ದ ಕೇಳಿದ ಕೂಡಲೆ ಕಿರಕಳ್ಳಿ ಪಟೇಲರ ಮನೆಯ ವಿಧವೆಗೆ ಮೈಮೇಲೆ ಆವೇಶ ಬರುತ್ತದೆ. ಆಕೆ ದೇವರ ಒಡವೆಗಳನ್ನು ಹೆಡಿಗೆಯಲ್ಲಿ ತುಂಬಿಕೊಂಡು ಬಿಳಿಯ ಉಡುಗೆ ಉಟ್ಟು ಓಡಿಬರುವಳು*. ಜೊತೆಯಲ್ಲಿ ಸಹಾಯಕ್ಕೆ ಮತ್ತೊಬ್ಬ ಹೆಂಗಸು ಇರುತ್ತಾಳೆ. ವಿಧವೆ ಹೆಂಗಸು ಹಿಂದಿನರಾತ್ರಿಯಿಂದಲೂ ಉಪವಾಸವಿರುತ್ತಾಳೆ. ರಾತ್ರಿ ಹೊಸ ಕುಕ್ಕೆಯಲ್ಲಿ ಬತ್ತ ಕುಟ್ಟಿ ಅದರಿಂದ ಅಕ್ಕಿ ತೆಗೆದಿರುತ್ತಾರೆ ಸುಗ್ಗಿಯ ದಿನ ಬೆಳಗ್ಗೆ ಆ ಅಕ್ಕಿಯಿಂದ ಹುಗ್ಗಿಬಾನ[1] ಮಾಡಿ ಕೂತಿನಾಡಮ್ಮನಿಗೆ ನೈವೇದ್ಯ ತಯಾರಿಸುತ್ತಾರೆ. ಕೂತಿ

---

* ಕೊಡವ ವಿಧವೆಯರು ಬಿಳಿಯ ಉಡುಗೆ ತೊಡುವುದನ್ನು ಇಲ್ಲಿ ಸ್ಮರಿಸಬಹುದು

[1] ಅಕ್ಕಿ, ಅರಿಶಿನ, ಉಪ್ಪು ಹಾಕಿ ಮಾಡಿದ ಅನ್ನ ಹುಗ್ಗಿಬಾನ.

ನಾಡಮ್ಮ ಮಕ್ಕಳಿಲ್ಲದವರಿಗೆ ಮಕ್ಕಳನ್ನು ದಯಪಾಲಿಸುತ್ತಾಳೆ ಎಂಬ ನಂಬಿಕೆ ಇದೆ. ಅಂಥವರು ಆಕೆಗೆ ಹರಸಿಕೊಂಡು ಸುಗ್ಗಿಯ ಹಿಂದಿನ ದಿನವೆ ಕಿರಕಳ್ಳಿಯಲ್ಲಿ ತಂಗಿದ್ದು ಉಪವಾಸವಿರುತ್ತಾರೆ. ಬೆಳಿಗ್ಗೆ ವಿಧವೆಯ ಜೊತೆಯಲ್ಲಿ ದೈವಬಂದ ಬನಕ್ಕೆಹೋಗಿ ಹಣ್ಣುಕಾಯಿ ಮಾಡಿಸಿ ಹರಕೆ ಸಲ್ಲಿಸುವರು.

ಹತ್ತುಗಂಟೆಯಿಂದಲೆ ಮಹಿಳೆಯರು ಹೆಣ್ಣುಮಕ್ಕಳ ಸುಗ್ಗಿಗೆ ಬರುತ್ತಾರೆ. ಕಾಡಿನ ದಾರಿಯಾದರೂ ಪುರುಷರಿಗೆ ಪ್ರವೇಶವಿಲ್ಲದಿರುವುದರಿಂದ ನಿರ್ಭಯವಾಗಿ ಹೆಂಗಸರು ಓಡಾಡುವರು. ಮಧ್ಯಾಹ್ನ ಮೂರುಗಂಟೆಯವರೆಗೂ ದೈವ ಬಂದ ವನದಲ್ಲಿ ಸ್ತ್ರೀಯರ ಚಲನವಲನವಿರುತ್ತದೆ ಅಲ್ಲಿಗೆ ಹೋದವರೆಲ್ಲ ಹಣ್ಣುಕಾಯಿ ಮಾಡಿಸುವರು. ಅನಂತರ ಹೆಂಗಸರೆಲ್ಲ ಸೇರಿ ಎರಡು ಕೈಗಳಲ್ಲೂ ಗೆಜ್ಜೆ ಹಿಡಿದು ಸೊಂಟಕ್ಕೆ ಲಕ್ಕೆಸೊಪ್ಪು ಸಿಕ್ಕಿಸಿಕೊಂಡು "ಅಲಲಲೇ ಕೂಹಿ" ಎಂದು ಕೂಗುತ್ತ ಸುಗ್ಗಿ ಕುಣಿಯುವರು[1]. ಕೊಡವ ಜನಾಂಗದಲ್ಲಿ ಹಾಗೂ ಆದಿವಾಸಿಗಳಲ್ಲಿ ಹೆಂಗಸರು ಕುಣಿಯುವುದು ರೂಢಿಯಲ್ಲಿದೆ. ಗೌಡ ಜನಾಂಗದಲ್ಲಿ ಹೆಂಗಸರ ಸುಗ್ಗಿ ಕುಣಿತ ಕಂಡುಬರುವುದು ಇಲ್ಲಿಯೇ. ಈ ಕುಣಿತವನ್ನು ಇವರು ಬೇರೆ ಸಂದರ್ಭಗಳಲ್ಲಿ ಕುಣಿಯುವುದಿಲ್ಲ ಹೀಗೆ ಕೂತಿನಾಡಮ್ಮನ ಸುಗ್ಗಿ ಮುಕ್ತಾಯವಾಗುತ್ತಲೆ ಅದೇ ದಿನ ಸಂಜೆ ದೇವೀರಮ್ಮನ ಬಿಲ್ಲುಸುಗ್ಗಿ ಪ್ರಾರಂಭವಾಗುವುದು.

ಮಂಗಳವಾರ ಬೆಳಿಗ್ಗೆ ಇತ್ತ ದೇವೀರಮ್ಮನನ್ನು ನಾಡಗೌಡರ ಮನೆಯಿಂದ ಈಶ್ವರ ದೇವಾಲಯಕ್ಕೆ ತರಲಾಗುವುದು. ಅನಂತರ ದೇವಿಗೆ ಅಲಂಕಾರ ಮಾಡಿ, ಪೂಜಿಸಿ, ಹಣ್ಣುಕಾಯಿಗಳನ್ನು ಅರ್ಪಿಸಿ ಮಂಗಳಾರತಿ ಮಾಡುವರು. ಚಿಕ್ಕಮ್ಮನನ್ನು ಹೊರುವವ ಯಥಾಪ್ರಕಾರ ಉಪವಾಸವಿದ್ದು ಸ್ವಹಸ್ತದಿಂದ ಬಿಲ್ಲಹಿಟ್ಟು ತಯಾರಿಸಿ ಚಿಕ್ಕಮ್ಮನಿಗೂ ದೇವೀರಮ್ಮನಿಗೂ ನೈವೇದ್ಯ ಮಾಡುವನು. ಪ್ರತಿ ಮನೆಯಲ್ಲೂ ಒಂದೊಂದು ಬಿಲ್ಲು ಕಟ್ಟಿ ಅದನ್ನು ದೇವಗಣಗಳು ಹೂವಿನಿಂದ ಸಿಂಗರಿಸಿ ಪೂಜಿಸುವರು. ಸಂಜೆಗತ್ತಲಾದ ಕೂಡಲೆ ವಾದ್ಯದವರು ಮನೆಮನೆಗೆ ಹೋಗಿ ಬಿಲ್ಲುಹಿಡಿದವರನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವರು. ಈಶ್ವರನ ದೇವಾಲಯ ಸಮೀಪಿಸುವಾಗ ನಾಡಗೌಡರು, ಮಂದೆ ಪಟೇಲರು ಮತ್ತು ಗ್ರಾಮಪಟೇಲರ ಮನೆಯ ಹೆಣ್ಣುಮಕ್ಕಳು ಸೊಡರು ಹೊತ್ತಿಸಿಕೊಂಡು ಬಿಲ್ಲಿನವರ ಜೊತೆಯಲ್ಲಿ ದೇವಾಲಯವನ್ನು ಪ್ರವೇಶಿಸುವರು ಸುಮಾರು ಹತ್ತುಗಂಟೆಗೆ ದೇವೀರಮ್ಮ ಮತ್ತು ಚಿಕ್ಕಮ್ಮ ದೇವತೆಗಳನ್ನು ಸುಗ್ಗಿಕಟ್ಟೆಗೆ ವಾದ್ಯದಲ್ಲಿ ತೆಗೆದುಕೊಂಡು ಹೋಗುವರು. ಅಲ್ಲಿ ದೇವೀರಮ್ಮನನ್ನು ಹಿಂದಿನಂತೆಯೆ ಉಯ್ಯಾಲೆಯಲ್ಲಿ ಕೂರಿಸಿ ಆಕೆಯ ಸಮ್ಮುಖದಲ್ಲಿ ಮತ್ತೊಮ್ಮೆ ಬಿಲ್ಲುಗಳನ್ನಿಟ್ಟು ಸಾಮೂಹಿಕವಾಗಿ ಪೂಜಿಸಲಾಗುವುದು. ಅನಂತರ ಉತ್ಸಾಹದಿಂದ ಸುಗ್ಗಿಕುಣಿಯುವರು. ರಾತ್ರಿಯೆಲ್ಲ ಹೀಗೆ ಕುಣಿಯುತ್ತಾರೆ. ಬೆಳಗಿನ ನಾಲ್ಕು

1 ಸೊಂಟಕ್ಕೆ ಲಕ್ಕೆಸೊಪ್ಪು ಸಿಕ್ಕಿಸುವುದು ಆದಿಮಾನವ ಮೈಮುಚ್ಚಲು ಮರದ ತೊಗಟೆ ಸೊಪ್ಪುಗಳನ್ನು ಉಪಯೋಗಿಸುತ್ತಿದ್ದುದರ ಸಂಕೇತವಿರಬಹುದೆ?

ಗಂಟೆಯ ಸುಮಾರಿಗೆ ಎಂಟರಿಂದ ಹತ್ತುಮಂದಿ ಗಂಡಸರು ಶರಾಯಿ, ಕಪ್ಪುಕೋಟು ಜರಿಯಪೇಟ ತೊಟ್ಟು ಸೊಂಟಕ್ಕೆ ನಡುಕಟ್ಟು ಕಟ್ಟಿ ಕೈಯಲ್ಲಿ ಸುಗ್ಗಿಕತ್ತಿಹಿಡಿದು ಸುಗ್ಗಿಕುಣಿಯುವರು. ಈ ಕುಣಿತದ ವೇಷ ಭೂಷಣಗಳನ್ನು ಗಮನಿಸಿದಾಗ ಪಕ್ಕದ ಜಿಲ್ಲೆಯ ಕೊಡವರ ಪ್ರಭಾವವಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಸುಗ್ಗಿ ಕತ್ತಿ ಕುಣಿತದ ಗತ್ತಿಗೆ ಅನುಗುಣವಾಗಿ ಹರಿಜನರು ಹಲಗೆ ಬಡಿಯುತ್ತಿರು ತ್ತಾರೆ. ಈ ಕುಣಿತವನ್ನು ಅನುಸರಿಸಿ ಸುಮಾರು ಐನೂರರಿಂದ ಆರುನೂರುಮಂದಿ ಬಿಲ್ಲನ್ನು ಹಿಡಿದು ಕುಣಿಯುವರು. ಇದು ಸಾಮಾನ್ಯವಾಗಿ ಒಂದು ಗಂಟೆಯ ಕಾಲ ನಡೆಯುತ್ತದೆ. ದೇವಗಣಗಿಲ ಹೂವಿನಿಂದ ಅಲಂಕೃತವಾದ ಬಿಲ್ಲಿನ ಕುಣಿತ ಬಹಳ ಆಕರ್ಷಕವಾಗಿರುತ್ತದೆ. ಕತ್ತಲೆ ಹರಿಯುವ ಮುನ್ನ ಭಕ್ತಾದಿಗಳು ಹಣ್ಣುಕಾಯಿ ಗಳನ್ನು ದೇವರಿಗೆ ಒಡೆಸುವರು. ಊರಿನಲ್ಲಿ ಹೊಸದಾಗಿ ಮದುವೆಯಾದವರು 'ಇಡು ಗೊನೆ' ಬಾಳೆಹಣ್ಣನ್ನು ದೇವರಿಗೆ ಅರ್ಪಿಸುವರು. ಅಷ್ಟರಲ್ಲಿ ಪೂರ್ವದಿಗಂತದಲ್ಲಿ ನೇಸರು ಮೂಡುವುದು ಬೆಳಗಾದ ಬಳಿಕ ದೇವರುಗಳನ್ನು ಮರಳಿ ದೇವಸ್ಥಾನಕ್ಕೆ ಕೊಂಡೊಯ್ಯುವರು.

ಬುಧವಾರ 'ಮಡೆ'. ಚಿಕ್ಕಮ್ಮನನ್ನು ಹೊರುವವರು ಅಂದೂ ಉಪವಾಸವಿದ್ದು ಹೊಸಮಡಕೆಗಳಲ್ಲಿ ನಾಡಗೌಡರ ಮನೆಯ ಮಿಾಸಲು ಗದ್ದೆಯ ಅಕ್ಕಿಯಿಂದ ಅನ್ನ ಮತ್ತು ಹುಗ್ಗಿಮಾಡಿ ಈ ಎರಡು ಮಡಕೆಗಳನ್ನು ಚಿಕ್ಕಮ್ಮನ ಹೆಡಗೆಯಲ್ಲಿ ಇಡುವರು. ಮಧ್ಯಾಹ್ನ ಸುಮಾರು ಎರಡು ಗಂಟೆಯ ಹೊತ್ತಿಗೆ ಎರಡು ಮೈಲಿ ದೂರದಲ್ಲಿರುವ ಮಡೆಬನಕ್ಕೆ ದೇವರನ್ನು ಕೊಂಡೊಯ್ಯುವರು. ಸಂಪೂರ್ಣ ಕಾಡು ಹಾದಿಯಲ್ಲಿ ಈ ಪಯಣ ಸಾಗುವುದು. ಮಡೆಬನವನ್ನು ಚಿಕ್ಕಮ್ಮನ ತವರು ಮನೆ ಯೆಂದು ಭಾವಿಸಲಾಗುವುದು. ಆದ್ದರಿಂದ ಮಡೆಬನದಲ್ಲಿ ಚಪ್ಪರ ಹಾಕುವ, ತೋರಣ ಕಟ್ಟುವ ಕೆಲಸಗಳನ್ನು ಕೊಣಬನಹಳ್ಳಿ ಗ್ರಾಮದವರೆ ನಿರ್ವಹಿಸುವರು. ದೇವತೆಗಳು ಮಡೆಬನವನ್ನು ತಲಪಲು ಎರಡು ಗಂಟೆಗಳೇ ಬೇಕಾಗುತ್ತವೆ. ಏಕೆಂದರೆ ದೇವೀರಮ್ಮನ ಮೂಗುತಿಯು ಕಾಡಿನ ಮಧ್ಯದಲ್ಲಿರುವ ದೇವರಕೆರೆಯಲ್ಲಿ ಬಿದ್ದುಹೋಗಿತ್ತೆಂಬ ನಂಬಿಕೆಯ ಆಧಾರದ ಮೇಲೆ ದೇವತೆಗಳನ್ನು ಹೊತ್ತವರು, ಅದರಲ್ಲೂ ಚಿಕ್ಕಮ್ಮನನ್ನು ಹೊತ್ತವರು ದೇವರ ಕೆರೆಯಲ್ಲಿ ಮೂಗುತಿ ಹುಡುಕಲು ತೊಡಗುತ್ತಾರೆ. ಈ ಸಂದರ್ಭ ದಲ್ಲಿ ಹರಿಜನರು ಹಾಡು ಹೇಳುವರು.

ಹೆತ್ತೂರು ದೇವೀರವ್ವ ಸತ್ಯವಂತೆ ಕಾಣೆ
ಅವರು ಹುಟ್ಟಿ ಬಂಜೆಯ ಕೈಬೀಸಿ ಕರೆದಾರೆ
ಅವರು ತೊಟ್ಟಿಲು ಸಹವಾಗಿ ಕಳುಹಾರೆ

ದ್ಯಾವಮ್ಮ ಉಟ್ಟಾರೆ ದೇವಾಂಗ ಉಡುಗೆಯ
ಅವರು ಸುತ್ತುಹಾಕ್ಯಾರೆ ಸರ್ಪಕಾಳಿಂಗನ
ಅವರು ಎಡೆಯ ತಿದ್ದವರೆ ನೆರಿಗೆಯ

ಈ ಬೇಲೀಲಿ ಆಡೋದು ಬಿಲ್ಲೀರಿ ಹಾವು
ಆಕೆ ದೇವಮ್ಮನ ನೆರಿಗೇಲಿ ಆಡೂದು
ಏಳ್ಹೆಡೆ ಶೇಷ ಎಳೆನಾಗ

ಆಕೆ ದೇವಮ್ಮನ ಬಟ್ಟೆ ಒಗ್ಯೋಕ್ ಬಂದು
ತುಪ್ಪಿಲ್ಲನೆಂದ ಮಡಿವಾಳಸೆಟ್ಟಿ
ಈ ಏರಿ ಕೆಳಗೈತಿ ಎಳನೀರು

ಹೆಡಗೇಲಿ ಹಣ್ಣು ಬಂದ ಗಡಿಗೇಲಿ ತುಪ್ಪ ಬಂದ
ಆಕೆ ದೇವಮ್ಮಗೆ ಹರಕೆ
ನಡುವಿಗೆ ನಡುಕಟ್ಟು ನಡುವಿಗೆ ಚಿನ್ನದ ಡಾಬು

ನಡೆಮಡಿ ಮೇಲೆ ಬರುವೋಳೆ
ನಡೆಮಡಿ ಮೇಲೆ ಬರುವೋಳೆ ದ್ಯಾವಮ್ಮ
ನಾಡೊಳ್ಳೆದೆಂದು ನೆಲಸವ್ರೆ

ಮಂದಿಗೌಡಗಳ ಹಿಂದೆ ಬರುವೋರ್‍ಯಾರೆ
ಆಕೆ ಬಂದಿ ಬಾರಕೆ ಬಳುಕೋರೆ
ಆಕೆ ನಾಡೊಳ್ಳೆದೆಂದು ನೆಲಸವ್ರೆ

ನಾಡಗೌಡಗಳ ನಡುವೆ ಬರುವೋರ್‍ಯಾರೆ
ಆಕೆ ಓಲೆ ಬಾರಕೆ ಬಳುಕೋರು ದ್ಯಾವಮ್ಮ
ಆಕೆ ನಾಡೊಳ್ಳೆದೆಂದು ನೆಲಸವ್ರೆ

ಯಾವೂರ ನೋಡಿದ್ರೆ ನನ್ನೂರು ಬೆಲೆಯಿಲ್ಲ
ಅವರು ಯಾಲಕ್ಕಿರಾಶಿ ಅಳೆಯೋರು
ಅವರು ಯಾಲಕ್ಕಿರಾಶಿ ಅಳೆಯೋರು ಹೆತ್ತೂರ್‌ಮಂದಿ
ಅವರ ಓಣಕಲ್ಲಿನ ಬೆಲೆಯಿಲ್ಲ

ದಂಡು ಬತ್ತೈತೆಂದು ಅಂಗಡಿ ಎತ್ತ್ಯೋವ್ರೆ
ದಂಡಲ್ಲ ಕಾಣೆ ನನ್ನೂರು ಗೌಡಗಳು ಅವರು
ನಂಜನಗೂಡಿಗೆ ಹೋಗಿ ಬರುತಾರೆ

ನಂಜನಗೂಡಿಗೆ ನಾಲ್ಕೈದು ಬಾಗಿಲು
ನಂದಿಕೋಲು ಹೊಯ್ದು ಪಟನೊಯ್ದು
ನಂಜಯ್ಯ ಮಂಗಳಾರತಿ ಹದಿನೈದು

ದೇವೀರಮ್ಮನ ಕುರ್ಜಿಯನ್ನು ಹೊತ್ತ ಬ್ರಾಹ್ಮಣಅರ್ಚಕನಿಗಿಂತ ಚಿಕ್ಕಮ್ಮನನ್ನು ಹೊತ್ತವನಿಗೆ ಹೆಚ್ಚಿನ ಆವೇಶ ಉಂಟಾಗಿರುತ್ತದೆ. ಮೂಗುತಿ ಹುಡುಕುವ ಭರದಲ್ಲಿ ಈತ ತೊಟ್ಟಿದ್ದ ಬಿಳಿಯಬಟ್ಟೆ ಕೆಸರಾಗಿ ಕೆಂಪುಬಣ್ಣಕ್ಕೆ ತಿರುಗುತ್ತದೆ. ಹಿಂದಿನ ದಿನಗಳಿಗಿಂತ ಈತನಿಗೆ ಇಂದು 'ಗಣ' ಹೆಚ್ಚಾಗಿರುತ್ತದೆಂದು ಹೇಳುವರು. ಆದ್ದರಿಂದಲೆ ಚಿಕ್ಕಮ್ಮ ಮಡೆ ಬನಕ್ಕೆ ನೇರಮಾರ್ಗದಲ್ಲಿ ಹೋಗದೆ ಅಂಕುಡೊಂಕಾದ ಕಾಡಿನಹಾದಿಯನ್ನು ತುಳಿಯುತ್ತದೆ ಆತ ಕುತ್ತಿಗೆಯನ್ನು ಅಲ್ಲಾಡಿಸುತ್ತ ಚಿಕ್ಕಮ್ಮನ ಹೆಡಗೆಯನ್ನು ತಲೆಯಲ್ಲಿ ಹೊತ್ತು ಕೈಬಿಟ್ಟು ತಗ್ಗು ತಿಟ್ಟುಗಳನ್ನು ಹತ್ತುತ್ತ ಹೋಗುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಚಿಕ್ಕಮ್ಮನನ್ನು ಅನುಸರಿಸಿ ದೇವೀರಮ್ಮ ಹೋಗಬೇಕು. ಚಿಕ್ಕಮ್ಮ

ದೇವರಕೆರೆಯಿಂದ ಸುಬ್ರಹ್ಮಣ್ಯ-ಸಕಲೇಶಪುರ ರಸ್ತೆಗೆ ಬರುತ್ತದೆ. ಮುಂದೆಪಟೇಲರ ಮನೆಯುವರು ಈ ರಸ್ತೆಗೆ ತೋರಣ ಕಟ್ಟಿರುತ್ತಾರೆ. ತೋರಣವನ್ನು ಸಮೀಪಿಸು ತ್ತಿದ್ದಂತೆಯೆ ಚಿಕ್ಕಮ್ಮ ಮತ್ತು ದೇವೀರಮ್ಮ ಮುಂದೆ ಹೆಜ್ಜೆ ಇಡದಂತೆ ಕಲ್ಲಿನಂತೆ ನಿಂತುಬಿಡುತ್ತವೆ. ಈ ಸನ್ನಿವೇಶವನ್ನು ನೋಡಲು ಭಾರಿ ಜನಸಮೂಹ ಸೇರಿರುತ್ತದೆ. ಮುಂದೆಪಟೇಲರ ಮನೆಯುವರು ಮತ್ತು ಅಲ್ಲಿ ಜಮೀನುಗಳನ್ನು ಹೊಂದಿದವರು ಇಡಿಗಾಯಿಗಳನ್ನು ಒಡೆದು ದೇವತೆಗಳ ಮನವೊಲಿಸುತ್ತಾರೆ ಆಗ ಚಿಕ್ಕಮ್ಮ ನೆರೆದಿದ್ದ ಜನರಗುಂಪಿನಲ್ಲಿ ಕೆಲವರನ್ನು ನೂಕುತ್ತ ದೇವೀರಮ್ಮನನ್ನು ಹಿಡಿದುಕೊಳ್ಳುವಂತೆ ಸೂಚನೆ ನೀಡುತ್ತದೆ ಅಂಥ ವ್ಯಕ್ತಿಗಳು ದೇವೀರಮ್ಮನ ಅಡ್ಡೆಯನ್ನು ಹೊರುತ್ತಾರೆ. ಆ ಬಳಿಕ ದೇವತೆಗಳು ನೇರವಾಗಿ ಮಡೆಬನ ಪ್ರವೇಶಿಸುತ್ತವೆ. ಮಡೆಬನ ಹತ್ತಿರ ವಾಗುತ್ತಿದ್ದಂತೆ ಕೋಣಬನಹಳ್ಳಿ ಗ್ರಾಮದವರು ದೇವೀರಮ್ಮನನ್ನು ಹೊತ್ತುಕೊಂಡು ಹೋಗಿ ಕುಳ್ಳಿರಿಸುವರು ಇಲ್ಲಿ ಮೊದಲು ಕೋಣಬನಹಳ್ಳಿ ಗ್ರಾಮದವರಿಂದ ಹಣ್ಣುಕಾಯಿ ಸಮರ್ಪಣೆಯಾಗುವುದು. ಅನಂತರ ಚಿಕ್ಕಮ್ಮನಿಗೆ ಮಡೆ ಅನ್ನವನ್ನು ನೈವೇದ್ಯ ಮಾಡುವರು. ನೂತನ ದಂಪತಿಗಳು ದೇವೀರಮ್ಮನಿಗೆ ಇಡಿಗೊನೆ ಬಾಳೆಹಣ್ಣು ಮತ್ತು ತೆಂಗಿನಕಾಯಿಗಳನ್ನು ಸಲ್ಲಿಸಿ ಮೂರು ಮೂರುಬಾರಿ ಸಾಷ್ಟಾಂಗ ನಮಸ್ಕಾರ ಮಾಡುವರು. ಇದಕ್ಕೆ 'ಮಡೆಮುಗಿಯುವುದು' ಎನ್ನುತ್ತಾರೆ. ಈ ವಿಧಿಗಳೆಲ್ಲ ಮುಗಿಯುವಷ್ಟರಲ್ಲಿ ಸಂಜೆಯಾಗುವುದು. ದೇವತೆಗಳನ್ನು ಈಶ್ವರ ದೇವಾಲಯಕ್ಕೆ ತರುವರು. ಈಗ ಚಿಕ್ಕಮ್ಮನ ಮುಖ ಕಪ್ಪಾಗಿ ಪೇಲವವಾಗಿರುತ್ತ ದೆಂದು ಜನ ಭಾವಿಸುವರು. ಏಕೆಂದರೆ ತವರು ಮನೆಯಿಂದ ಹೊರಟು ಬರುವಾಗ ಹೆಣ್ಣು ಮಕ್ಕಳು ವ್ಯಥೆಪಡುವಂತೆ ಚಿಕ್ಕಮ್ಮನೂ ತನ್ನ ತವರು ಕೋಣಬನಹಳ್ಳಿಯಿಂದ ಹಿಂದಿರುಗುವಾಗ ದುಃಖಿಗೊಂಡಳೆಂದು ತಿಳಿಯಲಾಗುವುದು. ಆ ದಿನವೇ ಹೊನ್ನಾರು ಸುಗ್ಗಿಯ ದಿವಸ ಸುಗ್ಗಿಕಟ್ಟೆಯಲ್ಲಿ ಕಟ್ಟಿದ್ದ ಉಯ್ಯಾಲೆ ಮಣೆಯನ್ನು ಬಿಚ್ಚಿ ದೇವಾಲಯಕ್ಕೆ ತಂದಿಡುವರು ದೇವೀರಮ್ಮ ಚಿಕ್ಕಮ್ಮ ದೇವತೆಗಳು ಮುಂದಿನ ಚೈತ್ರ ದವರೆಗೆ 'ಮಡಿಗುಡಾರ' ಸೇರುತ್ತವೆ. ದೇವತೆಗಳ ಆಭರಣಗಳನ್ನು ನಾಡಗೌಡರ ಮನೆಯಲ್ಲಿ ಇಡಲಾಗುವುದು ಇಲ್ಲಿಗೆ ಒಂದು ವಾರದಿಂದ ಕುಣಿದು, ನಲಿದ ಹೆತ್ತೂರು ಸುಗ್ಗಿ ಮುಕ್ತಾಯವಾಗುವುದು.

ಹೆತ್ತೂರಿನವರು ಈ ಸುಗ್ಗಿಗೆ ಬಂಧುಗಳನ್ನು ಆಮಂತ್ರಿಸಿರುತ್ತಾರೆ. ಸುಗ್ಗಿಯ ಬೆಸೆಯಿಂದ ಒಂದು ವಾರ ಕಾಲ ಮಾಂಸಾಹಾರವನ್ನು ಸೇವಿಸದ ಶಾಖಾಹಾರಿಗಳ ನಾಲಿಗೆ ಮಾಂಸದೂಟಕ್ಕಾಗಿ ತವಕಪಡುತ್ತದೆ. ಆದ್ದರಿಂದಲೆ ಸುಗ್ಗಿ ಮುಗಿದ ಮರು ದಿವಸ ಮಾಂಸಾಹಾರಿಗಳ ಮನೆಯಲ್ಲಿ ಮಾಂಸದಡಿಗೆ ಮಾಡಿ ಬಂಧುಗಳನ್ನು ಸತ್ಕರಿಸು ವರು. ಹರಿಜನರು ವಾದ್ಯದಲ್ಲಿ ಮನೆಮನೆಗೆ ಹೋಗಿ ಅಕ್ಕಿ, ಬತ್ತ ಮತ್ತು ಹಬ್ಬದಡಿಗೆ ಯನ್ನು ಸಂಗ್ರಹಿಸಿಕೊಂಡು ಹೋಗುವರು ಹೀಗೆ ಹೆತ್ತೂರು ಸುಗ್ಗಿ ವಿಶಿಷ್ಟವಾಗಿದ್ದು. ಆ ಜನರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಪರಸ್ಪರರಲ್ಲಿ ಪ್ರೀತಿ

ವಿಶ್ವಾಸಗಳನ್ನು ಕುದುರಿಸುವ ಇಂಥ ಜಾತ್ರೆಗಳು ಜನಪದ ಸಮುದಾಯ ಜೀವನ ಸುಭದ್ರವಾಗಿ ನೆಲೆಯೂರಲು ಅವಕಾಶ ಮಾಡಿಕೊಟ್ಟಿದೆ. ಬದುಕಿನ ದುಃಖದುಮ್ಮಾನಗಳನ್ನು ಮರೆಯಲು ಇಂಥ ಜಾತ್ರೆಗಳು ನೆರವಾಗುತ್ತವೆ.*

---

* ಈ ಲೇಖನ ಬರೆಯಲು ಮಾಹಿತಿ ನೀಡಿದ ನನ್ನ ಸೋದರಮಾವ ಹೆತ್ತೂರಿನ ಶ್ರೀ ಎಚ್. ಎಸ್. ಅಪ್ಪಸ್ವಾಮಿಗೌಡ, ಎಚ್. ಎಂ. ಪುಟ್ಟಸ್ವಾಮಿಗೌಡ ಮತ್ತು ಶ್ರೀಮತಿ ಕೆಂಪಮ್ಮ ಇವರುಗಳಿಗೆ ವಂದನೆಗಳು.

ಸೇವೆ ಮತ್ತು ತ್ಯಾಗಕ್ಕಾಗಿಯೇ ಜೀವನವಿರುವುದು.

—ರಾಮದಾಸ್

ಜಗತ್ತಿನ ಇತಿಹಾಸದಲ್ಲಿ ಮಹಾತ್ಯಾಗಗಳನ್ನು ಮಾಡುವವರು ಮಹಾ ಪುರುಷರು. ಆದರೆ ಫಲಗಳನ್ನು ಅನುಭವಿಸುವವರು ಸಾಮಾನ್ಯ ಜನರು.

—ಸ್ವಾಮಿ ವಿವೇಕಾನಂದ

ಪ್ರಾಚೀನ ಭಾರತದ ವೈಭವವನ್ನು ಪುನರುಜ್ಜೀವನಗೊಳಿಸುವುದು ನಮ್ಮಿಂದ ಸಾಧ್ಯವಿಲ್ಲ. ಆದರೆ ಭಾರತದ ಭವಿಷ್ಯತ್ತನ್ನು ಉಜ್ವಲಗೊಳಿಸುವುದು ನಮ್ಮಿಂದ ಸಾಧ್ಯ

—ನ್ಯಾ. ರಾನಡೆ

ಪರಸ್ಪರ ಪ್ರೀತಿಯನ್ನು ಹೃದಯ ಅರಿಯದಿಲ್ಲದ ಹೊರತು ಮಾತಿನಿಂದ ವಿವರಿಸಲು ಅಸಾಧ್ಯ.

—ಭವಭೂತಿ

ಈ ಜಗತ್ತೇ ಈಶ್ವರನು ಎಂಬ ಬುದ್ಧಿಯೊಂದಿಗೆ ಕೂಡಿದ ಲೋಕಸೇವೆಯು ಈಶ್ವರ ಉಪಾಸನೆ.

—ರಮಣಮಹರ್ಷಿ

ಎನ್. ಉಷಾರಾಣಿ

ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿ

"ಭಾರತಕ್ಕೆ ತರಬೇತಿ ಹೊಂದಿದ ಪತ್ರಿಕೋದ್ಯಮಿಗಳ ಅವಶ್ಯಕತೆ ಇದೆ" ಎಂದು ಭಾರತದ ಪ್ರಥಮ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದ್‌ರವರು 1955ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ಸಂಘಕ್ಕೆ ಕಳುಹಿಸಿದ ಒಂದು ಸಂದೇಶ ಇಂದಿಗೂ ಅರ್ಥಪೂರ್ಣವಾಗಿದೆ.

ಭಾರತದ ಪತ್ರಿಕಾ ಮಂಡಳಿಯು "ನಮ್ಮ ದೇಶದಲ್ಲಿ ಪತ್ರಿಕೋದ್ಯಮ ವೃತ್ತಿಗೆ ಅವಶ್ಯಕವಾದ ಮಾನವ ಸಂಪನ್ಮೂಲಗಳು ಹೇರಳವಾಗಿವೆ. ಆದರೆ ಇವುಗಳನ್ನು ವೃತ್ತಿಯ ಅವಶ್ಯಕತೆಗೆ ಬಳಸಿಕೊಳ್ಳಬೇಕಾದರೆ ಸರಿಯಾದ ಶಿಕ್ಷಣ ಹಾಗೂ ತರಬೇತಿಯನ್ನು ನೀಡಬೇಕಾಗುತ್ತದೆ" ಎಂದು ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿಗೆ ಹೆಚ್ಚಿನ ಮಾನ್ಯತೆ ಮತ್ತು ಪುರಸ್ಕಾರವನ್ನು ನೀಡಿದೆ.

ಇಂದು ಪತ್ರಿಕೋದ್ಯಮಿಗಳಿಗೆ ಶಿಕ್ಷಣ ಅವಶ್ಯಕ ಎನ್ನುವ ಬಗ್ಗೆ ಎರಡು ಮಾತಿಲ್ಲ. ಆದರೆ ಎಂತಹ ಶಿಕ್ಷಣ ನೀಡಬೇಕು ಎನ್ನುವ ಬಗ್ಗೆ ವಾದ ವಿವಾದ ಇದೆ. ನಮ್ಮ ಸಮೂಹ ಮಾಧ್ಯಮಗಳ ಅವಶ್ಯಕತೆಗೆ ತಕ್ಕಂತೆ ವಿದ್ಯಾರ್ಥಿಗಳನ್ನು ತಯಾರು ಮಾಡಲು ಈ ಕೇಂದ್ರಗಳು ಎಷ್ಟರಮಟ್ಟಿಗೆ ಸಫಲವಾಗಿದೆ ಅನ್ನುವುದು ಮೂಲ ಪ್ರಶ್ನೆ.

ಈ ನಿಟ್ಟಿನಲ್ಲಿ ಭಾರತದ ಪತ್ರಿಕೋದ್ಯಮ ಶಿಕ್ಷಣದ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಯುವುದು ಸಮಂಜಸ ಎಂದು ತೋರುತ್ತದೆ.

ಭಾರತದ ಪ್ರಪ್ರಥಮ ಪತ್ರಿಕೋದ್ಯಮ ಶಿಕ್ಷಣವನ್ನು ಡಾ|| ಅನಿಬೆಸೆಂಟರ ರಾಷ್ಟ್ರೀಯ ವಿಶ್ವವಿದ್ಯಾನಿಲಯವು 1910ರಲ್ಲಿ ಮದ್ರಾಸಿನಲ್ಲಿ ಪ್ರಾರಂಭಿಸಿತು. ಪತ್ರಿಕೋದ್ಯಮ ಶಿಕ್ಷಣದಲ್ಲಿ ಡಾ|| ಅನಿಬೆಸೆಂಟರಿಗೆ ಇದ್ದ ಕಾಳಜಿ ಡಾ|| ರವೀಂದ್ರನಾಥ ಟಾಗೂರು ಮತ್ತು ಶ್ರೀ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಆಸಕ್ತಿಯನ್ನು ಕೆರಳಿಸಿತು. ಮದ್ರಾಸಿನ ಅಡಿಯಾರ್‌ನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಮೇಲೆ ಪತ್ರಿಕೋದ್ಯಮವನ್ನು ಒಂದು ಅಧ್ಯಯನ ವಿಷಯವಾಗಿ ಪರಿಚಯಿಸಲಾಯಿತು. ತರಬೇತಿಗಾಗಿ 'ನ್ಯೂ ಇಂಡಿಯಾ' ಪತ್ರಿಕಾಲಯಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸಲಾಗುತ್ತಿತ್ತು. 1938ರಲ್ಲಿ ಅಲಿಘಡ್ ಮುಸ್ಲಿಂ ವಿಶ್ವವಿದ್ಯಾನಿಲಯವು

ಒಂದು ಡಿಪ್ಲೋಮ ತರಗತಿಯನ್ನು ಪ್ರಾರಂಭಿಸಿತು. ಭಾರತದಲ್ಲಿ ಸ್ಥಿರವಾದ ವೃತ್ತಿಪರ ತರಬೇತಿಯನ್ನು ಲಾಹೋರಿನ ಪಂಜಾಬ್ ವಿಶ್ವವಿದ್ಯಾನಿಲಯವು 1941ರಲ್ಲಿ ಪ್ರಾರಂಭಿಸಿತು. 1947ರ ಭಾರತ ವಿಭಜನೆಯ ನಂತರ ಪತ್ರಿಕೋದ್ಯಮ ವಿಭಾಗವನ್ನು ದೆಹಲಿಗೆ ಒಯ್ಯಲಾಯಿತು ಮತ್ತು 1962ರಲ್ಲಿ ಅದನ್ನು ಚಂಡಿಘಡಕ್ಕೆ ಸ್ಥಳಾಂತರಿಸಲಾಯಿತು.

1947 ರಿಂದ 1954ರ ವರೆಗೆ ಮದ್ರಾಸು, ಕಲ್ಕತ್ತಾ, ಮೈಸೂರು, ನಾಗಪುರ ಮತ್ತು ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ಅಸ್ತಿತ್ವಕ್ಕೆ ಬಂದಿತು. ಹತ್ತು ವರ್ಷಗಳ ನಂತರ ಅಂದರೆ 1964 ರಿಂದ 1985ರ ವರೆಗೆ ಸುಮಾರು 23 ವಿಶ್ವವಿದ್ಯಾನಿಲಯಗಳು ಪತ್ರಿಕೋದ್ಯಮ ಶಿಕ್ಷಣವನ್ನು ಪ್ರಾರಂಭಿಸಿದವು.

ಇದರ ಜೊತೆಗೆ ಅನೇಕ ಖಾಸಗಿ ಸಂಸ್ಥೆಗಳು ಪತ್ರಿಕೋದ್ಯಮದ ವಿವಿಧ ರಂಗಗಳಲ್ಲಿ ಶಿಕ್ಷಣವನ್ನು ಪ್ರಾರಂಭಿಸಿದವು. ಇವುಗಳಲ್ಲಿ ಪ್ರಮುಖವಾದುದ್ದು ಮುಂಬಯಿಯಲ್ಲಿ 1936ರಲ್ಲಿ ಸ್ಥಾಪಿಸಲಾದ ಅಮೆರಿಕನ್ ಸಂಸ್ಥೆ ಬಿ. ಜಿ. ಹಾರ್ನಿಮನ್ ಪತ್ರಿಕೋದ್ಯಮ ಕಾಲೇಜು. ಅಲ್ಲದೇ ಇಂದು ವಿಶಾಲವಾಗಿ ದೇಶದ ಎಲ್ಲಡೆ ಕಾಲೇಜು, ಕೇಂದ್ರಗಳನ್ನು ತೆರೆದು ಸಮೂಹ ಸಂವಹನದ ಕ್ಷೇತ್ರದಲ್ಲಿ ಶಿಕ್ಷಣಕೊಡುತ್ತಿರುವ ಭಾರತೀಯ ವಿದ್ಯಾಭವನ ಪ್ರಮುಖವಾದುದ್ದು. 1961ರಲ್ಲಿ ಮುಂಬಯಿಯಲ್ಲಿ ಸ್ಥಾಪಿತವಾದ ಈ ಕೇಂದ್ರವನ್ನು ರಾಜೇಂದ್ರ ಪ್ರಸಾದ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ ಮತ್ತು ಮ್ಯಾನೆಜ್‌ಮೆಂಟ್ ಎಂದು ಕರೆಯಲಾಗುತ್ತಿದೆ ಇಂದು ದೇಶದಲ್ಲಿ ಸುಮಾರು 30 ಕೇಂದ್ರಗಳನ್ನು ಹೊಂದಿರುವ ಈ ಸಂಸ್ಥೆ ಸಮೂಹ, ಸಂವಹನ, ಜಾಹಿರಾತು, ಜನಸಂಪರ್ಕ, ಮುದ್ರಣಕಲೆ, ವಾಣಿಜ್ಯ ಕಾರ್ಯನಿರ್ವಹಣೆ ಮುಂತಾದ ವಿಷಯಗಳಲ್ಲಿ ಡಿಪ್ಲೋಮ ಮತ್ತು ಸರ್ಟಿಫಿಕೇಟ್ ಶಿಕ್ಷಣವನ್ನು ನೀಡುತ್ತಿದೆ ಮುಂಬಯಿಯಲ್ಲಿನ ಸೇಂಟ್ ಜೇವಿಯರ್ ಸಂವಹನ ಸಂಸ್ಥೆ ಒಂದು ವರ್ಷ ಅವಧಿಯ ಡಿಪ್ಲೋಮ ಶಿಕ್ಷಣವನ್ನು ದೂರದರ್ಶನ ತಂತ್ರಜ್ಞಾನ ವಿಷಯದಲ್ಲಿ ನೀಡುತ್ತಿದೆ.

ಎಂಬತ್ತರ ಮಧ್ಯಂತರದಲ್ಲಿ ಕೇಂದ್ರ ಸರ್ಕಾರವು ನವದೆಹಲಿಯಲ್ಲಿ ಜಾಮಿಯ ಮಿಲಿಯ ಎಂಬ ಕೇಂದ್ರ ವಿಶ್ವವಿದ್ಯಾನಿಲಯದ ಸ್ಥಾನ ಹೊಂದಿರುವ ಸಂಸ್ಥೆಯನ್ನು ಸಮೂಹ ಮಾಧ್ಯಮಗಳಲ್ಲಿ ವಿಶೇಷ ತರಬೇತಿಗಾಗಿ ಸ್ಥಾಪಿಸಲಾಯಿತು. ಅತ್ಯಾಧುನಿಕ ಸಲಕರಣೆಗಳನ್ನು ಹೊಂದಿರುವ ಈ ಸುಸಜ್ಜಿತವಾದ ಸಂಸ್ಥೆ ಇಂದು ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಉತ್ತಮ ತರಬೇತಿ ನೀಡುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ನವದೆಹಲಿಯಲ್ಲಿನ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯದ ಸಂಪರ್ಕವಿಭಾಗವು ರಾಷ್ಟ್ರದಲ್ಲೆ ಸುಸಜ್ಜಿತವಾದ ಒಂದು ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿದೆ.

ಕೇಂದ್ರ ಸರಕಾರದ ತರಬೇತಿ ಸಾಧನೆಗಳಲ್ಲಿ ನವದೆಹಲಿಯ ಭಾರತೀಯ

ಸಮೂಹ ಸಂವಹನ ಸಂಸ್ಥೆ ಪ್ರಮುಖವಾದದ್ದು. ಇದನ್ನು 1965ರಲ್ಲಿ ಫೋರ್ಡ್ ಫೌಂಡೇಶನ್‌ನ ಆಶ್ರಯದಲ್ಲಿ ಸಮೂಹ ಸಂವಹನ ತಜ್ಞ ಡಾ ವಿಲ್‌ಬರ್ ಶ್ರಾಮ್ ರವರ ನೇತೃತ್ವದಲ್ಲಿ ರಚಿಸಲಾದ ಒಂದು ಅಧ್ಯಯನ ಸಮಿತಿಯ ಸಲಹೆ ಮೇರೆಗೆ ಸ್ಥಾಪಿಸಲಾಯಿತು. ಸಮೂಹ ಸಂವಹನ ಕ್ಷೇತ್ರದಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಮಾಡಿಕೊಡುವುದು, ಈ ಕ್ಷೇತ್ರದಲ್ಲಿ ಅಭಿವೃದ್ಧಿ ಸಂಶೋಧನೆ ಮತ್ತು ತರಬೇತಿ ಶಿಕ್ಷಣವನ್ನು ರಾಷ್ಟ್ರೀಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗುವ ಹಾಗೆ ಕೊಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶಗಳು.

ಪತ್ರಿಕೋದ್ಯಮ ಶಿಕ್ಷಣವನ್ನು ಅಂಚೆಯ ಮೂಲಕವೂ ನೀಡಲಾಗುತ್ತಿದೆ. ರಾಜಾಸ್ಥಾನ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳು, ಮುಂಬಯಿಯ ಮತ್ತು ಆಂಧ್ರ ಪ್ರದೇಶದ ಮುಕ್ತ ವಿಶ್ವವಿದ್ಯಾನಿಲಯ ಇವುಗಳು ನಡೆಸುತ್ತಿರುವ ಅಲ್ಪಾವಧಿಯ ಡಿಪ್ಲೋಮ ಮತ್ತು ಸರ್ಟಿಫಿಕೇಟ್ ಶಿಕ್ಷಣ ಪ್ರಮುಖವಾದುದು.

ಕರ್ನಾಟಕ ರಾಜ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪ್ರಪ್ರಥಮವಾಗಿ 1951ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮ ವಿಷಯವನ್ನು ಪದವಿ ಮಟ್ಟದಲ್ಲಿ ಪರಿಚಯಿಸಲಾಯಿತು. ಸ್ನಾತಕೋತ್ತರ ಮಟ್ಟದಲ್ಲಿ 1972ರಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣವನ್ನೂ ಪ್ರಾರಂಭಿಸಲಾಯಿತು. ಇಂದು ಕರ್ನಾಟಕ ರಾಜ್ಯದಲ್ಲಿ ಮೈಸೂರು, ಬೆಂಗಳೂರು, ಧಾರವಾಡ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಮಟ್ಟದಲ್ಲಿ ಪತ್ರಿಕೋದ್ಯಮದ ಅಧ್ಯಯನ ನಡೆಸಲು ಅವಕಾಶವಿದೆ.

ನಲವತ್ತರ ದಶಕದಲ್ಲಿ ನಮ್ಮ ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣವು ಕಾರ್ಯನಿರತ ಪತ್ರಕರ್ತರ ವಿರೋಧವನ್ನು ಎದುರಿಸಬೇಕಾಯಿತು. ಅಂದು ಪತ್ರಕರ್ತರಿಗೆ ಶಿಕ್ಷಣ ಮತ್ತು ತರಬೇತಿ ಅವಶ್ಯಕ ಎಂದು ನಂಬಿದವರು ಬೆರಳೆಣಿಸುವಷ್ಟು ಮಂದಿ. ಪತ್ರಿಕೋದ್ಯಮಿಗಳನ್ನು ತಯಾರುಮಾಡಲು ಪತ್ರಿಕಾಲಯಗಳೇ ಸೂಕ್ತ ಎಂಬ ವಾದ ಇತ್ತೀಚಿನವರೆಗೂ ಇತ್ತು. ಆದರೆ ಇಂದು ಎಲ್ಲವೂ ಬದಲಾಗಿದೆ. ಪತ್ರಿಕೋದ್ಯಮ ಕ್ಷೇತ್ರ ಇಂದು ವಿಶಾಲವಾಗಿ ಬೆಳೆದಿದೆ. ಬರೀ ಪತ್ರಿಕೆಗಳೆ ಅಲ್ಲದೆ ಜನಸಂಪರ್ಕ, ಜಾಹಿರಾತು, ರೇಡಿಯೊ, ದೂರದರ್ಶನ ಹಾಗೂ ಸಂಶೋಧನೆ ವಿಷಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿರುವುದು ಇಂದು ಪತ್ರಿಕೋದ್ಯಮ ತರಬೇತಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ.

ಪತ್ರಿಕೋದ್ಯಮವು ಒಂದು ವೃತ್ತಿ. ಅದಕ್ಕೆ ಬೇಕಾಗುವ ತಂತ್ರಗಳನ್ನು ತರಬೇತಿಯಿಂದಲೇ ಪಡೆಯಬೇಕು. ಪತ್ರಿಕಾಲಯದ ವಾತಾವರಣವನ್ನು ಒಂದು ತರಗತಿಯ ನಾಲ್ಕು ಗೋಡೆಗಳ ಮಧ್ಯ ನಿರ್ಮಿಸಲು ಸಾಧ್ಯವಿಲ್ಲ ಎಂಬುದು ನಿಜ. ಆದರೆ ಪತ್ರಿಕೋದ್ಯಮಿಗಳು ಬರೀ ತಂತ್ರಜ್ಞಾನಿಗಳಾಗಿದ್ದರೆ ಸಾಲದು. ಅವರುಗಳು ಮಾನಸಿಕವಾಗಿ ಶಿಸ್ತುಗಾರರಾಗಿರಬೇಕು, ಪ್ರಜ್ಞಾಶೀಲತೆ ಮತ್ತು ಬೌದ್ಧಿಕ ಚಿಂತನೆ

ಮಾಡುವಷ್ಟು ಪ್ರತಿಭಾವಂತರಾಗಿರಬೇಕು. ಇದು ವ್ಯವಸ್ಥಾನುಸಾರವಾದ ತರಬೇತಿಯಿಂದ ಮಾತ್ರ ಸಾಧ್ಯ. ವರದಿಗಾರರು ಮತ್ತು ಉಪಸಂಪಾದಕರು ಇಂದು ಶೀಘ್ರಲಿಪಿಗಾರರಂತೆ ಬರೀ ತಂತ್ರಜ್ಞಾನಿಗಳಾಗಿದ್ದರೆ ಸಾಲದು. ಅವರುಗಳು ಸಮೂಹ ಸಂವಹನ ವ್ಯವಸ್ಥೆಯ ಬಗ್ಗೆ ಸಮಗ್ರವಾದ ವೈಜ್ಞಾನಿಕ ಶಿಕ್ಷಣವನ್ನು ಪಡೆದಿರಬೇಕು. ವೃತ್ತಿಪರ ತರಬೇತಿ ಮತ್ತು ಒಳ್ಳೆಯ ಶಿಕ್ಷಣ ಒಬ್ಬ ಡಾಕ್ಟರ್ ಅಥವಾ ಎಂಜಿನಿಯರಿಂಗ್‌ಗೆ ಎಷ್ಟು ಅವಶ್ಯಕವೋ ಒಬ್ಬ ಪತ್ರಿಕೋದ್ಯಮಿಯನ್ನು ತಯಾರುಮಾಡಲು ಶಿಕ್ಷಣ ಮತ್ತು ತರಬೇತಿ ಅಷ್ಟೆ ಅವಶ್ಯಕ

ಇಂದಿನ ಸಮೂಹ ಸಂಪರ್ಕ ಕ್ಷೇತ್ರವು ಅಪಾರ ಪ್ರಗತಿಸಾಧಿಸಿದೆ. ಕಂಪ್ಯೂಟರ್ ತಂತ್ರಜ್ಞಾನದಿಂದ ಸಮೂಹ ಮಾಧ್ಯಮಗಳು ಅಪಾರ ಬದಲಾವಣೆ ಕಂಡಿವೆ. ಇಂದು ಪತ್ರಿಕೋದ್ಯಮ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳು ಕಂಪ್ಯೂಟರ್, ರಿಮೋಟ್ ಕಂಟ್ರೋಲ್, ಡಿಜಿಟಲ್ ಟೆಲಿವಿಷನ್‌ಗಳ ಬಳಕೆಯ ಪರಿಚಯುವಿರುವವರು. ಅವರುಗಳು ಸಮೂಹ ಸಂವಹನ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಜ್ಞಾನಾರ್ಜನೆ ಮತ್ತು ಅವುಗಳನ್ನು ಸೂಕ್ತರೀತಿಯಲ್ಲಿ ಬಳಸುವ ಬಗ್ಗೆ ಮಾರ್ಗದರ್ಶನ ಪಡೆಯಲು ಈ ಕ್ಷೇತ್ರಕ್ಕೆ ಬರುತ್ತಾರೆ. ಸುದ್ದಿ ವ್ಯವಸ್ಥೆಯ ಬಗ್ಗೆ ವೈಜ್ಞಾನಿಕ ಶಿಕ್ಷಣ ಪಡೆಯುವುದು ಅವರ ಪ್ರಮುಖ ಉದ್ದೇಶಗಳಲ್ಲೊಂದು. ಇದನ್ನು ಕೇವಲ ಪತ್ರಿಕಾಲಯಗಳು ಮಾತ್ರ ನೀಡಲು ಸಾಧ್ಯವಿಲ್ಲ.

ಇಂದು ಸುಮಾರು 50ಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ಪತ್ರಿಕೋದ್ಯಮ ಶಿಕ್ಷಣ ನೀಡುತ್ತಿದ್ದಾಗಿಯೂ ಅದರ ಗುಣಮಟ್ಟದ ಬಗ್ಗೆ ಕೊರತೆ ಇರುವುದು ವಿಷಾದನೀಯ ಅನೇಕ ಲೋಪದೋಷಗಳು ಈ ಶಿಕ್ಷಣ ಕ್ಷೇತ್ರದ ಪ್ರಗತಿಯನ್ನು ಕುಂಟಿತಗೊಳಿಸಿದೆ.

ಮೊದಲನೆಯದಾಗಿ ನಮ್ಮ ದೇಶದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ನೀಡುತ್ತಿರುವ ಶಿಕ್ಷಣದಲ್ಲಿ ಸಾಮರಸ್ಯ ಮತ್ತು ಸಮಾನತೆ ಇಲ್ಲದಿರುವುದು. ಪಠ್ಯಕ್ರಮದಲ್ಲಿ ಅಪಾರ ವ್ಯತ್ಯಾಸವಿದ್ದು ಅವುಗಳನ್ನು ಅಭ್ಯಸಿಸಲು ವಿಶೇಷವಾದ ಸೌಲಭ್ಯಗಳ ಕೊರತೆಯನ್ನು ನಾವಿಂದು ಅನೇಕ ವಿಭಾಗಗಳಲ್ಲಿ ಕಾಣಬಹುದು ಒಂದೊಂದು ವಿಭಾಗವನ್ನು ಒಂದೊಂದು ಹೆಸರಿನಲ್ಲಿ ಕರೆಯಲಾಗಿದೆ. ನಮ್ಮ ರಾಜ್ಯದಲ್ಲಿನ ನಾಲ್ಕು ಪ್ರಮುಖ ವಿಶ್ವವಿದ್ಯಾನಿಲಯಗಳು ನಾಲ್ಕು ವಿವಿಧ ರೀತಿಯ ಶಿಕ್ಷಣ ನೀಡುತ್ತಿರುವುದೇ ಇದಕ್ಕೆ ಸಾಕ್ಷಿ. 1984ರಲ್ಲಿ ಯು.ಜಿ.ಸಿ. ವತಿಯಿಂದ ನಡೆಸಲಾದ ಕಾರ್ಯಾಗಾರದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಏಕರೂಪದ ಪಠ್ಯಕ್ರಮ, ಸೌಲಭ್ಯಗಳು ಮತ್ತು ತರಬೇತಿಯ ನೀತಿಯನ್ನು ತಜ್ಞರು ಸೂಚಿಸಿದ್ದರೂ ಈವರೆಗೆ ಅದನ್ನು ಕಾರ್ಯರೂಪಕ್ಕೆ ತರಲು ಯಾವ ಪ್ರಯತ್ನ ಮಾಡದಿರುವುದು ದುರದೃಷ್ಟಕರ.

ಪತ್ರಿಕೋದ್ಯಮ ಇಲಾಖೆಗಳಲ್ಲಿ ಒಂದು ಪ್ರಾಯೋಗಿಕ ಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡುವ ಉದ್ದೇಶದಿಂದ ತರಲಾಗುತ್ತಿದೆ.

ಕೆಲವೆಡೆ ಇದನ್ನು ವಿಶ್ವವಿದ್ಯಾನಿಲಯಗಳ ಮುದ್ರಣಾಲಯದಿಂದ ತರುವ ವ್ಯವಸ್ಥೆಯಿದೆ. ಮತ್ತೆ ಕೆಲವು ಕಡೆ ಇದನ್ನು ಖಾಸಗಿ ಮುದ್ರಣಾಲಯದಿಂದಲೂ ತಗಲು ಅವಕಾಶವಿದೆ. ಇದು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

ಇಷ್ಟೇ ಅಲ್ಲದೆ ಹೆಚ್ಚಿನ ಪ್ರಾಯೋಗಿಕ ತರಬೇತಿಗಾಗಿ ವಿದ್ಯಾರ್ಥಿಗಳನ್ನು ದೊಡ್ಡ ಪತ್ರಿಕಾಲಯಗಳಲ್ಲಿ 4 ರಿಂದ 12 ವಾರಗಳ ತರಬೇತಿ ನೀಡುವ ವ್ಯವಸ್ಥೆ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ಈ ನಿಟ್ಟಿನಲ್ಲಿ ಪತ್ರಿಕಾಲಯಗಳು ನಮ್ಮ ವಿದ್ಯಾರ್ಥಿಗಳಿಗೆ ತರಬೇತಿ ಪಡೆಯಲು ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದರೂ ಕೆಲವು ಪತ್ರಿಕೆಗಳು ಈ ವ್ಯವಸ್ಥೆಯಲ್ಲಿ ಸಹಕಾರ ನೀಡದಿರುವುದು ವಿಷಾದನೀಯ. ನಮ್ಮ ದೇಶದ ಪ್ರಮುಖ ಪತ್ರಿಕೆಗಳಲ್ಲಿ ಒಂದಾದ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಪ್ರಬಲ ಶಕ್ತಿಯಾಗಿ ಹೋರಾಡುತ್ತಿರುವುದು ಸರಿಯಷ್ಟೆ. ಆದರೆ ಬೆಂಗಳೂರಿನಲ್ಲಿರುವ ಈ ಪತ್ರಿಕಾಲಯವು ಈಗ್ಗೆ ಹಲವು ವರ್ಷಗಳಿಂದ ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ತಿರಸ್ಕರಿಸಿ ಪತ್ರಿಕೋದ್ಯಮ ಶಿಕ್ಷಣದ ಬಗ್ಗೆ ಅಸಡ್ಡೆ ತೋರಿದೆ. ಇಂದು ಡಾಕ್ಟರ್‌ಗಳಿಗೆ ಪ್ರಾಯೋಗಿಕ ತರಬೇತಿ ನೀಡಲು ಆಸ್ಪತ್ರೆಗಳು ಎಷ್ಟು ಮುಖ್ಯವೋ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ತರಬೇತಿಗಾಗಿ ಪತ್ರಿಕಾಲಯಗಳು ಅಷ್ಟೆ ಮುಖ್ಯ. ಈ ಪರಿಸ್ಥಿತಿಯಲ್ಲಿ ಪತ್ರಿಕಾಲಯಗಳ ಸಹಕಾರವನ್ನು ಶಿಕ್ಷಣ ಸಂಸ್ಥೆಗಳು ಬಯಸುವುದು ಅತಿ ಸ್ವಾಭಾವಿಕ.

ಅಮೆರಿಕಾದಂತಹ ರಾಷ್ಟ್ರದಲ್ಲಿ ಪತ್ರಿಕೆಗಳು ಪತ್ರಿಕೋದ್ಯಮ ಶಿಕ್ಷಣಕ್ಕೆ ಅಪಾರ ಧನ ಸಹಾಯ ಮತ್ತು ಸೌಕರ್ಯಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಒದಗಿಸಿಕೊಟ್ಟಿವೆ. ಅಮೆರಿಕಾದಲ್ಲಿ ಜೋಸೆಫ್ ಪುಲಿಟಜರನು ಕೊಲಂಬಿಯಾ ಪತ್ರಿಕೋದ್ಯಮ ಶಾಲೆಯನ್ನು ಸ್ಥಾಪಿಸಲು ಒಂದು ಮಿಲಿಯನ್ ಡಾಲರ್ ಹಣವನ್ನು ಕೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು. ಭಾರತದಲ್ಲಿ ಒಂದು ದೊಡ್ಡ ಪತ್ರಿಕಾಸಂಸ್ಥೆ 5 ಲಕ್ಷ ರೂ.ಗಳನ್ನು ದೆಹಲಿ ವಿಶ್ವವಿದ್ಯಾನಿಲಯಕ್ಕೆ ಮ್ಯಾನೆಜ್‌ಮೆಂಟ್ ಅಧ್ಯಯನದ ಅಭಿವೃದ್ಧಿಗಾಗಿ ಕೊಟ್ಟಿತೆ ವಿನಃ ಪತ್ರಿಕೋದ್ಯಮ ಶಿಕ್ಷಣಕ್ಕಾಗಿ ಬಿಡಿಗಾಸು ಕೂಡ ಬಿಚ್ಚಲಿಲ್ಲ. ಇನ್ನೊಂದು ಘಟನೆಯ ಪ್ರಕಾರ ಒಂದು ಪ್ರತಿಷ್ಠಿತ ಪತ್ರಿಕಾ ಸಂಸ್ಥೆ ಪತ್ರಿಕೋದ್ಯಮ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸುವ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಯೋಜನೆ ಪ್ರಾರಂಭಿಸಿತು. ಆದರೆ ಆ ಚಿನ್ನದ ಪದಕ ಪಡೆದ ವಿದ್ಯಾರ್ಥಿಯನ್ನು ಅದೇ ವೃತ್ತಪತ್ರಿಕೆಯು ನೌಕರಿ ಕೊಡಲು ನಿರಾಕರಿಸಿದ್ದು ಪತ್ರಿಕೋದ್ಯಮ ಶಿಕ್ಷಣ ಪಡೆದ ವಿದ್ಯಾರ್ಥಿಗಳ ದುಃಸ್ಥಿತಿಗೆ ಜ್ವಲಂತ ಸಾಕ್ಷಿ. ಅಮೆರಿಕಾದ ಪತ್ರಿಕಾ ಸಂಸ್ಥೆಗಳಂತೆ ನಮ್ಮಲ್ಲೂ ಪತ್ರಿಕಾಲಯಗಳು ಧನಸಹಾಯ ಮತ್ತು ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದರೆ ಇಂದು ಆರ್ಥಿಕವಾಗಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವನ್ನೇ ನಂಬಿಕುಳಿತಿರುವ ಪತ್ರಿಕೋದ್ಯಮ ವಿಭಾಗಗಳು ಒಂದು ಬೆರಳಚ್ಚು ಯಂತ್ರಕ್ಕಾಗಿ ವರ್ಷಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಒದಗುತ್ತಿರಲಿಲ್ಲ.

ಇಂದು ಕೇಂದ್ರ ಮತ್ತು ರಾಜ್ಯಸರ್ಕಾರಗಳು ನೇಮಕಾತಿ ವಿಷಯದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೆ ಆದ್ಯತೆ ಕೊಡುತ್ತಿರುವುದು ಒಂದು ಸಂತೋಷದ ಸಂಗತಿ. ಅದೇ ರೀತಿ ನಮ್ಮ ಪತ್ರಿಕಾಲಯಗಳು ಕೂಡ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಮಾತ್ರ ಆದ್ಯತೆಯನ್ನು ಕಡ್ಡಾಯವಾಗಿ ಕೊಡುವುದಾದರೆ ಮಾತ್ರ ಶಿಕ್ಷಣರಂಗ ಕ್ಕೊಂದು ಮಾನ್ಯತೆ ದೊರೆಯುತ್ತದೆ.

ಈ ತರಬೇತಿಯ ಮತ್ತೊಂದು ಕೊರತೆ ಸಂಶೋಧನೆ ರಂಗದಲ್ಲಿ ಸುರಿತ, ಅಂಗೀಕೃತ ಮಾರ್ಗದರ್ಶಿಗಳ ಕೊರತೆ ಈ ಕ್ಷೇತ್ರದ ಸಂಶೋಧನೆಯನ್ನು ಕುಂಟಿತ ಗೊಳಿಸಿದೆ. ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲು ಕೂಡ ರಾಷ್ಟ್ರೀಯ ಮಟ್ಟದಲ್ಲಿ ಒಂದು ಪ್ರತಿಷ್ಠಿತ ನಿಯತಕಾಲಿಕ ಇಲ್ಲದಿರುವುದು ಸಂಶೋಧಕರಿಗೆ ಒಂದು ಬಲವಾದ ಪೆಟ್ಟು. ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಈ ರಂಗದಲ್ಲಿ ನಡೆಯುವ ಸಂಶೋಧನೆಯ ವಿವರಗಳು ಅಧ್ಯಾಪಕರಿಗೇ ಆಗಲೀ ಅಥವಾ ನಮ್ಮ ಸಂಪರ್ಕ ನೀತಿ ಗಳನ್ನು ಸೃಷ್ಟಿಸುವ ಅಧಿಕಾರಿಗಳನ್ನಾಗಲೀ ಮುಟ್ಟುವುದೇ ಇಲ್ಲ. ಇದರಿಂದಾಗಿ ಪ್ರತಿಭಾವಂತ ವಿದ್ಯಾರ್ಥಿಗಳ ಪರಿಣತಿ ವ್ಯರ್ಥವಾಗುತ್ತಿದೆ.

ಬ್ರಿಟನ್ ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣದ ಮಾರ್ಗದರ್ಶನಕ್ಕೆಂದೆ ತಜ್ಞರ, ಶಿಕ್ಷಕರ ಮತ್ತು ಪತ್ರಕರ್ತರುಗಳಿರುವ ರಾಷ್ಟ್ರೀಯ ಮಂಡಳಿಯೊಂದಿದೆ. ಅಮೆರಿಕಾದಲ್ಲಿ ಪತ್ರಿಕೋದ್ಯಮ ಶಿಕ್ಷಣ ವಿಶ್ವವಿದ್ಯಾನಿಲಯಗಳ ಹೊಣೆಗಾರಿಕೆಯಾಗಿದೆ. ಭಾರತ ದಲ್ಲಿ ಪತ್ರಿಕೋದ್ಯಮ ಶಿಕ್ಷಣಕ್ಕೊಂದು ರಾಷ್ಟ್ರೀಯ ಅಧ್ಯಯನ ಮಂಡಳಿಯನ್ನು ಎರಡನೆ ಪತ್ರಿಕಾ ಆಯೋಗದ ಸಲಹೆ ಮೇರೆಗೆ ರಚಿಸಬೇಕೆಂಬ ಬೇಡಿಕೆ ಬಹಳ ದಿನ ಗಳಿಂದ ಇದ್ದರೂ ಕೂಡ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಅಂತಹ ಮಂಡಳಿ ಯೊಂದು ರಚಿತವಾದರೆ ಈ ಶಿಕ್ಷಣಕ್ಕೊಂದು ಮಾರ್ಗದರ್ಶನ ದೊರೆಯುವುದಲ್ಲದೆ ಗುಣಮಟ್ಟ ಕಾಪಾಡಿಕೊಳ್ಳುವುದಕ್ಕೂ ಸಹಾಯಕಾರಿಯಾಗುತ್ತದೆ.

ಭಾರತದಲ್ಲಿ ಪತ್ರಿಕೋದ್ಯಮ ಅಧ್ಯಾಪಕರು ಪಡೆದುಕೊಂಡಿರುವ ಶಿಕ್ಷಣಕ್ಕೂ ಅವರು ನೀಡಬೇಕಾಗಿರುವ ಶಿಕ್ಷಣಕ್ಕೂ ಬಹಳ ಅಂತರವಿದೆ. ಈ ಕ್ಷೇತ್ರದಲ್ಲಿ ಅಭಿವೃದ್ಧಿಗೆ ತಕ್ಕಂತೆ ಸೂಕ್ತ ಆಧುನಿಕ ಸಲಕರಣೆ ಹಾಗೂ ಸೌಕರ್ಯಗಳನ್ನು ಕೊಡುವ ಹಾಗೆ ಅಧ್ಯಾಪಕರ ತರಬೇತಿಗೆ ಕೂಡ ಗಮನಹರಿಸಬೇಕು. ನಮ್ಮಲ್ಲಿನ ಬಹುತೇಕ ಪತ್ರಿಕೋದ್ಯಮ ಶಿಕ್ಷಣ ತಜ್ಞರು ಅಮೆರಿಕಾದಲ್ಲಿ ಶಿಕ್ಷಣ ಪಡೆದವರು. ಅಲ್ಲಿಯ ಶಿಕ್ಷಣ ಮಟ್ಟಕ್ಕೆ ಇಲ್ಲಿಯ ಶಿಕ್ಷಣವನ್ನು ತರಲು ಪ್ರಯತ್ನಿಸಿ ಸೋತು ಅಮೆರಿಕಾಕ್ಕೆ ವಾಪಸ್ಸು ಹೋಗಿರುವವರು ಬಹಳ ಮಂದಿ. ಮತ್ತೆ ಕೆಲವು ತಜ್ಞರು ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. ಇಂದು ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿ ಉತ್ಸಾಹ ಭರಿತ, ಪ್ರಜ್ಞಾವಂತ ಯುವಪೀಳಿಗೆಯ ಹೊಣೆಯಾಗಿದ್ದು ಇವರಿಗೆ ಹಿರಿಯ ತಜ್ಞರ ಮಾರ್ಗದರ್ಶನವಿಲ್ಲದೆ ತಮ್ಮದೇ ಆದ ಚಿಂತನೆ, ಮನೋಧರ್ಮದ ಮೇಲೆ ಈ ಶಿಕ್ಷಣ ಕ್ಕೊಂದು ಹೊಸರೂಪ ಕೊಡಲು ಶ್ರಮಿಸುತ್ತಿದ್ದಾರೆ. ಇವರಿಗೆ ಬೇಕಾದ್ದು ಪತ್ರಿಕೋದ್ಯಮಿಗಳ ಪ್ರೋತ್ಸಾಹ ಮತ್ತು ಮನ್ನಣೆ. ಆಗಲೇ ಅವರ ಪರಿಶ್ರಮ ಸಾರ್ಥಕ.

ಪುಸ್ತಕ ವಿಮರ್ಶೆ

ಮಧುಗಿರಿಯ ಇತಿಹಾಸ : ಲೇ : ಎಂ. ಡಿ. ಶ್ರೀನಿವಾಸ್ ; ಸುಧಾ ಪ್ರಕಾಶನ, ಮಧುಗಿರಿ, 1987. ಬೆಲೆ ರೂ. 20–00.

ಮಧುಗಿರಿಯನ್ನು ಕುರಿತ ಈ ಐತಿಹಾಸಿಕ ಕೃತಿ ಸ್ಥಳೀಯ ಇತಿಹಾಸವನ್ನು ಕುರಿತು ಇತ್ತೀಚೆಗೆ ಬಂದಿರುವ ಒಂದು ಗಮನಾರ್ಹವಾದ ಗ್ರಂಥವಾಗಿದೆ ಈ ರೀತಿಯ ಸ್ಥಳೀಯ ಚಾರಿತ್ರಿಕ ಕೃತಿಗಳ ಅಧ್ಯಯನ ಪ್ರಕಟಣೆಗಳು ಬಹು ವಿರಳವಾಗಿರುವ ಈ ಕಾಲದಲ್ಲಿ ಎಂ. ಡಿ. ಶ್ರೀನಿವಾಸ್‌ರವರ ಮಧುಗಿರಿ ಇತಿಹಾಸ ಸ್ವಾಗತಾರ್ಹವಾಗಿದೆ. ಈ ಗ್ರಂಥದಲ್ಲಿ ಲೇಖಕರು ಮಧುಗಿರಿ ಮತ್ತು ದುರ್ಗದ ಪರಿಚಯವನ್ನು ಮಾಡಿಕೊಟ್ಟು ಅನಂತರ ಮಧುಗಿರಿಯಲ್ಲಿ ಆಳಿದ ಪ್ರಭುಗಳ ಆಳ್ವಿಕೆಯ ಇತಿಹಾಸವನ್ನು ನಿರೂಪಿಸಿದ್ದಾರೆ. ಅನಂತರ ಮಧುಗಿರಿಯಲ್ಲಿರುವ ವಿವಿಧ ದೇವಾಲಯಗಳನ್ನೂ, ಧಾರ್ಮಿಕ ಕೇಂದ್ರಗಳನ್ನೂ ವಿವರಿಸಿದ್ದಾರೆ. ಅನಂತರ ಮಧುಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿರುವ ಪ್ರಮುಖ ಶಾಸನಗಳನ್ನು ಉಲ್ಲೇಖಿಸಿದ್ದಾರೆ. ಈ ಪ್ರದೇಶದ ಜನಪದ ಕಲೆಗಳನ್ನೂ ವಾಸ್ತುಶಿಲ್ಪವನ್ನೂ ಲೇಖಕರು ಮುಂದಿನ ಅಧ್ಯಾಯದಲ್ಲಿ ಪರಿಚಯಿಸಿಕೊಡುತ್ತಾರೆ. ಕಡೆಯದಾಗಿ ಮಧುಗಿರಿಯ ಕಲಾವಿದರ ಪರಿಚಯವನ್ನು ನೀಡುತ್ತಾರೆ.

ಈ ಗ್ರಂಥವನ್ನು ಬರೆಯಲು ಲೇಖಕರು ಲಭ್ಯವಿರುವ ಬಹುತೇಕ ಆಧಾರಗಳನ್ನು ಉಪಯೋಗಿಸಿಕೊಂಡು ಕ್ರಮಬದ್ಧವಾಗಿ ಅಷ್ಟೇ ಸರಳವಾದ ಲಲಿತವಾದ ಶೈಲಿಯಲ್ಲಿ ಗ್ರಂಥವನ್ನು ರಚಿಸಿದ್ದಾರೆ. ಮಧುಗಿರಿಬೆಟ್ಟ ವಿಶ್ವದಲ್ಲಿ ಏಕಾಗ್ರ ಶಿಲೆಯ ಬೆಟ್ಟಗಳ ಸಾಲಿನಲ್ಲಿ ಎರಡನೆಯ ಸ್ಥಾನವನ್ನು ಪಡೆದಿರುವುದು ಮಾತ್ರವಲ್ಲ ಇದು ಒಂದು ಪ್ರಮುಖ ಆಯಕಟ್ಟಿನ ಸ್ಥಳವಾಗಿದ್ದು ಮಧ್ಯಯುಗದಲ್ಲಿ ಕರ್ನಾಟಕದ ಒಂದು ಮುಖ್ಯ ರಾಜಕೀಯ ಕೇಂದ್ರವು, ಸಾಂಸ್ಕೃತಿಕ ಕೇಂದ್ರವು ಆಗಿ ಮೆರೆದಿದೆ. ಇಲ್ಲಿ ಆಳಿದ ನಾಯಕರು ತಮ್ಮ ಶೌರ್ಯ ಸಾಹಸ ಪರಾಕ್ರಮಗಳಿಗಾಗಿ ಪ್ರಸಿದ್ಧರಾಗಿದ್ದಾರೆ. ಈ ಗ್ರಂಥದ ಲೇಖಕರು ಮಧುಗಿರಿಯ ಪ್ರಾಚೀನ ಕಾಲದ ವೈಭವವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ. ಇವರು ಮಧುಗಿರಿ ಪಟ್ಟಣದ ನಕ್ಷೆಯನ್ನು ನೀಡಿರುವುದಲ್ಲದೆ ಪುರಾತನ "ಮದ್ದಗಿರಿ" ಪಟ್ಟಣದ ವಿವಿಧ ಭಾಗಗಳ ನಕ್ಷೆಯನ್ನು ಪುಸ್ತಕದಲ್ಲಿ ಸೇರಿಸಿ ಬಹು ಉಪಯುಕ್ತವಾದ ಕಾರ್ಯವನ್ನು ಮಾಡಿದ್ದಾರೆ. ಮಧುಗಿರಿಯಲ್ಲಿ ಆಳಿದ ವಿವಿಧ ವಂಶಗಳ ಆಳರಸರ ಇತಿಹಾಸವನ್ನು ಕ್ರಿ.ಶ. 8ನೆಯ ಶತಮಾನದಿಂದ ಹಿಡಿದು 20ನೆಯ ಶತಮಾನದವರೆಗೂ ಕಾಲಾನುಕ್ರಮವಾಗಿ ವಿವರಿಸಿದ್ದಾರೆ. ಇನ್ನು ಮಧುಗಿರಿ ನಾಡಿನ ಮಹಾನಾಡ ಪ್ರಭುಗಳ ವಂಶವೃಕ್ಷವನ್ನು ಚಿತ್ರಿಸಿ 15ನೆಯ

ಶತಮಾನದಿಂದ ಇಂದಿನವರೆಗೂ ಆ ವಂಶಸ್ಥರ ಇತಿಹಾಸವನ್ನು ನಿರೂಪಿಸಿದ್ದಾರೆ. ಮಧುಗಿರಿಯ ವಿವಿಧ ಐತಿಹಾಸಿಕ ಸ್ಮಾರಕಗಳಲ್ಲದೆ, ಈ ತಾಲ್ಲೂಕಿನ ಕೆಲವು ಪ್ರಮುಖ ಸ್ಥಳಗಳ ಪರಿಚಯವನ್ನು ಇಲ್ಲಿ ನೀಡಿದ್ದಾರೆ. ಹೀಗೆ ಇವರ ಗ್ರಂಥವು ನೈಸರ್ಗಿಕ, ಸಾಹಿತ್ಯಕ, ಧಾರ್ಮಿಕ, ಜೀವನದ ಪ್ರಮುಖ ಅಂಶಗಳನ್ನು ಇಲ್ಲಿ ಆಳಿದ ಚಾರಿತ್ರಿಕ ವ್ಯಕ್ತಿಗಳ ಸಾಧನೆಗಳನ್ನು ಒಳಗೊಂಡಿದೆ. ಮಧುಗಿರಿ ಪ್ರದೇಶದ ಸಾಂಸ್ಕೃತಿಕ ಜೀವನವನ್ನು ವಿವರಿಸುತ್ತಾ ಅನೇಕ ಶತಮಾನಗಳಿಂದ ಈ ಪ್ರದೇಶದಲ್ಲಿ ಜರುಗುತ್ತಿದ್ದ ಉತ್ಸವಗಳು ಹಬ್ಬಹರಿದಿನಗಳನ್ನು ಚಿತ್ರಿಸಿದ್ದಾರೆ. ಮಧುಗಿರಿಯ ಪ್ರಮುಖ ದೇವಾಲಯಗಳ, ಮೂರ್ತಿಗಳ, ಮಂದಿರಗಳ, ಚಿತ್ರಗಳು, ಸ್ಥಳಪುರಾಣಗಳೂ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿವೆ. ಶ್ರೀ ಎಂ. ಡಿ. ಶ್ರೀನಿವಾಸ್ ಅವರು ಹಲವಾರು ವರ್ಷಗಳ ಪರಿಶ್ರಮದಿಂದ ಈ ಗ್ರಂಥವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ಅವರು ತಮ್ಮ ಉತ್ಸಾಹದಲ್ಲಿ ಹಲವಾರು ಅಂಶಗಳನ್ನು ಮರೆತಿರುವುದನ್ನು ಕೆಲವು ಶಾಸ್ತ್ರೀಯ ಅಂಶಗಳನ್ನು ಕುರಿತು ಬರೆಯುವಾಗ ತಪ್ಪು ಮಾಡಿರುವುದನ್ನು ಗಮನಿಸಬಹುದು. ಅವರ ಗ್ರಂಥದಲ್ಲಿ ಕೆಲವಾರು ಪುನರಾವರ್ತನೆಗಳನ್ನು ನೋಡಬಹುದು. ಕೆಲವು ಸ್ಥಳ ಪುರಾಣಗಳನ್ನೂ, ದಂತಕತೆಗಳನ್ನೂ, ಇತಿಹಾಸವೆನ್ನುವಂತೆಯೇ ನಿರೂಪಿಸುತ್ತಾ ಹೋಗಿದ್ದಾರೆ. ಶಾಸನವನ್ನು ಕುರಿತ ಅವರ ಅರ್ಥ ವಿವರಣೆ ಸರಿಯಾಗಿಲ್ಲ. ಇಂತಹ ಕೆಲವು ಸಣ್ಣ ಪುಟ್ಟ ದೋಷಗಳಿದ್ದರೂ ಗ್ರಂಥವು ಅನೇಕ ಉಪಯುಕ್ತ ಅಂಶಗಳನ್ನು ಒಳಗೊಂಡು ಸ್ವಾರಸ್ಯವಾಗಿ ರಚಿಸಲ್ಪಟ್ಟಿದೆ. ಮಧುಗಿರಿಯ ಪಾಳೆಯಗಾರರ ರಾಜಕೀಯದೊಂದಿಗೆ, ಅದರ ಸಾಂಸ್ಕೃತಿಕ ಹಿನ್ನೆಲೆಯನ್ನು ಒಳಗೊಂಡಿರುವ ಈ ಗ್ರಂಥ ಸ್ಥಳೀಯ ಇತಿಹಾಸದಲ್ಲಿ ಆಸಕ್ತಿಯಿರುವವರಿಗೆಲ್ಲ ಉಪಯುಕ್ತವಾದ ಕೃತಿಯಾಗಿದೆ.

ಕರ್ಣಾಟಕವನ್ನಾಳಿದ ಅನೇಕ ನಾಡಪ್ರಭುಗಳನ್ನು ಕುರಿತು, ರಾಜಕೀಯ, ಸಾಂಸ್ಕೃತಿಕ ಕೇಂದ್ರಗಳನ್ನು ಕುರಿತು ಚಾರಿತ್ರಿಕ ಗ್ರಂಥಗಳು ಹೆಚ್ಚು ಹೆಚ್ಚು ಹೊರ ಬಂದರೆ ನಮ್ಮ ನಾಡಿನ ಇತಿಹಾಸದ ಪೂರ್ಣಚಿತ್ರ ಸಿಗುವಂತಾಗುತ್ತದೆ.

—ಸಿ. ಎಸ್. ಶಾಮಲಾಂಬಿಕ

ಕೆ.ಸಂ. ೩೦೧೭೦—ಎಂ.ಯು.ಪಿ.ಎಂ.—೪೨೫ ಪ್ರತಿಗಳು—೧೫–೧೧–೮೯

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬